ತ. ವೆಂ. ಸ್ಮಾರಕ ಗ್ರಂಥಮಾಲೆ

ಕೃಷ್ಣಮೂರ್ತಿಪುರಂ : : ಮೈಸೂರು-೪

ಕನ್ನಡ ಮಹಾಭಾರತ
ಉದ್ಯೋಗಪರ್ವ ಸಂಗ್ರಹ

ಸಂಪಾದಕರು

ತ. ಸು. ಶಾಮರಾಯ, ಎಂ.ಎ.

ತ. ವೆಂ. ಸ್ಮಾರಕ ಗ್ರಂಥಮಾಲೆ
ಕೃಷ್ಣಮೂರ್ತಿಪುರಂ : ಮೈಸೂರು-4

ಮೊದಲನೆಯ ಮುದ್ರಣ : ೧೯೪೬
ತಿದ್ದಿದ ಎರಡನೆಯ ಮುದ್ರಣ : ೧೯೪೭
ಮೂರನೆಯ ಮುದ್ರಣ : ೧೯೪೮
ನಾಲ್ಕನೆಯ ಪರಿಷ್ಕೃತ ಮುದ್ರಣ : ೧೯೫೦
ಐದನೆಯ ಪರಿಷ್ಕೃತ ಮುದ್ರಣ : ೧೯೫೩
ಆರನೆಯ ಪರಿಷ್ಕೃತ ಮುದ್ರಣ : ೧೯೫೫
ಏಳನೆಯ ಪರಿಷ್ಕೃತ ಮುದ್ರಣ : ೧೯೬೨

ಬೆಲೆ: ರೂ. ೨-೩೦

ಮುದ್ರಕರು
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
ಮೈಸೂರು

ವಿಷಯಸೂಚಿಕೆ

ಮುನ್ನುಡಿ

ಈ ಮಾಲೆಯ ಎರಡನೆಯ ಗ್ರಂಥವಾದ 'ಉದ್ಯೋಗಪರ್ವ ಸಂಗ್ರಹ' ನಾವು ಕೈಕೊಂಡಿರುವ ಕನ್ನಡ ಮಹಾಭಾರತ ಸಂಗ್ರಹದ ಮೊದಲನೆಯ ಸಂಪುಟ. ಈ ಸಂಗ್ರಹದ ವಿಷಯವಾಗಿ ಕೆಲವು ಮಾತುಗಳನ್ನು ವಾಚಕರ ಗಮನಕ್ಕೆ ತರಬಯಸುತ್ತೇವೆ.

'ವ್ಯಾಸಮಹರ್ಷಿ'ಗಳಿಂದ ಪ್ರಣೀತವಾದ ಸಂಸ್ಕೃತ ಮಹಾಭಾರತ ವಿಶ್ವಸಾಹಿತ್ಯದಲ್ಲಿ ಬಹುಗಣ್ಯಸ್ಥಾನವನ್ನು ಗಳಿಸಿಕೊಂಡಿರುವ ಒಂದು ಮಹಾಕಾವ್ಯ. ಭರತಖಂಡದ ಸಾಹಿತ್ಯಶ್ರೇಣಿಯಲ್ಲಂತೂ ಅದಕ್ಕೆ ಅಗ್ರಸ್ಥಾನವೇ ಮೀಸಲಾಗಿದೆ. ಕನ್ನಡ ವಾಙ್ಮಯವೂ ಅದರ 'ಲೋಕಪೂಜ್ಯತೆ'ಗೆ ಅಪೋಹ ತಂದಿಲ್ಲ. ಕನ್ನಡ ಸಾಹಿತ್ಯ—ಈಗ ನಮಗೆ ತಿಳಿದಿರುವ ಮಟ್ಟಿಗೆ—ಭಾರತದ ಸೃಷ್ಟಿಯಿಂದಲೇ ಮೊದಲಾಯಿತು. ಅಂದಿನಿಂದಲೂ ನಮ್ಮ ಜನ ಭಕ್ತಿ ಶ್ರದ್ಧೆಗಳಿಂದ, ಗೌರವದಿಂದ ಅದನ್ನು ಓದುತ್ತ ಬಂದಿದ್ದಾರೆ. ಹಲವಾರು ಕನ್ನಡ ಕವಿಗಳು ಬೇರೆಬೇರೆ ದೃಷ್ಟಿಕೋನಗಳಿಂದ ಆ ಕಾವ್ಯವನ್ನು ಪರಿಶೀಲಿಸಿ ತಮ್ಮ ತಮ್ಮ ವಿಶಿಷ್ಟ ಶೈಲಿಗಳಿಂದ ಅದನ್ನು ಬರೆದಿಟ್ಟಿದ್ದಾರೆ. ಈ ವಿವಿಧ ಭಾರತಗಳ ಸಾಲಿನಲ್ಲಿ ಅತ್ಯಂತ ಜನಪ್ರಿಯವಾದ ಕಾವ್ಯ 'ಗದುಗಿನ ಭಾರತ.'

ಗದುಗಿನ ಭಾರತ ಅಥವಾ ನಾರಣಪ್ಪನ ಭಾರತ ಬೃಹತ್ತು ಮಹತ್ತುಗಳೆರಡರಲ್ಲಿಯೂ ಅನುಪಮವಾದ ಗ್ರಂಥ. ಅದರ ಮಹತ್ತನ್ನು ಕಂಡು ಮನ್ನಣೆ ಮಾಡಬೇಕಾದುದೇ. ಆದರೆ ಅದರ ಬೃಹತ್ತನ್ನು ಕಂಡರೆ ಬೆದರಿಕೆಯಾಗುತ್ತದೆ. ಕಾವ್ಯ ಹುಟ್ಟಿ ಐದು ಶತಮಾನಗಳ ಮೇಲಾಗಿದೆ. ಅಂದಿಗೂ ಇಂದಿಗೂ ಜನರ ಸಾಹಿತ್ಯಾಭಿರುಚಿಯಲ್ಲಿ ಅಜಗಜಾಂತರ ವ್ಯತ್ಯಾಸ ಕಂಡುಬರುವುದರಿಂದ ಈ ದೊಡ್ಡ ಕಾವ್ಯವನ್ನು ಸಂಗ್ರಹಿಸಿಕೊಡುವುದು ಈಗ ಮೊದಲು ನಡೆಯಬೇಕಾದ ಕೆಲಸವಾಗಿದೆ. ಈ ಉದ್ದೇಶ ಸಾಧನೆಗಾಗಿಯೇ ನಾವು ಈ ಸಂಗ್ರಹಕಾರ್ಯವನ್ನು ಕೈಕೊಂಡಿದ್ದೇವೆ. ಕನ್ನಡ ಮಹಾಭಾರತದ ಕಥಾಸರಣಿ ಕೆಡದಂತೆ, ಒಟ್ಟು ಕಥೆಯ ಸ್ವಾರಸ್ಯಕ್ಕೆ, ಪಾತ್ರ ನಿರೂಪಣಕ್ಕೆ ಭಂಗಬಾರದಂತೆ, ಅವಶ್ಯವಾದ ವರ್ಣನೆಯ ಮತ್ತು ವಿವರಣೆಯ ಸಾರ ಬಿಟ್ಟುಹೋಗದಂತೆ, ಎಲ್ಲಕ್ಕೂ ಮಿಗಿಲಾಗಿ ಕವಿಯ ವ್ಯಕ್ತಿತ್ವಕ್ಕೂ ಮತ್ತು ಆತನ ವಿಶೇಷ ಪ್ರತಿಭೆಗೂ ಲೋಪಬರದಂತೆ ಈ ಸಂಗ್ರಹ ಕಾರ್ಯವನ್ನು ಮಾಡಬೇಕೆಂಬುದೇ ನಮ್ಮ ಗುರಿ. ಈ ಉದ್ಯೋಗಪರ್ವ ಸಂಗ್ರಹದಲ್ಲಿ ಈ ಗುರಿಯನ್ನು ಬಹುಮಟ್ಟಿಗೆ ಸಾಧಿಸಿರುವೆವೆಂಬ ಭರವಸೆ ನಮಗಿದೆ.

ನಾವು ಕೈಗೊಂಡಿರುವ ಈ ಭಾರತ ಸಂಗ್ರಹ 'ವೆಂಕಣ್ಣಯ್ಯನವರ ಸ್ಮಾರಕ ಗ್ರಂಥಮಾಲೆ'ಯಲ್ಲಿ ಅಚ್ಚಾಗಿ ಪ್ರಕಟವಾಗುವುದು ಉಚಿತವಾಗಿಯೇ ಇದೆ. ಗದುಗಿನ ಭಾರತ ವೆಂಕಣ್ಣಯ್ಯನವರಿಗೆ ಅಚ್ಚುಮೆಚ್ಚಾದ ಕಾವ್ಯ. ಅವರು ಅದನ್ನು ಸಂಪಾದಿಸಿ, ಅಚ್ಚುಕಟ್ಟಾಗಿ ಮುದ್ರಿಸಬೇಕೆಂಬ ಉದ್ದೇಶದಿಂದ ಈ ಕಾವ್ಯದ ಹಲವಾರು ಓಲೆಯ ಪ್ರತಿಗಳನ್ನು ಸಂಪಾದಿಸಿಟ್ಟಿದ್ದರು; ಭಾರತದ ಕೈಬರಹದ ಪ್ರತಿಯೊಂದನ್ನು ಪ್ರತಿ

ಮಾಡಿಸಿದ್ದರು. ಅವರು ಪ್ರತಿಮಾಡಿಸಿದ್ದ ಕೈಬರಹದ ಪ್ರತಿಯಲ್ಲಿ ನಾಲ್ಕು ಪರ್ವಗಳು —ಆದಿ, ಅರಣ್ಯ, ಉದ್ಯೋಗ, ವಿರಾಟ ಈಗ ದೊರೆತಿವೆ. ಈ ಉದ್ಯೋಗಪರ್ವದ ಪ್ರತಿಯಿಂದ ನಮ್ಮ ಕಾರ್ಯಕ್ಕೆ ತುಂಬ ನೆರವು ದೊರಕಿತು.

ಕುಮಾರವ್ಯಾಸನನ್ನು ಜನಸಾಮಾನ್ಯಕ್ಕೆ ಪರಿಚಯ ಮಾಡಿಕೊಡಲು ಸಿದ್ಧಪಡಿಸಿರುವ ಈ ಸಂಗ್ರಹದಲ್ಲಿ ಪಾಠಾಂತರಗಳನ್ನು ಗುರುತು ಮಾಡುವುದು ಅನವಶ್ಯವೆಂದು ತೋರಿ ಬಂದ ಕಾರಣ ಅವನ್ನು ಗುರುತು ಮಾಡುವ ಗೋಜಿಗೇ ಹೋಗಿಲ್ಲ. ಆದರೂ ಈ ಸಂಗ್ರಹದ ಪಾಠವನ್ನು ಒಂದು ಕೈಬರಹದ ಪ್ರತಿಯಿಂದಲೂ, ನಾಲ್ಕು ಓಲೆಯ ಪ್ರತಿಗಳ ಸಹಾಯದಿಂದಲೂ ತಿದ್ದಿದೆ. ಇವುಗಳ ಪರಿಚಯವನ್ನಿಲ್ಲಿ ಸ್ಥೂಲವಾಗಿ ಮಾಡಿಕೊಟ್ಟಿದೆ. ಕೈಬರಹದ ಪ್ರತಿ, ಮೈಸೂರು ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟಿನಲ್ಲಿರುವ ಕ ೨೦೫ನೆಯ ನಂಬರಿನ ಓಲೆಯ ಪ್ರತಿಕೃತಿ. ಕ್ರಿ. ಶ. ೧೫೫೮ರಲ್ಲಿ ಹುಟ್ಟಿದ ಈ ಪ್ರತಿ ಇದುವರೆಗೆ ನಮಗೆ ದೊರೆತಿರುವ ಕನ್ನಡ ಮಹಾಭಾರತದ ಕೈಬರಹದ ಪ್ರತಿಗಳಲ್ಲಿ ಅತ್ಯಂತ ಪ್ರಾಚೀನವಾದುದು. ಇದರ ಪಾಠವನ್ನೇ ಇಲ್ಲಿ ಸಾಮಾನ್ಯವಾಗಿ ಅಂಗೀಕರಿಸಿದೆ. ಈ ಕೈಬರಹದ ಪ್ರತಿಯಲ್ಲಿ ಇನ್ನೆರಡು ಓಲೆಯ ಪ್ರತಿಗಳ ಪಾಠಾಂತರ ದೊರಕುತ್ತದೆ. ಶ್ರೀ ಆರ್. ಬಿ. ಪ್ರೋದ್ದಾರ್ ಅವರು ಕೊಟ್ಟ ಕಾರವಾರಿನ ಪ್ರತಿಗೆ ಕಾ ಎಂಬ ಗುರುತನ್ನು ಈ ಕೈಬರಹದ ಪ್ರತಿಯಲ್ಲಿಟ್ಟುಕೊಂಡಿದೆ. ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಕೊಟ್ಟ ಅಳಿಲುಘಟ್ಟದ ಪ್ರತಿಗೆ ಗ ಎಂಬ ಚಿಹ್ನೆಯನ್ನು ಬಳಸಿದೆ.

ನಮ್ಮಲ್ಲಿರುವ ನಾಲ್ಕು ಓಲೆಯ ಪ್ರತಿಗಳಲ್ಲಿ ಒಂದಕ್ಕೆ ಕ ಎಂಬ ಗುರುತನ್ನಿಟ್ಟುಕೊಂಡಿದ್ದೇವೆ. ಈ ಗ್ರಂಥವನ್ನು ಪ್ರತಿಮಾಡಿದ ಕಾಲವನ್ನು ಇದರಲ್ಲಿ ಹೇಳಿಲ್ಲ. ಭಾರತದ ಆದಿಪಂಚಕವೂ, ಭೀಷ್ಮ ಪರ್ವದ ಸ್ವಲ್ಪಭಾಗವೂ ಇದರಲ್ಲಿದೆ. ಶಕಟರೇಫವನ್ನು ಇಲ್ಲಿ ತಪ್ಪುತಪ್ಪಾಗಿ ಬಳಸಿದೆ. ಗ ಎಂಬ ಇನ್ನೊಂದು ಪ್ರತಿಯಲ್ಲಿ ದಶಪರ್ವಗಳು ಸಮಗ್ರವಾಗಿ ದೊರೆಯುವುವಲ್ಲದೆ ಐರಾವತವೆಂಬ ಕಾವ್ಯವೂ ಉಂಟು. ಗ್ರಂಥವನ್ನು ಪ್ರತಿ ಮಾಡಿದ ಕಾಲವನ್ನು ಇಲ್ಲಿ ಹೇಳಿಲ್ಲ. ಇನ್ನೊಂದು ಓಲೆಯ ಪ್ರತಿ ಶಾ. ಶ. ೧೭೩೮ ರಲ್ಲಿ ಚಿಕ್ಕಜಾಜೂರಿನಲ್ಲಿ ತಯಾರಾದದ್ದು. ಇದೇ ನಮ್ಮ ಜ ಪ್ರತಿ. ಇದರಲ್ಲಿ ಅಧಿಕ ಪದ್ಯಗಳುಂಟು. ಹತ್ತು ಪರ್ವಗಳ ಸಮಗ್ರವಾದ ಪ್ರತಿ ಇದು. ಹೊಳಲಕೆರೆಯ ಶ್ರೀ ಎ. ಎಸ್. ಕೃಷ್ಣ ಶೆಟ್ಟರು ಕೊಟ್ಟ ಹ ಗುರುತಿನ ಪ್ರತಿಯಲ್ಲಿ ಈ ಪರ್ವದ ಎರಡು ಸಂಧಿಗಳು ಮಾತ್ರ ದೊರಕುತ್ತವೆ. ಜ ಮತ್ತು ಹ ಪ್ರತಿಯ ಮೂಲ ಒಂದೇ ಎಂದು ತೋರುತ್ತದೆ. ಏಕೆಂದರೆ ಇವುಗಳಲ್ಲಿ ದೊರಕುವ ಪಾಠ ಒಂದೇ ಆಗಿದೆ.

ಕೈಬರಹದ ಪ್ರತಿ, ಓಲೆಯ ಪ್ರತಿಗಳು, ಮುದ್ರಿತ ಪ್ರತಿಗಳು, ಇವೆಲ್ಲವನ್ನೂ ಇಟ್ಟುಕೊಂಡು ಸಂಪಾದನೆಯ ಕಾರ್ಯವನ್ನು ಆದಷ್ಟು ಶ್ರದ್ಧೆಯಿಂದ ನಡೆಸಿದೆ. ಮೊದಲನೆಯ ಮುದ್ರಣಕ್ಕಿಂತ ಇದು ಬಹುಮಟ್ಟಿಗೆ ಉತ್ತಮವಾಗಿದೆಯೆಂಬ ನಂಬಿಕೆ ನಮಗುಂಟು. ಇದರಲ್ಲಿ ಲೋಪದೋಷಗಳುಂಟೆಂಬ ಅರಿವು ನಮಗೇ ಉಂಟಾಗಿದೆ. ಮುದ್ರಣದಿಂದ ಮುದ್ರಣಕ್ಕೆ ಅವು ನೇರ್ಪಾಗಬೇಕು.

ಮೊದಲನೆಯ ಮುದ್ರಣದಲ್ಲಿ ಶಕಟರೇಫವನ್ನು ಬಳಸಿರಲಿಲ್ಲ. ಈ ಮುದ್ರಣದಲ್ಲಿ ಅದನ್ನು ಉಚಿತವಾದೆಡೆಯಲ್ಲಿ ಬಳಸಿದೆ.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪಠ್ಯ ಪುಸ್ತಕನಿಯಾಮಕ ಸಮಿತಿಯವರು, ಈ ಸಂಗ್ರಹವನ್ನು ೧೯೪೯ನೆಯ ವರುಷದ ಇಂಟರ್‌ಮೀಡಿಯೆಟ್ ಪರೀಕ್ಷೆಗೆ ಪಠ್ಯ ಪುಸ್ತಕವನ್ನಾಗಿ ನಿಯಮಿಸಿದ ಕಾರಣ, ಇದನ್ನು ಎರಡನೆಯ ಬಾರಿ ಅಚ್ಚುಮಾಡಿಸುವ ಸುಯೋಗ ದೊರಕಿತು. ಇದಕ್ಕಾಗಿ ವಿಶ್ವವಿದ್ಯಾನಿಲಯಕ್ಕೂ, ಸಮಿತಿಯ ಸದಸ್ಯರಿಗೂ ನಾವು ಅತ್ಯಂತ ಕೃತಜ್ಞರಾಗಿದ್ದೇವೆ.

ಕೆಲವು ಕಡೆ ನಮಗುಂಟಾದ ಸಂದೇಹಗಳನ್ನು ನಿವಾರಿಸಿಕೊಟ್ಟ ನಮ್ಮ ವಿದ್ಯಾಗುರುಗಳಾದ ಪ್ರೊ॥ ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ., ಅವರಿಗೆ ನಮ್ಮ ಅನಂತ ವಂದನೆಗಳು.

ಈ ಸಂಗ್ರಹ ಕಾರ್ಯಕ್ಕೆ ನಮ್ಮ ಗುರುಗಳ ಆಶೀರ್ವಾದ ಸಂಪೂರ್ಣವಾಗಿದೆಯೆಂದು ನಮ್ಮ ಭಾವನೆ. ಈ ಸಂಗ್ರಹ ಜನಪ್ರಿಯವಾದರೆ ನಮ್ಮ ಶ್ರಮ ಸಾರ್ಥಕವಾಯಿತೆಂದು ಭಾವಿಸುತ್ತೇವೆ.

ಮೈಸೂರು

೨೦–೬–೧೯೪೭ ತ. ಸು. ಶಾಮರಾಯ

ಪೀಠಿಕೆ

೧. ಕವಿ ಚರಿತ್ರೆ

ಮಹಾಕವಿ ನಾರಣಪ್ಪನ ಕಾಲ, ಮತಗಳ ವಿಚಾರದಲ್ಲಿ ಭಿನ್ನಾಭಿಪ್ರಾಯವಿದ್ದು, ವಿಪುಲವಾದ ಚರ್ಚೆ ನಡೆದಿದೆ. ಇಲ್ಲಿ ಆ ಚರ್ಚೆಯ ಗೋಜಿಗೆ ಹೋಗದೆ, ಬಹುಜನ ಸಮ್ಮತವಾದ ಒಂದು ನಿರ್ಧಾರಕ್ಕೆ ನಾವೂ ಶರಣು ಹೋಗುತ್ತೇವೆ.

ನಾರಣಪ್ಪನ ಕಾಲ ಕ್ರಿ. ಶ. ೧೫ನೆಯ ಶತಮಾನದ ಪೂರ್ವಾರ್ಧವೆಂದು ಶ್ರೀಮಾನ್ ಮಂಜೇಶ್ವರ ಗೋವಿಂದ ಪೈ ಅವರು ನಿರ್ಧರಿಸಿದ್ದಾರೆ,[1] ಅವರು ಕೊಡುವ ಕಾರಣಗಳು ಸ್ಥೂಲವಾಗಿ ಇಷ್ಟು—

೧. ಗದುಗಿನ ವೀರನಾರಾಯಣಸ್ವಾಮಿ ದೇವಸ್ಥಾನದಲ್ಲಿರುವ ಕ್ರಿ. ಶ. ೧೫೩೯ರ ಶಾಸನ ಒಂದರಲ್ಲಿ 'ಕುಮಾರವ್ಯಾಸ' ಎಂಬ ಹೆಸರನ್ನು ಸ್ಪಷ್ಟವಾಗಿ ತಿಳಿಸಿರುವುದ ರಿಂದಲೂ, ಕುಮಾರವ್ಯಾಸನು ರಚಿಸದೆ ಬಿಟ್ಟ ಇತರ ಪರ್ವಗಳನ್ನು ಕೃಷ್ಣರಾಯ (ಕ್ರಿ. ಶ. ೧೫೦೯-೧೫೩೯)ನ ಅಪ್ಪಣೆಯ ಮೇರೆಗೆ ತಾನು ರಚಿಸಿದೆನೆಂದು ತಿಮ್ಮಣ್ಣ ಕವಿ ತನ್ನ ಶಾಂತಿಪರ್ವದಲ್ಲಿ ಹೇಳಿಕೊಂಡಿರುವುದರಿಂದಲೂ ನಾರಣಪ್ಪನು ಕ್ರಿ. ಶ. ೧೫೦೦ಕ್ಕೂ ಹಿಂದಿನವನೆಂಬುದು ಸ್ಪಷ್ಟವಾಗಿದೆ.

೨. ನಾರಣಪ್ಪ ತನ್ನ ಕಾವ್ಯದಲ್ಲಿ, ದ್ರೌಪದೀ ಸ್ವಯಂವರಕ್ಕೆ 'ಮಹೇಶ್ವರ ಜೈನ ಭೈರವ ಬುದ್ಧ ಲಿಂಗಿಗಳು' ಬಂದಿದ್ದರೆಂದು ಹೇಳಿದ್ದಾನೆ. 'ಲಿಂಗಿ' ಎಂದು ವ್ಯವಹರಿ ಸಿರುವುದು ಬಸವೇಶ್ವರನ ಸಂಪ್ರದಾಯದ ಲಿಂಗವಂತರಾದ ವೀರಶೈವರನ್ನೇ. ಅಲ್ಲದೆ ತನ್ನ ಕಾವ್ಯದಲ್ಲಿ ಅಲ್ಲಲ್ಲಿ ಬಲ್ಲಾಳದಡ್ಡಿ, ಬಲ್ಲಾಳನಾಥ ಎಂಬ ಮಾತುಗಳನ್ನು ಕವಿ ಬಳಸಿದ್ದಾನೆ. ಇದು ಹೊಯ್ಸಳರ ವೀರಬಲ್ಲಾಳನನ್ನು ಸೂಚಿಸುತ್ತದೆ. ಈ ಕಾರಣ ಗಳಿಂದ ಕವಿ ಕ್ರಿ. ಶ. ೧೨೦೦ ರಿಂದ ಈಚೆಯವನಾಗಿರಬೇಕು.

೩. ನಾರಣಪ್ಪ ಕ್ರಿ. ಶ. ೧೨೯೦ ರಿಂದ ೧೫೦೦ರ ಮಧ್ಯದಲ್ಲಿ ಯಾವಾಗ ಇದ್ದ ನೆಂಬುದನ್ನು ನಿರ್ಧರಿಸಲು, ಆತನ ಕಾವ್ಯದ ಆಂತರಿಕ ಪ್ರಮಾಣಗಳನ್ನು ಪರಿಶೀಲಿಸ ಬೇಕು.

(ಅ) ಭಾರತದಲ್ಲಿ ಮರಾಠೀ ಭಾಷೆಯ ಅನೇಕ ಮಾತುಗಳು ಬಳಕೆಯಾಗಿವೆ. ಅಲ್ಲದೆ ಈಗ ಪ್ರಥಮೈಕ ವಚನದಲ್ಲಿ ಅಕಾರಾಂತವಾಗಿರತಕ್ಕ ನಾಮವಾಚಕಗಳು ಉಕಾರಾಂತವಾಗಿ ಪ್ರಯೋಗವಾಗಿರುವ ಅಚ್ಚ ಮರಾಠೀ ವಿಭಕ್ತಿರೂಪಗಳನ್ನೊಳ ಗೊಂಡ ಒಂದು ಇಡೀ ಷಟ್ಪದಿಯೇ ಭೀಷ್ಮಪರ್ವದ ನಾಲ್ಕನೆಯ ಸಂಧಿ ೭೦ನೆಯ ಪದ್ಯದಲ್ಲಿ ಕಂಡುಬರುತ್ತದೆ[2] ಈ ಬಗೆಯಾದ ರೂಪ ಕ್ರಿ. ಶ. ೧೨೯೦ರಲ್ಲಿ ರಚಿತವಾದ 'ಜ್ಞಾನೇಶ್ವರಿ' ಎಂಬ ಮರಾಠೀ ಗ್ರಂಥದಲ್ಲಿಯೂ ಕಂಡುಬರುತ್ತದೆ. ಮುಂದೆ ಕೆಲವು

---

[1] ಕುಮಾರವ್ಯಾಸ ಪ್ರಶಸ್ತಿ, ಕಾಲವಿಚಾರ.

[2] ಈ ಪದ್ಯ ನಮ್ಮಲ್ಲಿರುವ ಕೈಬರಹದ ಪ್ರತಿಗಳಲ್ಲಿ ಕಂಡುಬರುವುದಿಲ್ಲ.

ವರ್ಷಗಳಲ್ಲಿಯೇ ಈ ಉಕಾರಾಂತ ಪ್ರಯೋಗ ಲುಪ್ತವಾಗಿ ಹೋಗಿದೆ. ಅದ್ದರಿಂದ ನಾರಣಪ್ಪ ೧೪೫೦ರ ಸರಿಸುಮಾರಿನಲ್ಲಿ ಇದ್ದಿರಬೇಕು.

(ಆ) ಕುಮಾರವ್ಯಾಸ ಭಾರತದಲ್ಲಿ ತುರುಕರು, ಸಾಹಣಸಮುದ್ರ, ಹಸಣ, ತೆಂಕಣಚೇದಿ, ಸಮುದ್ರಹೋಸಲ–ಇತ್ಯಾದಿ ರಾಜ್ಯಗಳ ರಾಜರು ವ್ಯವಹೃತರಾಗಿದ್ದಾರೆ. ಈ ಮಾತುಗಳು ಸಂಸ್ಕೃತ ಭಾರತದಲ್ಲಿ ಎಲ್ಲಿಯೂ ಕಂಡುಬರುವುದಿಲ್ಲ. ಸಾಹಣರೆಂದಿರುವವರು ದೇವಗಿರಿಯ ಯಾದವ ವಂಶದ ಅರಸರಾದ ಸೇಉಣರೇ ಎಂದು ತೋರುತ್ತದೆ. ಈ ವಂಶ ನಾಶವಾದದ್ದು ಕ್ರಿ. ಶ. ೧೩೧೮ರಲ್ಲಿ. ಸಮುದ್ರಹೋಸಲ ಎಂದು ಕರೆದಿರುವುದು ದ್ವಾರಸಮುದ್ರದ ಹೊಯ್ಸಳರನ್ನು ; ದ್ವಾರಸಮುದ್ರ ಕ್ರಿ. ಶ. ೧೩೧೦ರಲ್ಲಿ ತುರುಕರ ಕೊಳ್ಳೆಗೆ ಈಡಾಯಿತು ; ಕ್ರಿ. ಶ. ೧೩೩೭ರಲ್ಲಿ ಸಂಪೂರ್ಣವಾಗಿ ನಾಶವಾಯಿತು. ನಾರಣಪ್ಪ ಈ ಅರಸುಗಳನ್ನು ಕಂಡೋ ಕೇಳಿಯೋ ಇರಬೇಕು. ಅದ್ದರಿಂದ ಕವಿ ಆ ಕಾಲದ ಹಿಂಚು ಮುಂಚಿನವನಾಗಿರಬೇಕು.

(ಇ) ತುರುಷ್ಕ ಅಥವಾ ತುರುಕ ದೊರೆಯನ್ನು ಧರ್ಮರಾಜನ ಪಟ್ಟಾಭಿಷೇಕಕ್ಕೆ ಕರಸಿ ಕವಿ ತನ್ನ ಕಾವ್ಯದಲ್ಲಿ ಮನ್ನಣೆ ತೋರಿಸುವುದರಿಂದಲೂ ಎಲ್ಲಿಯೂ ಅವರ ಹಾವಳಿಯನ್ನು ವ್ಯಂಗ್ಯವಾಗಿ ಕೂಡ ಸೂಚಿಸಿಲ್ಲವಾದುದರಿಂದಲೂ ಈತನು ತುರುಕರ ಹಾವಳಿ ಕರ್ಣಾಟಕಕ್ಕೆ ಸೋಕುವ ಮುನ್ನವೇ ಇದ್ದವನಾಗಿರಬೇಕು.

(ಈ) ಕ್ರಿ. ಶ. ೧೨೧೩ರಲ್ಲಿ ಗದುಗು ಪ್ರಾಂತವು ಹೊಯ್ಸಳರ ಕೈತಪ್ಪಿ ಸೇಉಣರ ವಶವಾಯಿತು. ಕವಿಯು ತನ್ನ ಕಾವ್ಯದಲ್ಲಿ ವಿಪುಲವಾಗಿ ಮರಾಠೀ ಪದಗಳನ್ನು ಬಳಸಿರುವುದರಿಂದ, ಆತನು ೧೨೧೩ಕ್ಕೆ ಈಚೆಯಲ್ಲೇ ಕಾವ್ಯವನ್ನು ಬರೆದಿರಬೇಕು. ಆದರೆ ತಾನು ಸೇಉಣರ ರಾಜ್ಯದಲ್ಲಿದ್ದರೂ ತನ್ನ ಕಾವ್ಯದಲ್ಲಿ ಹೊಯ್ಸಳರಿಗೆ ಗೌರವ ತೋರಿಸುವುದರಿಂದ ಆತನ ನಾಡು ಹೊಯ್ಸಳರ ಕೈತಪ್ಪಿ ಇನ್ನೂ ಬಹಳ ಕಾಲವಾಗಿದ್ದಿರಲಾರದು ; ಹೆಚ್ಚೆಂದರೆ ೧೦–೧೨ ವರ್ಷಗಳಾಗಿರಬಹುದು.

ಆದ್ದರಿಂದ ನಾರಣಪ್ಪ ಕ್ರಿ. ಶ. ೧೨೩೦–೩೫ ರೊಳಗೆ ಇದ್ದಿರಬೇಕು.

ಮಹಾಕವಿಯೊಬ್ಬನು ತಮ್ಮವನೆಂದು ಹೇಳಿಕೊಳ್ಳುವುದು ಹೆಮ್ಮೆಯೇ ಸರಿ. ನಾರಣಪ್ಪ ವೀರಶೈವನೆಂದು, ಬ್ರಾಹ್ಮಣನೆಂದು—ಬ್ರಾಹ್ಮಣರಲ್ಲಿ ಸ್ಮಾರ್ತನೆಂದು, ವೈಷ್ಣವನೆಂದು, ಭಾಗವತ ಪಂಥದವನೆಂದು—ವಾದಮಾಡುವುದುಂಟು. ಇದ್ದುದನ್ನು ಇದ್ದಂತೆ ಕಂಡುಹಿಡಿಯಲು ಹೋಗಬೇಕೆಂಬ ದೃಷ್ಟಿ ಸಾಧುವಾದುದಾದರೂ ಅಂಧ ಶ್ರದ್ಧೆಯಿಂದ ಹುರಿಗೊಂಡು, ಕದನಕ್ಕೆ ಇಳಿಯುವುದು ಅಷ್ಟು ಉಚಿತವಾದುದಲ್ಲ. ನಾರಣಪ್ಪನಂತಹ ಮಹಾಕವಿ ನಮ್ಮ ನಾಡಿನವನೆಂಬ ದೊಡ್ಡತನವೇ ನಮಗೆ ಸಾಲದೆ? ಎಲ್ಲೆಡೆಯಿಂದಲೂ ಆಹಾರವನ್ನು ಹೀರಿ ಗಗನ ಚುಂಬಿತವಾಗಿ ನಿಂತಿರುವ ಭವ್ಯವೃಕ್ಷದಂತೆ, ಕವಿ ಎಲ್ಲ ಮತಗಳ, ಎಲ್ಲ ಧರ್ಮಗಳ ಸಾರವನ್ನು ಹೀರಿ, ತನ್ನ ಸಾರಸ್ವತ ಸಂಪತ್ತಿನಿಂದ ತೊಳಗಿ ಬೆಳಗುವನು. ಕುಮಾರವ್ಯಾಸನ ಕಾವ್ಯದಲ್ಲಿ ಸರ್ವ ಧರ್ಮಗಳು ಸಮನ್ವಯಗೊಂಡಿವೆ. ವಿಷ್ಣುವನ್ನು ಅನನ್ಯ ಭಕ್ತಿಯಿಂದ ಸ್ತುತಿಸುತ್ತಾನೆ ; ಹಾಗೆಯೇ ಶಿವನನ್ನು ಸ್ತುತಿಸುತ್ತಾನೆ. ಅವನ ಕಾವ್ಯದಲ್ಲಿ ಭಕ್ತಿಮಾರ್ಗವಿದೆ, ಕರ್ಮಮಾರ್ಗವಿದೆ, ಜ್ಞಾನಮಾರ್ಗವಿದೆ ; ದ್ವೈತವಿದೆ, ಅದ್ವೈತವಿದೆ, ವಿಶಿಷ್ಟಾದ್ವೈತವಿದೆ. ಅದ್ದರಿಂದ ಅತನನ್ನು ನಮ್ಮ ಮಟ್ಟಕ್ಕೆ ಎಳೆದು, ಜಾತಿಮತಗಳ ಸಂಕೋಲೆಯಲ್ಲಿ

ಬಿಗಿದು, 'ಇದಮಿತ್ಥಂ' ಎಂದು ಊಹೆಯಿಂದ ಹೇಳುವುದು ಸಾಹಸದ ಕೆಲಸ. ಹೆಸರೇನೊ ಆತನು ಬ್ರಾಹ್ಮಣನೆಂದು ಹೇಳಲು ಸಾಧಕವಾಗಿದೆ. ಸಕಲ ಶಾಸ್ತ್ರಗಮ ಪುರಾಣಾದಿಗಳನ್ನು ಕರತಲಾಮಲಕವಾಗಿ ಮಾಡಿಕೊಂಡಿದ್ದ ಬಹುದೊಡ್ಡ ವ್ಯಕ್ತಿ, ಆತ.

ಕವಿಯು ಹುಟ್ಟಿದೂರು ಕೋಳಿವಾಡವೆಂಬ ಒಂದು ಚಿಕ್ಕ ಗ್ರಾಮ. ಆ ಊರು ಆತನ ವಂಶದವರಿಗೆ ಉಂಬಳಿಯಾಗಿ ಬಂದಿತ್ತೆಂದು ಹೇಳುತ್ತಾರೆ. ಆತನು ಗದುಗಿನ ವೀರನಾರಾಯಣಸ್ವಾಮಿಯ ಅಂಕಿತದಲ್ಲಿ ತನ್ನ ಗ್ರಂಥವಾದ ಕನ್ನಡ ಭಾರತವನ್ನು ಬರೆದಿದ್ದಾನೆ. ಸಂಸ್ಕೃತ ಭಾರತದ ಮೊದಲ ಹತ್ತು ಪರ್ವಗಳ ಕಥೆಯನ್ನು ಮಾತ್ರ ಈತ ಕನ್ನಡಿಸಿದ್ದಾನೆ. ಅಲ್ಲಿಗೇ ಕಾವ್ಯ ಎಂಟು ಸಹಸ್ರ ಪದ್ಯಗಳಿಗಿಂತಲೂ ಹೆಚ್ಚಾಗಿ ಬೆಳೆದುಹೋಗಿದೆ. ನಾರಣಪ್ಪ ಭಾರತವನ್ನು ಮಾತ್ರವಲ್ಲದೆ ಐರಾವತವೆಂಬ ಮತ್ತೊಂದು ಕಾವ್ಯವನ್ನೂ ಬರೆದಿರುವನೆಂದು ಕವಿಚರಿತೆಕಾರರಾದ ದಿವಂಗತ ಆರ್. ನರಸಿಂಹಾಚಾರ್ಯರು ತಿಳಿಸುತ್ತಾರೆ.

ಮಹಾಕವಿ ನಾರಣಪ್ಪನನ್ನು ಆತನ ತರುವಾಯ ಬಂದ ಅನೇಕ ಕವಿಗಳು ಬಾಯಿ ತುಂಬ ಹೊಗಳಿದ್ದಾರೆ. ನಮ್ಮ ನಾಡಿನ ಅತ್ಯಂತ ಜನಪ್ರಿಯವಾದ ಕಾವ್ಯಗಳಲ್ಲಿ ಆತನ ಭಾರತವೂ ಒಂದು.

೨. ಕಾವ್ಯದ ಮೂಲ, ಅದರ ಹಿರಿಮೆ

ನಾರಣಪ್ಪನ ಕನ್ನಡ ಮಹಾಭಾರತಕ್ಕೆ ಮೂಲ ಸಂಸ್ಕೃತದ ಮಹಾಭಾರತ. ಇದರ ಕರ್ತೃ ವ್ಯಾಸಮಹರ್ಷಿಯೆಂದು ಪ್ರತೀತಿ. ಈತನ ಮತ್ತು ಈತನ ಕಾವ್ಯದ ಹಿರಿಮೆಯನ್ನು ಕವಿಯೊಬ್ಬನು 'ಜಗತ್ತಿನಲ್ಲಿ ಇರುವುದೆಲ್ಲವೂ ಭಾರತದಲ್ಲಿದೆ; ಭಾರತದಲ್ಲಿ ಇಲ್ಲದುದು ಜಗತ್ತಿನಲ್ಲಿ ಇಲ್ಲ' ಎಂದು ಹೇಳಿದ್ದಾನೆ. ಇದು ಪರಮಪೂಜ್ಯವಾದ ಧರ್ಮಗ್ರಂಥವೆಂದು ಪರಿಗಣಿತವಾಗಿದೆ. ಧರ್ಮವಿಷಯಕವಾದ ಅನೇಕ ಕ್ಲಿಷ್ಟ ಸಮಸ್ಯೆಗಳಿಗೆ ಇಲ್ಲಿ ಸದುತ್ತರ ದೊರೆಯುತ್ತದೆ. ಆದ್ದರಿಂದ, ಧರ್ಮಕ್ಕೆ ದೊಡ್ಡ ಆಧಾರವಾಗಿರುವ ಈ ಗ್ರಂಥವನ್ನು ಜನತೆ ಪಂಚಮವೇದವೆಂದು ಕರೆದು ಗೌರವಿಸಿದೆ. ಕಾವ್ಯದ ಮಧ್ಯದಲ್ಲಿ ಜನಮೇಜಯನಿಗೋ, ಧೃತರಾಷ್ಟ್ರನಿಗೋ, ಋಷಿಗಳಿಗೋ ಧರ್ಮವಿಷಯಕವಾದ ಸಂದೇಹ ಹುಟ್ಟಿದ ಕಡೆ, ಅದರ ನಿವಾರಣೆಗಾಗಿ ಧರ್ಮಜಿಜ್ಞಾಸೆ ನಡೆದಿದೆ. ರೋಮಹರ್ಷಣ, ಸನತ್ಸುಜಾತಾದಿಗಳು ತಮ್ಮ ಜ್ಞಾನವನ್ನು ಈ ಕಾವ್ಯಗಂಗೆಯಲ್ಲಿ ಸಂಗಮ ಮಾಡಿದ್ದಾರೆ; ಯಕ್ಷ, ನಹುಷ ಮೊದಲಾದವರು ಧರ್ಮದ ಪ್ರೌಢಪರೀಕ್ಷೆಯನ್ನು ನಡಸಿದ್ದಾರೆ. ಕಾವ್ಯದ ನಾಡಿ ನಾಡಿಯಲ್ಲಿಯೂ ಧರ್ಮರಸ ಹರಿಯುತ್ತಿದೆ. ಆದರೂ ಇದು ಬರಿಯ ಧರ್ಮಗ್ರಂಥವಲ್ಲ; ಒಂದು ಇತಿಹಾಸ. ಇದು ಭರತಖಂಡದ ಒಂದು ಕಾಲದ ನಾಗರಿಕತೆ ಸಂಸ್ಕೃತಿಗಳನ್ನು ಒಳಗೊಂಡು ಸಮಗ್ರ ಜನಜೀವನವನ್ನು ಅದ್ಭುತರೀತಿಯಲ್ಲಿ ವಿವರಿಸುತ್ತದೆ. ಇದನ್ನು ಹೇಳುತ್ತಿರುವ ವ್ಯಾಸ ಮಹರ್ಷಿ ಕುರುವಂಶ ಅಳಿದು ಹೋಗುತ್ತಿದ್ದಾಗ, ಅದಕ್ಕೆ ಜೀವಕಳೆ ಕೊಟ್ಟವನು; ಒಂದು ದೃಷ್ಟಿಯಿಂದ ಮೂಲಪುರುಷನಾಗಿದ್ದುಕೊಂಡು ಆ ವಂಶದ ಮೂರು ತಲೆಮಾರುಗಳ ಬಾಳು ಅಳಿವುಗಳನ್ನು ಕಣ್ಣಾರ ಕಂಡವನು. ಉತ್ತಮ ಇತಿಹಾಸಕಾರನಂತೆ ಸತ್ಯವನ್ನು ಸದಾ ದೃಷ್ಟಿಯಲ್ಲಿಟ್ಟುಕೊಂಡು, ಯಾವುದೊಂದು ಪಕ್ಷವನ್ನೂ ವಹಿಸದೆ

ಅನುಭವೈಕವೇದ್ಯವಾದುದನ್ನು ಕಾವ್ಯವಾಗಿ ಕಟ್ಟಿದ್ದಾನೆ; ಕೃತಕೃತ್ಯನಾಗಿದ್ದಾನೆ.

ರಾಮಾಯಣದ ಕವಿ ಆದಿಕವಿಯೆಂದು ಪ್ರಖ್ಯಾತನಾಗಿದ್ದರೂ—ಧರ್ಮ ಇತಿಹಾಸಗಳನ್ನು ಒಳಗೊಂಡ ಭಾರತ ಪುರಾಣವೆಂದು ಪರಿಗಣಿತವಾಗಿ, ಅದರ ಕರ್ತೃವಿಗೆ ಆದಿಕವಿಯ ಪಟ್ಟ ತಪ್ಪಿಹೋಗಿದ್ದರೂ—ನ್ಯಾಯವಾಗಿ ಆ ಕೀರ್ತಿ ಭಾರತಕರ್ತೃವಿಗೇ ಸಲ್ಲಬೇಕು. ಭಾರತವು ರಾಮಾಯಣಕ್ಕಿಂತಲೂ ಪುರಾತನವಾದುದೆಂದು ಬಹುಜನರ ಹೇಳಿಕೆ. ಅಪೌರುಷೇಯಗಳೆಂದು ಪ್ರಖ್ಯಾತವಾಗಿರುವ ವೇದಗಳಲ್ಲಿ ಬೇರಿಟ್ಟು, ಜನರ ಬಾಯಿಂದ ಬಾಯಿಗೆ ವೇದಗಳಂತೆ ಹರಿದು ಬರುತ್ತಾ ಹತ್ತಾರು, ನೂರಾರು ಕೊಂಬೆಗಳನ್ನು ಒಳಗೊಂಡು ಬೆಳೆದು ನಿಂತಿದೆ, ಈ ಕಾವ್ಯವಟವೃಕ್ಷ. ಗಾಯಕರಾದ ಕವಿಗಳು, ಶ್ರೋತೃಗಳ ಒಲವಿಗೆ ತಕ್ಕ ಹಾಗೆ ಇದನ್ನು ಬೆಳೆಸಿದರು. ಬೆಳೆದು ಬೆಳೆದು, ಇದು ಒಂದು ಲಕ್ಷ ಶ್ಲೋಕಗಳನ್ನು ಒಳಗೊಂಡ ಮಹಾಕಾವ್ಯವಾಯಿತು.

ಬೃಹತ್ತು ಮಹತ್ತುಗಳೆರಡರಲ್ಲಿಯೂ ಭಾರತವನ್ನು ಮೀರಿಸುವ ಕಾವ್ಯ ಇನ್ನೂ ಜಗತ್ತಿನಲ್ಲಿ ಉದಯವಾಗಿಲ್ಲ. ಈ ಕಾವ್ಯವಾರಿಧಿಯಿಂದ ದೊಡ್ಡ ಪುಟ್ಟ ನೂರಾರು ಕವಿಗಳು ತಮ್ಮ ಕಾವ್ಯಗಳಿಗೆ ವಸ್ತು ರತ್ನಗಳನ್ನು ಆಯ್ದುಕೊಂಡಿದ್ದಾರೆ. ಎಷ್ಟು ಮೊಗೆದರೂ ಮುಗಿಯದಷ್ಟು ವಿಷಯಗಳನ್ನು ಒಳಗೊಂಡು ಪುಷ್ಟವಾಗಿರುವ ಮಹಾಕಾವ್ಯ ಇದು. ಹೀಗೆ ಜನಾನುರಾಗವನ್ನು ಗಳಿಸಿಕೊಂಡಿರುವುದರಲ್ಲಿ ಇದರೊಡನೆ ಸ್ಪರ್ಧಿಸಿರುವ ಕಾವ್ಯವೆಂದರೆ ರಾಮಾಯಣವೊಂದೇ. ಆದರೆ ರಾಮಾಯಣ, ಧರ್ಮಘೇನು ಇನ್ನೂ ಮೂರು ಕಾಲುಗಳನ್ನು ಊರಿ ನಿಂತಿದ್ದ ತ್ರೇತಾಯುಗಕ್ಕೆ ಸಂಬಂಧಿಸಿದುದು. ನಮ್ಮ ಯುಗಕ್ಕೆ ಅದು ಬಹುದೂರ. ಅದರಲ್ಲಿ ಕಂಡುಬರುವ ಆದರ್ಶಚಿತ್ರ 'ದೂರದ ಬೆಟ್ಟ, ಕಣ್ಣಿಗೆ ನುಣ್ಣಗೆ.' ಸುಲಭವಾಗಿ ಅನುಸರಣ ಸಾಧ್ಯವಲ್ಲ. ಆದರೆ ಭಾರತದ ವಿಚಾರ ಹಾಗಲ್ಲ. ಇಲ್ಲಿನ ಹಲವು ಪಾತ್ರಗಳು ನಮ್ಮ ಸಮೀಪ ಬಂಧುಗಳು. ಅವರ ಜೀವನ ನಮ್ಮ ಜೀವನಕ್ಕೆ ಭೂತಕನ್ನಡಿ ಹಿಡಿದಂತೆ ಇದೆ. ಅವರು ಮಾನವ ಸಹಜವಾದ ಗುಣದೋಷಗಳಿಂದ ಕೂಡಿ ಸಜೀವ ವ್ಯಕ್ತಿಗಳಾಗಿ ತೋರುತ್ತಾರೆ. ರಾಮಾಯಣದ ಪಾತ್ರಗಳಿಗಿಂತಲೂ ಭಾರತದ ಪಾತ್ರಗಳು ಹೆಚ್ಚು ಅನುಸರಣ ಸಾಧ್ಯರೆಂದು ತೋರುತ್ತದೆ.

ಇಂಥ ಲೋಕಪ್ರಿಯವಾದ ಈ ಕಾವ್ಯವನ್ನು ನಮ್ಮವರು ಮಾತ್ರವೇ ಅಲ್ಲದೆ ಹೊರಗಿನವರೂ ಬಾಯಿತುಂಬ ಹೊಗಳಿದ್ದಾರೆ. ಅವರಲ್ಲಿ ಅಮೇರಿಕಾ ದೇಶದ ಪ್ರೊಫೆಸರ್ ಎ. ಆರ್. ಆರೆಂಜ್ ಎಂಬ ವಿದ್ವಾಂಸರು ತಮ್ಮ ದೇಶದ ಸಾಹಿತ್ಯದ ಇಂದಿನ ಅವನತಿಯನ್ನು ನೆನೆದು, ತಮ್ಮ ಉದ್ಧಾರಕ್ಕೆ ಭರತಖಂಡವೂ ಮಹಾಭಾರತವೂ ಶರಣ್ಯವೆಂದು ಹೇಳುತ್ತಾ ಮಹಾಭಾರತಕ್ಕೆ ಅತನು ಅರ್ಪಿಸಿರುವ ಪುಷ್ಪಾಂಜಲಿ ಇದು—'ಸಾಹಿತ್ಯದ ಮೂಲಕ ಸಂಸ್ಕೃತಿಯನ್ನು ಸೃಷ್ಟಿಮಾಡುವ ಪ್ರಯತ್ನಗಳಲ್ಲಿ ಮಹಾಭಾರತವು ಮಾನವ ಇತಿಹಾಸದಲ್ಲಿಯೇ ಏಕೈಕವೂ ಅತ್ಯಂತ ಮಹತ್ವಪೂರಿತವಾದುದೂ ಆಗಿದೆ. ಅದನ್ನು ರಚಿಸಿದ ಮಹಾಪುರುಷನ ಮೇಧಾಶಕ್ತಿಯನ್ನು ಅಳೆಯುವುದು ಯಾರಿಗಾದರೂ ಸುಲಭವಲ್ಲ. ಆ ಬುದ್ಧಿಶಕ್ತಿಯನ್ನು ಅರಿತುಕೊಳ್ಳಲು ಮಾಡುವ ಪ್ರಯತ್ನವೇ ಒಂದು ಉದಾರವಾದ ವಿದ್ಯಾಭ್ಯಾಸವಾದೀತು! ಅದರ ವಿಷಯಾನುಕ್ರಮಣಿಕೆಯ ಪರಿಚಯವೇ ಸಾಕು, ನಮ್ಮ ಪ್ರಾರ್ಥನಾ ದಿನದ

ಯಾತ್ರೆಗಿಂತಲೂ ಹೆಚ್ಚು ಮಹತ್ವಪೂರಿತವಾದುದು. 'ಇಲಿಯಡ್,' 'ಒಡಸ್ಸಿ'ಗಳು ಅದರಲ್ಲಿನ ಉಪಕಥೆಗಳಿಗೆ ಸಮಾನ. ಜಗತ್ಪ್ರಸಿದ್ಧವಾದ ಭಗವದ್ಗೀತೆಯು, ಅದರಲ್ಲಿ ಬಂದಿರುವ ಅನೇಕ ಯುದ್ಧಗಳಲ್ಲಿ ನಡೆಯಲಿದ್ದ ಒಂದು ಯುದ್ಧದ ಪೂರ್ವಭಾವಿಯಾಗಿ ನಡೆಸಿದ ಒಂದು ಸಂಭಾಷಣೆ ಮಾತ್ರ. ನೂರಾರು ಪಾತ್ರಗಳು; ಘಟನೆಗಳ ಮೇಲೆ ಘಟನೆಗಳು; ಅವುಗಳಲ್ಲಿ ಅನಂತಕಾಲದ ವಿಶ್ವವ್ಯಾಪ್ತಿ. ಇಷ್ಟಾದರೂ ಒಂದೆಡೆಯಲ್ಲಿಯೂ ಕಾವ್ಯದ ರಚನೆ ಕುಂಟುವುದಿಲ್ಲ....ಅದನ್ನು ಬರಿಯ ಸಾಹಿತ್ಯವೆಂದೇ ಸ್ವೀಕರಿಸಿದರೂ, ಅದರ ಮಹತ್ತು ಬೃಹತ್ತುಗಳು ಅಸದೃಶವಾದವುಗಳು. ಅದರಲ್ಲಿನ ಉದಾಹರಣೆಗಳೂ ಉಪದೇಶಗಳೂ ಕಾಲದಷ್ಟು ಅನಂತ ವಿಸ್ತಾರವಾಗಿ, ವಿಶ್ವತೋಮುಖವಾಗಿ ಬೆಳೆದಿವೆ. ಈಚಿನ ಕಾಲದ ಸಾಹಿತ್ಯಗ್ರಂಥಗಳನ್ನು ಓದುವುದರಲ್ಲಿ ಕಂಡುಬರದ ವಾಸ್ತವಾನುಭವವು ಭಾರತ ಪಠನದಿಂದ ಉಂಟಾಗುತ್ತದೆ. ಇದರ ಪಠನದಿಂದ ಮಾನವನು ಸತ್ಯಾನುಭವದಿಂದ ಹೇಗೋ ಹಾಗೆ ಬೇರೊಬ್ಬ ವ್ಯಕ್ತಿಯೇ ಆಗಿ ಹೋಗುತ್ತಾನೆ.' (ಕೂಡಲಿ ಶೃಂಗಗಿರಿ ಜಗದ್ಗುರು ಶ್ರೀ ಸಚ್ಚಿದಾನಂದ ಶಂಕರ ಭಾರತೀ ಸ್ವಾಮಿಗಳ 'ವೇದವ್ಯಾಸರು' ಎಂಬ ಗ್ರಂಥದಿಂದ)

೩. ಕನ್ನಡ ಭಾರತಗಳು—ಪಂಪ—ನಾರಣಪ್ಪ

ಸಂಸ್ಕೃತಭಾರತವು ಅನೇಕ ಕವಿಗಳಿಗೆ ಕಾವ್ಯವಸ್ತುವನ್ನು ಒದಗಿಸಿರುವುದು ಮಾತ್ರವೇ ಅಲ್ಲದೆ ಇಡೀ ಗ್ರಂಥವೇ ಭರತಖಂಡದ ಹಲವು ಭಾಷೆಗಳಿಗೆ ಪರಿವರ್ತಿತವಾಗಿದೆ. ಕನ್ನಡದಲ್ಲಂತೂ ಸಾಹಿತ್ಯದ ಅರುಣೋದಯವಾಗಿರುವುದೇ ಭಾರತದ ಭಾಸ್ಕರನಿಂದ. ಕನ್ನಡದ ಆದಿಕವಿ ಪಂಪ ರಚಿಸಿರುವ 'ವಿಕ್ರಮಾರ್ಜುನ ವಿಜಯ' ಅಥವಾ 'ಪಂಪ ಭಾರತ' ಕನ್ನಡಸಾಹಿತ್ಯದಲ್ಲಿ ಅದ್ವಿತೀಯವಾದ ಗ್ರಂಥ. ಪಂಪನ ತರುವಾಯ ಗ್ರಂಥರಚನೆ ಮಾಡಿದವರೆಲ್ಲರೂ ಆತನನ್ನು ಮುಕ್ತಕಂಠದಿಂದ ಹೊಗಳಿದ್ದಾರೆ; ಭಕ್ತಿ ಕುಸುಮಾಂಜಲಿಯನ್ನು ಅರ್ಪಿಸಿದ್ದಾರೆ. ಆತನ ತರುವಾಯ ಭಾರತ ರಚನೆಯಿಂದ ಪ್ರಖ್ಯಾತನಾಗಿರುವ ಕವಿ ನಾರಣಪ್ಪ. ಈತ ವರಕವಿ. ಈ ಇಬ್ಬರೂ ಒಂದೊಂದು ದೃಷ್ಟಿಯಿಂದ ಅದ್ವಿತೀಯರು. ಪಂಪನು ಚಾಳುಕ್ಯವಂಶದ ಅರಿಕೇಸರಿಯ ಆಸ್ಥಾನ ಕವಿಯಾಗಿ, ದಂಡನಾಯಕನಾಗಿ, ಗೆಳೆಯನಾಗಿ ಬಾಳಿ ಬದುಕಿದನು. ಆತ ಬದುಕಿದ್ದುದು ಭಾರತದ ವೀರಯುಗದಲ್ಲಿ; ಕ್ಷತ್ರಿಯ ವೀರರ ಅಸ್ತ್ರಶಸ್ತ್ರಗಳ ಮಾರ್ಮೊಳಗಿನಿಂದ ಪ್ರಕ್ಷುಭಿತವಾಗಿದ್ದ ವಾತಾವರಣದಲ್ಲಿ. ಪಂಪನಿಗೆ ಕಂಠ ಹಿಡಿದರೆ ಕಾವ್ಯ, ಕತ್ತಿ ಹಿಡಿದರೆ ಕದನ ಸ್ವಾಭಾವಿಕವಾಗಿ ಹೋಗಿತ್ತು. ಆದ್ದರಿಂದ ಆತನ ಕಾವ್ಯದಲ್ಲಿ ವೀರರಸ ನೊರೆಗಟ್ಟಿ ಹರಿಯುತ್ತಿದೆ. ನಾರಣಪ್ಪನ ಸ್ವಭಾವ, ಸನ್ನಿವೇಶಗಳು ಬೇರೆ ಬಗೆಯವು. ಆತನ ಕಾಲ ಭಕ್ತಿಯುಗ. ಅನೇಕ ಶಿವಶರಣರ, ಹರಿದಾಸರ ಭಕ್ತಿಪ್ರವಾಹ ಉಕ್ಕಿ, ನಾಡಿನ ಮೂಲೆಮೂಲೆಯಲ್ಲಿಯೂ ಪ್ರವಹಿಸುತ್ತಿದ್ದ ಕಾಲ. ನಾರಣಪ್ಪನೋ ಯಾವ ರಾಜನ ಆಶ್ರಯವೂ ಇಲ್ಲದ ಒಬ್ಬ ಬಡವ. ಹೆಚ್ಚೆಂದರೆ ಒಬ್ಬ ಶಾನುಭೋಗನಾಗಿದ್ದಿರಬಹುದು. ಆತನ ಕಾವ್ಯರಚನೆಗೆ ಪ್ರೇರಕಶಕ್ತಿ ಗದುಗಿನ ವೀರನಾರಾಯಣ. ಆದ್ದರಿಂದ ಈತನ ಭಾರತದಲ್ಲಿ ಭಕ್ತಿಭಾವವು ಎಲ್ಲೆಲ್ಲಿಯೂ ತಾನೇ ತಾನಾಗಿ ತಾಂಡವವಾಡುತ್ತಿದೆ.

ಪಂಪ-ನಾರಣಪ್ಪ ಇವರ ಕಾವ್ಯದ ಸೊಬಗು ಬೇರೆ ಬೇರೆ ರೀತಿಯದು. ಪಂಪ ಕಾವ್ಯವನ್ನು ಬರೆದುದು ತನ್ನ ದೊರೆಯ ಮೆಚ್ಚಿಗೆಗಾಗಿ; ಆತನ ಆಸ್ಥಾನದ ಕವಿಗಳ ಮೆಚ್ಚಿಗೆಗಾಗಿ. ಆದ್ದರಿಂದ ಆತನ ಕಾವ್ಯ ಪ್ರೌಢವಾಗಿದೆ; ಪಂಡಿತಮಾನ್ಯವಾಗಿದೆ. ಆತನ ಕಾವ್ಯ ಸಮತಳ ಪ್ರದೇಶದಲ್ಲಿ ಹರಿಯುತ್ತಿರುವ ಪೂರ್ಣ ಪ್ರವಾಹದಂತೆ ಗಂಭೀರವಾದುದು. ನಾರಣಪ್ಪನ ಕಾವ್ಯ ಹಿಮಾಲಯ ಪ್ರದೇಶದಲ್ಲಿ ಪ್ರವಹಿಸುತ್ತಿರುವ ಬ್ರಹ್ಮಪುತ್ರಾ ನದಿಯಂತೆ, ಬೆಟ್ಟವನ್ನು ಸುತ್ತಿ, ಪ್ರಪಾತಕ್ಕೆ ಧುಮ್ಮಿಕ್ಕಿ ಭೋರ್ಗರೆಯುತ್ತಾ ಪ್ರವಹಿಸುವುದು. ಪಂಪ ತನ್ನ ಕಾವ್ಯಕ್ಕೆ ಅಲಂಕಾರ, ಛಂದಸ್ಸು ವ್ಯಾಕರಣಗಳ ಕಡಿವಾಣವಿಕ್ಕಿ ಹೆದ್ದಾರಿಯಲ್ಲಿ ನಡೆಸುತ್ತಿದ್ದರೆ, ನಾರಣಪ್ಪನ ಕವಿತಾ ಪಕ್ಷಿ ಸ್ವಚ್ಛಂದವಾಗಿ ಗಿರಿವನ ನದಿ ತಟಾಕಗಳ ಮೇಲೆ ಹಾರಿಹೋಗುತ್ತಿದೆ. ಪಂಪನ ಅಚ್ಚುಕಟ್ಟು, ನಾಗರಿಕತೆ ನಾರಣಪ್ಪನಲ್ಲಿ ಬರದು. ಈತನ ದೃಷ್ಟಿ ಜನಸಾಮಾನ್ಯರ ಮನೋರಂಜನೆ, ಉದ್ಧಾರ. ಇವರಿಗೆ ಅರ್ಥವಾಗುವಂತೆ ಇರುವುದಾದರೆ ಕಾವ್ಯನಿಯಮಗಳು ಹಾರಿಹೋದರೂ ಈತನಿಗೇನೂ ವ್ಯಥೆಯಿಲ್ಲ. ಆದುದರಿಂದ ಈತನು ಪಂಡಿತರಲ್ಲಿ ಪಂಪನಷ್ಟು ಪ್ರಸಿದ್ಧನಾಗಿಲ್ಲ. ಆದರೆ ಪಂಪನಿಗೆ ನಾರಣಪ್ಪನಿಗೆ ದೊರೆತ ಜನಪ್ರಿಯತೆ ದೊರೆಯಲಿಲ್ಲ. ನೀರಿಳಿಯದ ಜನಸಾಮಾನ್ಯರ ಗಂಟಲಿನಲ್ಲಿ ಪಂಪಭಾರತದ ಕಡಬು ಹೇಗೆ ಇಳಿಯುವುದು ಸಾಧ್ಯ?

ಕನ್ನಡ ಸಾಹಿತ್ಯದ ಈ ಇಬ್ಬರು ಮಹಾ ಕವಿಗಳಲ್ಲಿ ಇರುವ ಮತ್ತೊಂದು ದೊಡ್ಡ ವ್ಯತ್ಯಾಸವೆಂದರೆ ಇವರು ಮೂಲವನ್ನು ಬಳಸಿಕೊಂಡಿರುವ ರೀತಿ. ಇಬ್ಬರಿಗೂ ಮೂಲ ಸಂಸ್ಕೃತ ಭಾರತವೇ ಆದರೂ, ಅದರ ಸಂಗ್ರಹಕಾರ್ಯದಲ್ಲಿಯೇ ತೊಡಗಿರುವವರಾದರೂ, ಅವರಿಬ್ಬರ ದೃಷ್ಟಿಕೋನದಲ್ಲಿ ಅಜಗಜಾಂತರ ವ್ಯತ್ಯಾಸವಿದೆ. ಪಂಪ ಜೈನ ಧರ್ಮಕ್ಕೆ ಸೇರಿದವನು. ಭಾರತದಲ್ಲಿರುವ ಹಲವು ಘಟನೆಗಳು ಆತನ ಅಭಿರುಚಿಗೆ ಹೊಂದಿಕೊಳ್ಳಲಿಲ್ಲ. ಅಲ್ಲದೆ ಆತನು ಬರೆಯುತ್ತಿದ್ದುದು ಬರಿಯ ಭಾರತವನ್ನಲ್ಲ; ಸಮಸ್ತಭಾರತವನ್ನು. ತನ್ನ ರಾಜನಾದ ಅರಿಕೇಸರಿಯನ್ನು, ಅರ್ಜುನನಲ್ಲಿ ಅಭೇದಭಾವವನ್ನು ಕಲ್ಪಿಸಿ, ಕಥಾನಾಯಕನನ್ನಾಗಿ ಮಾಡಿಕೊಂಡು ತನ್ನ ಕಾವ್ಯವನ್ನು ಸೃಷ್ಟಿಸಿದ. ತನ್ನ ಪೋಷಕನ ಬಿರುದನ್ನೇ ಕಾವ್ಯದ ಹೆಸರಿಗೆ ಬಳಸಿಕೊಂಡು ಅದನ್ನು 'ವಿಕ್ರಮಾರ್ಜುನ ವಿಜಯ' ಎಂದು ಕರೆದ. 'ಪಂಚವಲ್ಲಭೆ' ದ್ರೌಪದಿಯನ್ನು ಅರ್ಜುನನ ಧರ್ಮಪತ್ನಿಯನ್ನಾಗಿ ಮಾತ್ರ ಸ್ವೀಕರಿಸಿದ. ಜೈನ ಪುರಾಣಗಳ ಪ್ರಕಾರ ನರಕಕ್ಕೆ ಬಿದ್ದುಹೋಗುವ ಕೃಷ್ಣನನ್ನು ಮೂಲದಲ್ಲಿ ಮುಡಿಪಾಗಿಟ್ಟಿದ್ದ ದೇವ ಸಿಂಹಾಸನದಿಂದ ಕೆಳಕ್ಕೆಳೆದ. ಆತನ ಮಹಿಮೆ ಮಾಯೆಗಳೂ, ಗರಿಮೆ ಹಿರಿಮೆಗಳೂ ಬಂದಕಡೆ ಅವನ್ನು ಮೆಲ್ಲಗೆ ತೇಲಿಸಿಕೊಂಡು ಹೋದ. ಹೀಗೆ ಆತನು ಮಾಡಿಕೊಂಡ ಬದಲಾವಣೆಗಳು ನಿರ್ದುಷ್ಟವಾಗಿವೆಯೆಂದಾಗಲೀ, ಯಶಸ್ವಿಯಾಗಿ ನಿರ್ವಹಣಗೊಂಡಿವೆಯೆಂದಾಗಲೀ ಹೇಳುವಂತೆಯೇನೂ ಇಲ್ಲ. ಆದರೆ ಕಾವ್ಯದಲ್ಲಿ ಆತನ ಒಲವು ಎತ್ತ ಬಾಗಿದೆಯೆಂಬುದು ಇವುಗಳಿಂದ ಸ್ಪಷ್ಟವಾಗಿ ಗೋಚರವಾಗುತ್ತದೆ. ನಾರಣಪ್ಪನ ನೋಟ ಇದರಿಂದ ಭಿನ್ನವಾದುದು. ಆತನ ಕಾವ್ಯಕ್ಕೆ ಕಥಾನಾಯಕ ಶ್ರೀಕೃಷ್ಣ. ಭಗವಂತನ ಅವತಾರವಾದ ಆತ ಭೂಭಾರಹರಣಕ್ಕಾಗಿ ಟೊಂಕಕಟ್ಟಿದ್ದಾನೆ; ದುಷ್ಟಶಿಕ್ಷಣ, ಶಿಷ್ಟರಕ್ಷಣಕ್ಕಾಗಿ ಕಂಕಣ ಕಟ್ಟಿದ್ದಾನೆ. ಮಾನವನಂತೆ ವ್ಯವಹರಿಸುತ್ತಿದ್ದರೂ,

ಆತನು ಭಗವಂತನೆಂಬ ಅರಿವು ಕಾವ್ಯದ ಎಲ್ಲ ಪಾತ್ರಗಳಿಗೂ ಇದೆ. ದುರ್ಯೋಧನನು ಕೂಡ ಆತನು ಭಗವಂತನೆಂದು ಬಲ್ಲ; ಆದರೂ ಆತನು ಹರಡಿರುವ ಮಾಯಾಜಾಲವನ್ನು ಹರಿಯಲು ಶಕ್ತನಾಗಿಲ್ಲ. ಅದಮ್ಯವಾದ, ಅಪರಿಹಾರ್ಯವಾದ ಲೀಲಾಸೂತ್ರದಲ್ಲಿ ಸಿಲುಕಿ, ಕಪಟನಾಟಕ ಸೂತ್ರಧಾರಿಯಾದ ಕೃಷ್ಣನು ಕುಣಿಸಿದಂತೆ ಕುಣಿಯುತ್ತಿದ್ದಾರೆ, ಎಲ್ಲರೂ.

'ಹತ್ತು ಕಟ್ಟುವ ಕತೆ ಒಂದು ಮುತ್ತು ಕಟ್ಟು' ಎನ್ನುವುದು ಪಂಪನ ಮನೋವೃತ್ತಿ. ಮಾತನಾಡಿದರೆಲ್ಲಿ ಮುತ್ತು ಸುರಿಯುವುದೋ ಎನ್ನುವ ಗಾಂಭೀರ್ಯ. ಮಾತುಗಳೆಲ್ಲವೂ ಸೂತ್ರದಂತೆ. ಎರಡು ಮಾತುಗಳಲ್ಲೇ ಒಂದು ದೊಡ್ಡ ಕಥೆಯನ್ನೆಲ್ಲಾ ಅಡಕಮಾಡಿಬಿಡುತ್ತಾನೆ. ನಾರಣಪ್ಪ ಹಾಗಲ್ಲ. ಹಿಗ್ಗಲಿಸುವುದು ಆತನ ಹುಟ್ಟುಗುಣ. ಪಂಪನು ಒಂದು ಪದ್ಯದಲ್ಲಿ ಹೇಳಿದ ಜರಾಸಂಧವಧೆ ಈತನ ಕೈಯಲ್ಲಿ ೧೨೯ ಪದ್ಯಗಳ ಒಂದು ಸಂಧಿಯಾಗಿ ಪಸರಿಸಿದೆ. ಹತ್ತು ಹನ್ನೆರಡು ಪದ್ಯಗಳಲ್ಲಿ ಪಂಪನು ಅಡಕಮಾಡಿದ ಶಿಶುಪಾಲವಧೆಗೆ ನಾರಣಪ್ಪ ನಾಲ್ಕು ಸಂಧಿಗಳನ್ನೇ ಮೀಸಲಾಗಿಸುತ್ತಾನೆ. ಪಂಪನ ಕಾವ್ಯವನ್ನು ಓದುವಾಗ, ಓದುಗರು ಮೈಯೆಲ್ಲಾ ಕಣ್ಣಾಗಿ ಎಚ್ಚರಗೊಂಡಿರಬೇಕು; ನಿಂತು ನಿಂತು ಕಾವ್ಯರಸವನ್ನು ಚಪ್ಪರಿಸುತ್ತಾ ನಿಧಾನವಾಗಿ ಸಾಗಬೇಕು. ನಾರಣಪ್ಪನಲ್ಲಿ ಈ ಕಷ್ಟವಿಲ್ಲ. ಅರ್ಧ ಮೈಮರೆತು ಕೇಳುತ್ತಿದ್ದರೂ, ಕಥಾಸರಣಿಯನ್ನು ಅನುಸರಿಸಿಕೊಂಡು ಹೋಗಬಹುದು. ವಾಚಾಳಿಯಾದ ಈತ ಅನೇಕ ವೇಳೆ ಮೇರೆಮೀರಿ ಮಾತನಾಡುವುದೂ ಉಂಟು. ಇದರಿಂದ ಗಾಂಭೀರ್ಯಕ್ಕೆ ಲೋಪತರುವುದೂ ಉಂಟು. ಪಂಪ ತನ್ನ ಗಾಂಭೀರ್ಯಕ್ಕೆ ಎಲ್ಲಿಯೂ ಲಾಘವವನ್ನು ತಂದುಕೊಂಡಿಲ್ಲ.

ಪಂಪಕವಿ ತನ್ನ ಕಾವ್ಯಶಕ್ತಿಯನ್ನು ಎರಡು ಕವಲುಗಳಾಗಿ ಒಡೆದು ಪ್ರವಹಿಸಿದ. 'ಬೆಳಗುವೆನಿಲ್ಲಿ ಲೌಕಿಕಮನ್' ಎಂದು ಭಾರತವನ್ನೂ, ಧರ್ಮಧ್ವಜವನ್ನು ಎತ್ತಿ ಹಿಡಿಯುವೆನೆಂದು 'ಆದಿ ಪುರಾಣ'ವನ್ನೂ ಬರೆದ. ಇದರಿಂದ ಕಾವ್ಯವನ್ನು ಮುಗಿಲು ಮುಟ್ಟಿಸಲು ಸಹಾಯಕವಾಗಿದ್ದ ಧರ್ಮದೃಷ್ಟಿ, ದರ್ಶನ ಆತನ ಭಾರತಕ್ಕೆ ದೊರೆಯದಂತಾಯಿತು. ಆತನ ಕಾವ್ಯಗಂಗೆ ತುಂಬುನೊರೆಯಿಂದ ಭೋರ್ಗರೆಯುತ್ತಾ ಪ್ರವಹಿಸುತ್ತಿದ್ದರೂ, ಮುಳುಗಿ ನೋಡಿದರೆ ಆಳ ಕಡಿಮೆಯೆಂಬಂತಾಯಿತು. ನಾರಣಪ್ಪ ತನ್ನ ಶಕ್ತಿ ಸರ್ವಸ್ವವನ್ನೂ ಒಂದು ಕಾವ್ಯ ಸೃಷ್ಟಿಗಾಗಿಯೇ ಮೀಸಲಾಗಿರಿಸಿದ. ಆತನ ಕಾವ್ಯಶಕ್ತಿಯೂ ಧರ್ಮಶಕ್ತಿಯೂ ಹುರಿಗೊಂಡೇ ಹೊರಹೊಮ್ಮಿದವು. ಇದರಿಂದ ಆತನ ಕಾವ್ಯ ಒಂದು ಅಲೌಕಿಕವಾದ ತೇಜಸ್ಸಿನಿಂದ ಬೆಳಗುವಂತಾಯಿತು. ಜೈನ ಮತದ ತತ್ವಗಳನ್ನು ಬೌದ್ಧಿಕವಾಗಿ ಒಪ್ಪಿದ ಪಂಪನಿಗೆ ಇದು ಪರಧರ್ಮದ ಕಾವ್ಯವೆಂಬ ದೃಷ್ಟಿ ಹುಟ್ಟದೆ ಹೋಗಿದ್ದರೆ—ಇದು ಬರಿಯ ಲೌಕಿಕ ಕಾವ್ಯವೆಂದು ಅಂದುಕೊಳ್ಳದಿದ್ದರೆ—ಆತನಿಗಿದ್ದ ಅದ್ಭುತ ಕವಿತಾಶಕ್ತಿಯಿಂದ ಅದೆಂತಹ ಮಹಾಕಾವ್ಯ ಉದಿಸುತ್ತಿತ್ತೊ! ಬಹುಶಃ ಮಿಲ್ಟನ್, ಡಾಂಟೆ, ಷೇಕ್ಸ್ ಪಿಯರ್, ವ್ಯಾಸ ವಾಲ್ಮೀಕಿಗಳಂತೆ ಆತನೂ ವಿಶ್ವಸಾಹಿತಿಯಾಗುತ್ತಿದ್ದನೆಂದು ಕಾಣುತ್ತದೆ. ನಾರಣಪ್ಪನನ್ನು ಪಂಪ ಕವಿಯೊಡನೆ ಹೋಲಿಸುವಾಗ ಈ ಪ್ರಮುಖವಾದ ವ್ಯತ್ಯಾಸವನ್ನು ಮರೆಯಬಾರದು. ನಾರಣಪ್ಪ, ಭಕ್ತಿರಸಾವೇಶದಿಂದ ಮೈಮರೆತು

ಮುಗಿಲು ಮುಟ್ಟುವಂತೆ ಬರೆದಿರುವ ಭಾಗಗಳಿಗೆ ಹೋಲಿಸಲು ಕನ್ನಡ ಸಾಹಿತ್ಯದಲ್ಲಿ ಮತ್ತೊಂದು ಕಾವ್ಯವಿಲ್ಲವೆಂದು ತೋರುತ್ತದೆ.

೪. ಇತರ ಭಾರತ ಕರ್ತೃಗಳು

ಪಂಪ–ನಾರಣಪ್ಪ ಈ ದಿವ್ಯ ಕವಿಗಳೇ ಅಲ್ಲದೆ, ಇತರ ಕವಿಗಳೂ ಕನ್ನಡ ಭಾರತದ ಸೃಷ್ಟಿಗೆ ಕೈಹಾಕಿದ್ದಾರೆ. ಪಂಪನು ತನ್ನ ವಿಕ್ರಮಾರ್ಜುನ ವಿಜಯದಲ್ಲಿ 'ವ್ಯಾಸಮುನೀಂದ್ರ ರುಂದ್ರ ವಚನಾಮೃತವಾರ್ಧಿಯನೀಸುವೆಂ; ಕವಿ ವ್ಯಾಸನೆಂಬ ಗರ್ವಮೆನಗಿಲ್ಲ' ಎಂದು ಹೇಳಿ ತನಗಿಂತಲೂ ಹಿಂದೊಬ್ಬ 'ಕವಿವ್ಯಾಸ'ನಿದ್ದನೆಂದು ಸೂಚಿಸಿದ್ದಾನೆ. ಆದರೆ ಪಂಪನ ಕಾವ್ಯ ಅದರ ಹಿಂದಿನ ಕಾವ್ಯಗಳನ್ನೆಲ್ಲಾ ಇಕ್ಕಿ ಮೆಟ್ಟಿದುದರಿಂದ ಅವನಿಗಿಂತಲೂ ಹಿಂದೆ ಬರೆದಿದ್ದ ಭಾರತಗಳು ಹೇಳ ಹೆಸರಿಲ್ಲದಂತಾಗಿವೆ.

ಪಂಪ ನಾರಣಪ್ಪ–ಇವರ ಪ್ರತಿಭೆಯಿಂದ ಉದಿಸಿದ ಕಾವ್ಯಗಳ ಕಾಂತಿಯಿಂದ ಇತರ ಭಾರತಗಳು ಮಂಕಾಗಿ ಹೋಗಿವೆ. ಕ್ರಿ. ಶ. ೧೫೦೦ರಲ್ಲಿ ಚಾಟುವಿಠಲನಾಥನು ಒಂದು ಭಾರತವನ್ನು ಬರೆದನೆಂದು ಪ್ರತೀತಿ ಇದೆ. ಅದರಲ್ಲಿ ಪೌಲೋಮ, ಆಸ್ತಿಕ ಪರ್ವಗಳು ಮಾತ್ರ ಈಗ ಉಪಲಬ್ಧವಾಗಿವೆ. ಕ್ರಿ. ಶ. ೧೫೫೦ರ ಸುಮಾರಿನಲ್ಲಿ, ಸುಕುಮಾರ ಭಾರತಿ 'ಚಾಯಣ ಭಾರತ'ವೆಂಬ ಒಂದು ಭಾರತವನ್ನು ಬರೆದಿರುವಂತೆ ಗೊತ್ತಾಗುತ್ತದೆ. ಆದರೆ ಅದರಲ್ಲಿ ಎರಡು ಆಶ್ವಾಸಗಳು ಮಾತ್ರ ಅರೆ ಜೀವದಿಂದ ಉಳಿದುಕೊಂಡಿವೆ. ನಾರಣಪ್ಪನು ಬರೆಯದೆ ಬಿಟ್ಟ ಉತ್ತರಭಾಗವನ್ನು (ಶಾಂತಿಪರ್ವದಿಂದ ಮುಂದಿನ ಏಳು ಪರ್ವಗಳನ್ನು) ವಿಜಯನಗರದ ಕೃಷ್ಣದೇವರಾಯನ ಅಪ್ಪಣೆಯಂತೆ ತಿಮ್ಮಣ್ಣ ಕವಿ (ಕ್ರಿ. ಶ. ೧೫೧೫) ರಚಿಸಿದ್ದಾನೆ. ಶ್ರೀನಿವಾಸಕವಿ (ಕ್ರಿ. ಶ. ೧೭೦೦) ಭಾರತದ ಸ್ತ್ರೀ ಪರ್ವವನ್ನೂ, ಲಕ್ಷ್ಮಕವಿ (ಕ್ರಿ. ಶ. ೧೭೨೧) ಕರ್ಣಪರ್ವದಲ್ಲಿ ನಾಲ್ಕು ಸಂಧಿಗಳು ಸೇರಿ ಮೊದಲ ಎಂಟು ಪರ್ವಗಳನ್ನೂ, ಪರಮದೇವ (ಕ್ರಿ. ಶ. ೧೬೧೧) 'ತುರಂಗ ಭಾರತ'ವನ್ನೂ ರಚಿಸಿದರು. 'ಚಿತ್ರಭಾರತ'ವೆಂಬ ಭಾರತವೂ ಕಳಲೆ ನಂಜರಾಜನು ಬರೆದಿರುವನೆಂದು ಪ್ರತೀತಿ ಇರುವ ಭಾರತವೂ ಉಪಲಬ್ಧವಾಗಿಲ್ಲ.

ಮೇಲೆ ಹೇಳಿದ ಭಾರತಗಳೆಲ್ಲವೂ ಪದ್ಯ ರೂಪದಲ್ಲಿವೆ. ಇವುಗಳಲ್ಲದೆ ಚಿಕ್ಕದೇವರಾಜ ಭಾರತವೆಂಬ ಉತ್ತರಪರ್ವಗಳ ಟೀಕೆಯನ್ನು ಒಳಗೊಂಡ ಭಾರತವೂ, ಜಕ್ಕಭೂಪಾಲನ (ಕ್ರಿ. ಶ. ೧೬೨೦) 'ಭಾರತಕಥಾಸಂಗ್ರಹ'ವೂ ಮಧ್ವಗುರು ರಚಿತವಾದ ಭಾರತ ತಾತ್ಪರ್ಯನಿರ್ಣಯಕ್ಕೆ ವಾದಿರಾಜರು (ಕ್ರಿ. ಶ. ೧೫೭೮) ಬರೆದಿರುವ ಕನ್ನಡ ವ್ಯಾಖ್ಯಾನವೂ ಮುಮ್ಮಡಿ ಕೃಷ್ಣರಾಜ ಒಡೆಯರು (ಕ್ರಿ. ಶ. ೧೭೯೪–೧೮೬೮) ಬರೆದಿರುವ 'ಕೃಷ್ಣರಾಜ ವಾಣೀವಿಲಾಸ ಭಾರತ'ವೂ ಪಂಡಿತ ದೇವಶಿಖಾಮಣಿ ಅಳಸಿಂಗಾಚಾರ್ಯರ 'ಶ್ರೀ ಮಹಾಭಾರತವೂ-ಕರ್ಣಾಟಕ ವಚನವೂ' ಗದ್ಯಗ್ರಂಥಗಳಾಗಿವೆ. ಇವುಗಳಲ್ಲಿ ಪಂಡಿತರ ಗ್ರಂಥವನ್ನು ಬಿಟ್ಟರೆ 'ಕೃಷ್ಣರಾಜ ವಾಣೀವಿಲಾಸ ಭಾರತ'ವು ಸರ್ವ ಜನಾದರಣೀಯವಾದುದು; ಸಂಸ್ಕೃತ ಭಾರತವನ್ನು ಆದ್ಯಂತವಾಗಿ ಕನ್ನಡಿಸತಕ್ಕದ್ದು, ಸರಳವಾದ ಕನ್ನಡದಲ್ಲಿ ಮತ್ತಾವ ಭಾರತವೂ ಇಷ್ಟು

ವಿಸ್ತಾರವಾಗಿ ಬರೆಯಲ್ಪಟ್ಟಿಲ್ಲ. ಇದಲ್ಲದೆ ಈಚೆಗೆ ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರಿಗಳು ಸಂಸ್ಕೃತ ಮಹಾಭಾರತದ ಸಾರವನ್ನು ಭಟ್ಟಿಯಿಳಿಸಿ 'ವಚನ ಭಾರತ'ವೆಂಬ ಗದ್ಯಗ್ರಂಥವನ್ನು ಪ್ರಕಟಿಸಿದ್ದಾರೆ. ಆರು ತಿಂಗಳಲ್ಲಿ ಬರೆದ ಗ್ರಂಥ ಇದು. ಒಂದೇ ನೋಟದಲ್ಲಿ ಭಾರತದ ಕಥೆ, ಅದರ ಸಾಹಿತ್ಯದ ಸೊಬಗು, ದರ್ಶನ, ಧರ್ಮ, ನೀತಿ ಇವೆಲ್ಲ ಇಲ್ಲಿ ದೊರಕುತ್ತವೆ.

ವೈದಿಕ ಪಂಥದವರು ಬರೆದಿರುವ ಕಥೆಯನ್ನು ಕೆಲವು ಜೈನ ಕವಿಗಳು ಅಲ್ಲಲ್ಲಿ ಹಲವು ವ್ಯತ್ಯಾಸಗಳನ್ನು ಮಾಡಿ ಬಳಸಿಕೊಂಡಿದ್ದಾರೆ. ಅಂತಹವುಗಳಲ್ಲಿ ಸಾಳ್ವನು (ಕ್ರಿ.ಶ. ೧೫೫೦) ಬರೆದಿರುವ ಭಾರತ ಬಹಳ ಪ್ರಸಿದ್ಧವಾದುದು. ಇದಲ್ಲದೆ 'ಜಿನ ಭಾರತ'ವೆಂಬ ಮತ್ತೊಂದು ಭಾರತವೂ ಇದೆ. ಆದರೆ ಇವು ಹೆಚ್ಚು ಜನಾನುರಾಗವನ್ನು ಸಂಪಾದಿಸಲು ಶಕ್ತವಾಗಿಲ್ಲ. ಸಂಪ್ರದಾಯಬದ್ಧವಾದ ಕಥೆಯಲ್ಲಿ ಮಾಡಿಕೊಂಡಿರುವ ಬದಲಾವಣೆಗಳು ಒಂದು ಬಗೆಯ ವಿಲಕ್ಷಣವಾದಂತಾಗಿವೆಯಲ್ಲದೆ ಕಲಾದೃಷ್ಟಿಯಿಂದಲೂ ಆ ಬದಲಾವಣೆಗಳು ಅಷ್ಟು ನಿರ್ದುಷ್ಟವಾಗಿವೆಯೆಂದು ಹೇಳುವಂತಿಲ್ಲ.

ಇವುಗಳಲ್ಲದೆ ಭೀಮ ದುರ್ಯೋಧನರ ಗದಾಯುದ್ಧವನ್ನು ವರ್ಣಿಸುವ ರನ್ನ ಮಹಾಕವಿಯ 'ಗದಾಯುದ್ಧಂ', ಕಿರಾತಾರ್ಜುನೀಯ ಪ್ರಸಂಗವನ್ನು ವರ್ಣಿಸುವ ಷಡಕ್ಷರಿಯ 'ಶಬರಶಂಕರ ವಿಲಾಸಂ', ಪಾಂಡವರ ಅಶ್ವಮೇಧಯಾಗವನ್ನು ವರ್ಣಿಸುವ ಲಕ್ಷ್ಮೀಶನ 'ಜೈಮಿನಿ ಭಾರತ' ಇವು ಪ್ರೌಢವೂ, ಅಹರೂ ಜನಪ್ರಿಯವೂ ಆದ ಕಾವ್ಯಗಳಾಗಿವೆ.

ಭಾರತದ ಕಥಾಭಾಗವನ್ನು ವಸ್ತುವನ್ನಾಗಿ ಸ್ವೀಕರಿಸಿರುವ ನೂರಾರು ಕಾವ್ಯಗಳಿವೆ. ಅಲ್ಲದೆ ಕೃಷ್ಣನನ್ನು ಕಥಾನಾಯಕನನ್ನಾಗಿ ಆಯ್ದುಕೊಂಡು ಬರೆದಿರುವ ಕಾವ್ಯಗಳಲ್ಲೆಲ್ಲಾ ಭಾರತದ ಕಥೆ ಅಷ್ಟು ಇಷ್ಟು ಬರುವುದು ಅನಿವಾರ್ಯ. ಆದರೆ ಈ ಕಾವ್ಯಗಳಲ್ಲಿ ಯಾವುವೂ ಪಂಪ ನಾರಣಪ್ಪ ಇವರ ಕಾವ್ಯಗಳಿಗೆ ಸಮಾನವಾಗುವಂತಿಲ್ಲ. ಅವರಿಬ್ಬರೂ ಸೂರ್ಯಚಂದ್ರರಂತೆ ಕನ್ನಡ ಸಾಹಿತ್ಯಾಕಾಶದಲ್ಲಿ ಸ್ಥಾಯಿಯಾಗಿರುವರು.

೫. ಉದ್ಯೋಗಪರ್ವದ ಕಥೆ

ಪಾಂಡವರ ವನವಾಸ ಅಜ್ಞಾತವಾಸಗಳ ಅವಧಿ ಮುಗಿಯಿತು. ಉತ್ತರ ಗೋಗ್ರಹಣದಲ್ಲಿ ವಿಜಯವನ್ನು ಗಳಿಸಿದ ಅರ್ಜುನನ ಮೇಲೆ ವಿರಾಟರಾಯನಿಗೆ ಅತಿ ಮಮತೆ; ಆದ್ದರಿಂದ ಆತನ ಮಗನಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿದನು. ಈ ಮಂಗಳಕಾರ್ಯಕ್ಕಾಗಿ ಪಾಂಡವರಲ್ಲಿ ಅಭಿಮಾನವುಳ್ಳ ಅರಸರೆಲ್ಲರೂ ವಿರಾಟನಗರಿಯಲ್ಲಿ ನೆರೆದಿದ್ದರು. ಒಂದು ದಿನ ಶ್ರೀಕೃಷ್ಣನು ಅವರನ್ನು "ಪಾಂಡವರು ಕಪಟ ದ್ಯೂತದಿಂದ ಹದಿಮೂರು ವರ್ಷಗಳ ಕಷ್ಟಗಳನ್ನು ಪಟ್ಟಿದ್ದಾರೆ. ಇವರಿಗೆ ಪುನಃ ರಾಜ್ಯ ದೊರೆಯುವುದು ಎಂದು ? ಇವರ ಗತಿಯೇನು ?" ಎಂದು ಪ್ರಶ್ನಿಸಿದನು. ಸ್ವಲ್ಪ ಚರ್ಚೆಯಾದ ಮೇಲೆ ಪ್ರಶ್ನಿಸಿದ ಪ್ರಭೃತಿಯೇ ಉತ್ತರವನ್ನೂ ಹೇಳಿದನು. ಯುದ್ಧಕ್ಕಾಗಿ ಸಕಲ ಸನ್ನಾಹಗಳನ್ನೂ ಸಿದ್ಧಮಾಡಿಕೊಳ್ಳಬೇಕು. ನಾಡಿನ ಸಕಲ ರಾಜರಲ್ಲಿಯೂ

ಒತ್ತಾಸೆಯನ್ನು ಬೇಡಿ ಓಲೆಗಳನ್ನಟ್ಟಬೇಕು. ಆದರೆ ಇತ್ತ ರಾಜ್ಯಾರ್ಧವನ್ನು ಸಾಮದಿಂದ ಬೇಡುವುದಕ್ಕಾಗಿ ಕುರುರಾಜನಲ್ಲಿಗೆ ಯೋಗ್ಯರಾದವರನ್ನು ಕಳುಹಿಸಬೇಕು" ಕೃಷ್ಣನ ಈ ತೀರ್ಮಾನಕ್ಕೆ ಎಲ್ಲರೂ ಸಮ್ಮತಿಸಿದರು. ಶ್ರೀಕೃಷ್ಣನು ಪಾಂಡವರಿಗೆ ಕಾಲೋಚಿತವಾದ ಬುದ್ಧಿವಾದವನ್ನು ಹೇಳಿ, ನೆನೆದಾಗ ಬರುವೆನೆಂದು ಭರವಸೆಯಿತ್ತು, ದ್ವಾರಕಿಗೆ ಹೊರಟು ಹೋದನು.

ಅತ್ತ ಕೌರವನು ಉದಿತೋದಿತರಾಗುತ್ತಿದ್ದ ಪಾಂಡವರನ್ನು ಕಂಡು, ಇನ್ನು ತಾನು ಸುಮ್ಮನೆ ಕುಳಿತಿರುವುದು ಸರಿಯಲ್ಲವೆಂದುಕೊಂಡನು. ತನ್ನ ಆಪ್ತರೊಡನೆ ಮಂತ್ರಾಲೋಚನೆ ನಡೆಸಿ ಗುಪ್ತವಾಗಿ ಕೃಷ್ಣನನ್ನು ತನಗೆ ಅನುಕೂಲನನ್ನಾಗಿ ಮಾಡಿಕೊಳ್ಳಬೇಕೆಂದು ಬಗೆದು ದ್ವಾರಕಿಗೆ ಹೊರಟನು. ಗೂಢಚಾರದಿಂದ ಈ ಸುದ್ದಿಯು ಪಾಂಡವರಿಗೆ ಗೊತ್ತಾಯಿತು. ಧರ್ಮರಾಯನು ಉದ್ವಿಗ್ನನಾಗಿ ಒಡನೆಯೇ ಅರ್ಜುನನನ್ನೂ ಅದೇ ಕಾರ್ಯಕ್ಕಾಗಿ ಕೃಷ್ಣನ ಬಳಿಗೆ ಕಳುಹಿಸಿದನು. ಅರ್ಜುನನ ದೃಷ್ಟಿಯಲ್ಲಿ ಕೃಷ್ಣನು ಸಾಕ್ಷಾತ್ ಪರಮಾತ್ಮ; ಆತನಿರುವ ದ್ವಾರಕಿ ಮುಕ್ತಿಗೆ ತವರ್ಮನೆ. ಆದ್ದರಿಂದ ಅದನ್ನು ಕಂಡೊಡನೆಯೇ ಅನನ್ಯಭಕ್ತಿಯಿಂದ ಸ್ತೋತ್ರಮಾಡುತ್ತಾ ಅರಮನೆಯನ್ನು ಪ್ರವೇಶಿಸಿದನು. ಆ ವೇಳೆಯಲ್ಲಿ ಶ್ರೀಕೃಷ್ಣನು ನಿದ್ರಾಮುದ್ರಿತನಾಗಿದ್ದುದರಿಂದ ಆತನನ್ನು ಎಬ್ಬಿಸಲಾರದೆ ಭಕ್ತಿಯುತನಾಗಿ ಆತನ ಪಾದಗಳ ಬಳಿಯಲ್ಲಿ ಕೈಮುಗಿದುಕೊಂಡು ಕುಳಿತನು. ಮರುಕ್ಷಣದಲ್ಲಿಯೇ ದುರ್ಯೋಧನನೂ ಅಲ್ಲಿಗೆ ಬಂದು ಆತನ ತಲೆಯ ಬಳಿಯಲ್ಲಿ ಕುಳಿತನು. ಸ್ವಲ್ಪ ಹೊತ್ತಿನಲ್ಲಿಯೇ ಶ್ರೀಕೃಷ್ಣನು ಮೈಮುರಿದು ಮೇಲಕ್ಕೇಳಲು ಮೊದಲು ಅರ್ಜುನನು ಕಣ್ಣಿಗೆ ಬಿದ್ದ. ತಿರುಗಿ ನೋಡಿದರೆ ತಲೆಯ ಕಡೆ ದುರ್ಯೋಧನ. ಇಬ್ಬರನ್ನೂ ಆದರೋಪಚಾರಗಳಿಂದ ಸತ್ಕರಿಸಿ "ಇಬ್ಬರು ರಾಜರೂ ಒಟ್ಟಿಗೆ ಬಂದಿರುವಿರಿ; ಇದೇನಾಶ್ಚರ್ಯ! ನೀವು ಬಂದ ಕಾರ್ಯವೇನು?" ಎಂದು ಕೇಳಿದ. ಕುರುರಾಜನೇ ಆತನ ಪ್ರಶ್ನೆಗೆ ಉತ್ತರಕೊಟ್ಟ— "ಪಾಂಡವರಿಗೂ ನನಗೂ ವೈಮನಸ್ಯವುಂಟಾಗಿದೆ. ರಾಜ್ಯಕ್ಕಾಗಿ ನಾವಿಬ್ಬರೂ ಕಾದುವವರಾಗಿದ್ದೇವೆ. ನಮ್ಮಿಬ್ಬರಿಗೂ ನೀವು ಸಹಾಯಕರಾಗಬೇಕು.

ದುರ್ಯೋಧನನ ಮಾತುಗಳನ್ನು ಕೇಳಿ ಶ್ರೀಕೃಷ್ಣನಿಗೆ ಸಹಿಸಲಿಲ್ಲ. "ಅಯ್ಯಾ, ಕೌರವೇಶ್ವರ! ಈ ಭೂರಮಣಿ ಯಾವನೊಬ್ಬ ರಾಜನೊಡನೆಯೂ ಒಕ್ಕತನವಿದ್ದು ಆತನೊಡನೆ ಸಹಗಮನ ಮಾಡಿದವಳಲ್ಲ. ಇದನ್ನು ಸ್ವಲ್ಪವೂ ವಿಚಾರಿಸದೆ ಈ ಭೂಮಿಯು ತಮ್ಮದೆಂದೇ ಭಾವಿಸಿದ ರಾಜರು ನರಕಕ್ಕೆ ಇಳಿದು ಹೋಗುತ್ತಾರೆ. ಈಗ ನೀವು ಯುದ್ಧ ಮಾಡಿದುದಾದರೆ ಚಂದ್ರ ಸೂರ್ಯರಿರುವವರೆಗೂ ನಿಮಗೆ ಅಪಕೀರ್ತಿ ತಪ್ಪಿದುದಲ್ಲ. ಟಗರುಗಳನ್ನು ಹುರಿದುಂಬಿಸಿ ಕಾಳಗಕ್ಕೆ ಬಿಡುವಂತೆ ನಿಮ್ಮನ್ನು ಹುರಿದುಂಬಿಸುತ್ತಿದ್ದಾರೆ, ನೀಚರಾದವರು. ನಿಮ್ಮ ನಿಮ್ಮಲ್ಲಿ ಜಗಳ ಬೇಡ. ನೀವು ನೀವು ಸುಖವಾಗಿ ಬದುಕಿರುವುದನ್ನು ಕಂಡರೆ ನನಗೆಷ್ಟೋ ಸಂತೋಷ" ಎಂದನು.

ದುರ್ಯೋಧನನು ಬಂದಿದ್ದುದು ಧರ್ಮಶ್ರವಣಕ್ಕಾಗಿ ಅಲ್ಲ, ಯುದ್ಧದಲ್ಲಿ ಸಹಾಯವನ್ನು ಕೋರುವುದಕ್ಕಾಗಿ. ಕೃಷ್ಣನಿಗೆ ಇದನ್ನು ಸ್ಪಷ್ಟಪಡಿಸಿದ. ಆಗ ಕೃಷ್ಣನು ಅರ್ಜುನನ ಮುಖವನ್ನು ನೋಡಿ "ಅಯ್ಯಾ, ನೀನೇನು ಹೇಳುವೆ?" ಎಂದನು. ಅರ್ಜುನನು "ನಾನು ಹೇಳುವುದಿನ್ನೇನು? ದುರ್ಯೋಧನನು ಹೇಳಿದುದೇ

ನನ್ನ ಹೇಳಿಕೆ" ಎಂದ. ಕೃಷ್ಣನು ಒಬ್ಬನೇ ಇಬ್ಬರಿಗೂ ಸಹಾಯಕನಾಗುವುದು ಅಸಾಧ್ಯ. ಆದ್ದರಿಂದ ಅವರನ್ನು ಕುರಿತು "ನಾನು ಯುದ್ಧ ಮಾಡುವವನಲ್ಲ; ಬರಿಯ ಉಡಾಡಿಭಟ್ಟ ; ನಾನೊಂದು ಕಡೆ. ನಮ್ಮ ಅಪರಿಮಿತ ಸೈನ್ಯ, ಸೇನಾನಿಗಳು ಇನ್ನೊಂದು ಕಡೆ. ಇದರಲ್ಲಿ ನಿಮಗೆ ಬೇಕಾದುದನ್ನು ನೀವು ಆರಿಸಿಕೊಳ್ಳಬಹುದು. ಅರ್ಜುನಾ! ನೀನು ಚಿಕ್ಕವನು. ಆದುದರಿಂದ ಮೊದಲು ನಿನ್ನ ಸರದಿ. ಬೇಕಾದುದನ್ನು ಆಯ್ದುಕೋ" ಎಂದ. ಅರ್ಜುನನು "ನಾವು ಅಡವಿಯ ತಿರುಕರು. ಇಷ್ಟು ಸೈನ್ಯವನ್ನು ಸಂತೈಸುವುದು ಸಾಧ್ಯವಿಲ್ಲ. ನೀನೊಬ್ಬನೇ ನಮಗೆ ಸಾಕು. ಸಿರಿವಂತನಾದ ಕೌರವರಾಯನೇ ನಿನ್ನ ಸೈನ್ಯವನ್ನೆಲ್ಲಾ ಸ್ವೀಕರಿಸಲಿ" ಎಂದನು. ದುರ್ಯೋಧನನೂ ಇದಕ್ಕೆ ಒಪ್ಪಿ ಸಂತೋಷದಿಂದ ಹಿಂತಿರುಗಿದನು.

ಅತ್ತ ದುರ್ಯೋಧನನು ಹೋಗುತ್ತಲೇ ಇತ್ತ ಶ್ರೀಕೃಷ್ಣನು ಅರ್ಜುನನನ್ನು ಕುರಿತು "ಏನಯ್ಯಾ, ಕತ್ತಿಯನ್ನು ಬಿಸುಟು ಒರೆಯನ್ನು ಅಂಗೀಕರಿಸಿದೆಯಲ್ಲಾ! ಕಾದುವಂತಿಲ್ಲ ಕಟ್ಟುವಂತಿಲ್ಲ, ಇಂತಹವನನ್ನು ಸ್ವೀಕರಿಸಿದೆಯಲ್ಲಾ, ನೀನೆಂತಹ ದಡ್ಡ" ಎಂದು ಹಾಸ್ಯಮಾಡಿದನು. ಅರ್ಜುನನೂ ನಗುತ್ತಾ "ನಿಮ್ಮ ಗರುಡಿಯಲ್ಲಿ ನನಗೂ ಸ್ವಲ್ಪ ಪರಿಶ್ರಮವಿದೆ. ನಾನು ತಮ್ಮ ಪಟ್ಟ ಶಿಷ್ಯ" ಎಂದನು. ಆಗ ಕೃಷ್ಣನು "ಅಯ್ಯಾ, ನೀವು ನನ್ನನ್ನು ದೇವರೆಂದು ಕರೆಯುತ್ತೀರಿ; ಗೌರವಿಸುತ್ತೀರಿ. ನಮಗೆ ಗೊತ್ತಿದೆ, ನಮ್ಮಲ್ಲಿ ದೇವತನವೇನೂ ಇಲ್ಲವೆಂದು. ಈಗ ಹೇಳು, ನಾವು ಬಂದು ಅಲ್ಲಿ ಏನು ಮಾಡಬೇಕು? ನಾವು ಪರರ ಹಂಗಿನಲ್ಲಿರುವುದನ್ನು ಸಹಿಸುವುದಿಲ್ಲ. ನಮಗೇನಾದರೂ ಒಂದು ಕೆಲಸವನ್ನು ವಹಿಸು" ಎಂದನು. ಅರ್ಜುನನ ದೃಷ್ಟಿಯಲ್ಲಿ ಕೃಷ್ಣನು ಬರಿಯ ದೇವರಲ್ಲ; 'ದೇವರದೇವರೊಡೆಯ.' ಆದ್ದರಿಂದ ಆತನನ್ನು ಕುರಿತು "ನೀವು ನನ್ನ ಸಾರಥಿಯಾಗಿದ್ದುಕೊಂಡು ನಮ್ಮನ್ನು ಕಾಪಾಡಬೇಕು" ಎಂದು ಹೇಳಿ ಅಡ್ಡಬಿದ್ದನು. ಕೃಷ್ಣನು ಸಂತೋಷದಿಂದ ಆ ಕಾರ್ಯವನ್ನು ಸ್ವೀಕರಿಸಿ ಆತನೊಡನೆ ಪಾಂಡವರ ಬಳಿಗೆ ಹೊರಟುಬಂದನು.

ಪಾಂಡವ ಕೌರವರು ಪರಸ್ಪರ ಯುದ್ಧಕ್ಕೆ ಸಿದ್ಧರಾಗುತ್ತಿದ್ದರೂ ಸಂಧಿಯನ್ನು ಬೇಡಿ ಪಾಂಡವರು ಅಟ್ಟಿದ ಪುರೋಹಿತನೊಬ್ಬನು ಕೌರವರಿಂದ ತಿರಸ್ಕೃತನಾಗಿ ಹಿಂದಿರುಗಿದನು. ಅಷ್ಟೇ ಅಲ್ಲ. ಹಿಂದೆಯೇ ದುರ್ಯೋಧನನು ಸಂಜಯನೊಡನೆ ತನ್ನ ಅಭಿಪ್ರಾಯವನ್ನು ಪಾಂಡವರಿಗೆ ಸ್ಪಷ್ಟವಾಗಿ ಹೇಳಿಕಳುಹಿಸಿದನು—"ಸಂಗರದಲ್ಲಿ, ಅಸಿಧಾರೆಯಲ್ಲಿ ರಾಜ್ಯವನ್ನು ಕೊಡಬೇಕೇ ಹೊರತು ಹಾಗೆಯೇ ಕೊಟ್ಟರೆ ಅಧರ್ಮವಾದೀತು" ಎಂದು. ಈ ಮಾತುಗಳನ್ನು ಕೇಳಿ ಪಾಂಡವ ಪಕ್ಷದವರೆಲ್ಲರೂ ಕಿಡಿಕಿಡಿಯಾದರು. ಧರ್ಮಜನೂ ಕೃಷ್ಣನೂ ಅವರನ್ನು ಸಮಾಧಾನಗೊಳಿಸಿ, ಸಂಜಯನನ್ನು ಮರ್ಯಾದೆಯಿಂದ ಪುರಸ್ಕರಿಸಿ, ಬೀಳ್ಕೊಟ್ಟರು. ದುರ್ಯೋಧನನ ಹಟಮಾರಿತನಕ್ಕೆ ತಕ್ಕ ಫಲವು ಸನ್ನಿಹಿತವಾಗುತ್ತ ಬಂತು.

ಸಂಜಯನು ಅತ್ತ ಹೋಗುತ್ತಲೇ, ಇತ್ತ ಪಾಂಡವರು ಕೃಷ್ಣನ ಬಳಿಯಲ್ಲಿ ಮಂತ್ರಾಲೋಚನೆಯನ್ನು ನಡಸಿದರು. ಈಗ ಪಾಂಡವರ ಕರ್ತವ್ಯವೇನು? ಸಂಧಿಯೋ ಸಮರವೋ? ಕೃಷ್ಣನು ಪಾಂಡವರಲ್ಲಿ ಒಬ್ಬೊಬ್ಬರ ಅಭಿಪ್ರಾಯವನ್ನೂ ಕೇಳುತ್ತಾ ಬಂದನು. ಧರ್ಮರಾಯನಿಗೆ 'ಸೋದರರಲ್ಲಿ ಕಡಿದಾಡಿದರೆಂಬ ಅಪಕೀರ್ತಿ

ತನಗೆ ಬರುವುದಲ್ಲಾ' ಎಂದು ಅಳುಕು. 'ಕೌರವನ ಕೈಯಲ್ಲಿ ಐದೂರುಗಳನ್ನು ಕೊಡಿಸಿ ಕೊಟ್ಟರೆ ತಮ್ಮೈವರಿಗೂ ಅಷ್ಟೇ ಸಾಕು' ಎಂದು ಆತನ ಮತ. ಈ ಅಭಿಪ್ರಾಯ ವನ್ನು ಕೇಳಿ ಕೃಷ್ಣನಿಗೆ 'ಇದೇನು ಹುಚ್ಚು' ಎನ್ನಿಸಿತು. ಭೀಮನನ್ನು ಪ್ರಶ್ನಿಸಿದ. ಆತನೂ ಅಣ್ಣನ ದಾರಿಯನ್ನೇ ಹಿಡಿಯಬೇಕೆ! ಕೃಷ್ಣನಿಗೆ ಕಕ್ಕಾಬಿಕ್ಕಿಯಾಯಿತು. 'ಹಾಲಾಹಲವು ಅಮೃತವಾದಂತೆ, ಪಳ್ಳುರಿ ಶೀತಳವಾದಂತೆ, ಈ ಭೀಮನು ಸಂಧಿಗೆ ಒಲಿದನಲ್ಲಾ !' ಎಂದುಕೊಂಡು 'ಕುಂತಿಯ ಹೊಟ್ಟೆಯಲ್ಲಿ ಒಳ್ಳೆಯ ಸತ್ಪುತ್ರ ಹುಟ್ಟಿದೆಯಯ್ಯಾ' ಎಂದನು. ಅರ್ಜುನ ನಕುಲರೂ ತಮ್ಮ ಅಣ್ಣಂದಿರನ್ನೇ ಅನುಸರಿಸಿದರು. ಸಹದೇವನೊಬ್ಬನು ಮಾತ್ರ ಯುದ್ಧವನ್ನು ನಿಶ್ಚಯಿಸಿದ. 'ದೇವ, ನನಗೆ ಸಂಧಿ ಸೇರದು ; ಸಂಗರವೇ ಸಮ್ಮತ, ಎಂದು ಸ್ಪಷ್ಟವಾಗಿ ತನ್ನ ಅಭಿಪ್ರಾಯ ವನ್ನು ತಿಳಿಸಿದ. ಅನಂತರ ಶ್ರೀಕೃಷ್ಣನು ದ್ರೌಪದಿಯ ಅಭಿಪ್ರಾಯವನ್ನು ಅರಿಯು ವುದಕ್ಕಾಗಿ ಆಕೆಗೆ ಹೇಳಿಕಳುಹಿಸಿದ. ಕರೆಯಲು ಬಂದ ಆಳಿನಿಂದ ಆಕೆಗೆ ತನ್ನ ಪತಿ ಗಳ ಅಭಿಪ್ರಾಯ ತಿಳಿಯಿತು. ಕೌರವರೊಡನೆ ಸಂಧಾನವೆಂಬುದನ್ನು ಕೇಳಿ ಅವಳು ಕಿಡಿಕಿಡಿಯಾದಳು. ಪಾಪಿಗಳಾದ ತನ್ನ ಪತಿಗಳು ತನ್ನನ್ನು ಕೈಬಿಟ್ಟರು. ಶ್ರೀಕೃಷ್ಣನೂ ಇದಕ್ಕೆ ಒಪ್ಪಿಬಿಟ್ಟರೆ ತನ್ನ ದುಃಖಕ್ಕೆ ಪಾರವಿಲ್ಲವೆಂದುಕೊಂಡು ಹೊರಟು ಬಂದಳು. ಸಭಾಂಗಣವನ್ನು ಪ್ರವೇಶಿಸುತ್ತಿದ್ದಂತೆಯೇ ಭೀಮನನ್ನು ಛೀಗುಟ್ಟುವುದಕ್ಕೆ ಮೊದಲು ಮಾಡಿದಳು. 'ಎಲೈ ವಾಯುಕುಮಾರನೇ, ಸಂಧಾನಕ್ಕೆ ಒಪ್ಪಿ ನಿನ್ನ ಪೌರುಷವನ್ನೆಲ್ಲಾ ನೀರಿನಲ್ಲಿ ಕಲಕಿಬಿಟ್ಟೆಯಾ ? ಕೌರವೇಂದ್ರನ ಸೇವೆಯೇ ನಿನಗೆ ಅಭಿಮತವಾಗಿ ತೋರಿತಲ್ಲವೆ ? ಅಯ್ಯೋ, ಈ ಸಂಧಿಯೆಂಬ ಮಾತಿನಿಂದ ಚಂದ್ರವಂಶವು ರಸಾತಲಕ್ಕೆ ಇಳಿದಂತಾಯಿತು. ಪಾಂಡವರೆಲ್ಲರೂ ರೋಷಚ್ಯುತರಾಗಿ, ಯತಿಗಳಾಗಿ ಹೋದರು. ಅವರ ಕ್ಷಾತ್ರತೇಜಸ್ಸು ಹೇಳ ಹೆಸರಿಲ್ಲದಂತಾಯಿತು. ಎಲೈ ಭೀಮಸೇನನೆ, ಒಮ್ಮೆ ನನ್ನ ಕಡೆ ಪ್ರೇಮದೃಷ್ಟಿಯನ್ನು ಬೀರು. ಲೋಕದಲ್ಲಿ ಹೆಂಡತಿಯ ಮಾನಸಂರಕ್ಷಣೆ ಗಿಂತಲೂ ಅಧಿಕವಾದ ಅಭಿಮಾನವಸ್ತುವಿಲ್ಲ. ಸಾಮಾನ್ಯ ಜನರು ಕೂಡ ಈ ಕಾರ್ಯ ಕ್ಕಾಗಿ ಪ್ರಾಣದ ಹಂಗು ತೊರೆದು ಹೋರಾಡುವರು. ಇಂತಹುದರಲ್ಲಿ ನನಗೆ ಒಬ್ಬರಲ್ಲ, ಐವರು ಮಹಿಮಾಶಾಲಿಗಳಾದ ಗಂಡರಿದ್ದಾರೆ. ಏನು ಪ್ರಯೋಜನ ? ಎಲೈ ಶ್ರೀಕೃಷ್ಣಸ್ವಾಮಿಯೇ, ಹಿಂದೆ ನನ್ನ ಮುಂದಲೆಯನ್ನು ಹಿಡಿದೆಳೆದು, ತುಂಬಿದ ಸಭೆ ಯಲ್ಲಿ ಅಪಮಾನಗೊಳಿಸಿದಾಗ ಈ ಪತಿಗಳೈವರೂ ಮೌನಧಾರಿಗಳಾಗಿಯೇ ಇದ್ದರು. ನೀನು ನನ್ನ ಮಾನವನ್ನು ಸಂರಕ್ಷಿಸಿದೆ. ಇಂದು ನೀನೂ ನನ್ನ ಕೈಬಿಡುತ್ತಿರುವೆ. ಹೋಗಲಿ, ಯಾರ ಹಂಗೂ ಬೇಡ. ನನ್ನ ಮಕ್ಕಳೂ ನನ್ನ ತವರುಮನೆಯವರೂ ಹೋರಾಡಿ ನನ್ನನ್ನು ಸಂರಕ್ಷಿಸುವರು" ಎಂದಳು.

ದ್ರೌಪದಿಯ ನಿಟ್ಟುಸಿರಿನ ಬಿರುಗಾಳಿ ಭೀಮನ ರೋಷವಹ್ನಿಯನ್ನು ಹೊತ್ತಿಸಿತು. ತುಟಿಗಳನ್ನು ಕಡಿಯುತ್ತಾ ಮೇಲಕ್ಕೆದ್ದು "ಎಲೈ ಹೆಣ್ಣೆ, ಸಮಾಧಾನ ಮಾಡಿಕೊ. ನೀನು ಸುರಿಸಿದ ಕಂಬನಿಗಳಿಗೆ ಶತಸಾವಿರಮಡಿಯಷ್ಟು ಕಣ್ಣೀರನ್ನು ಶತ್ರುಗಳ ಹೆಂಡಿರು ಸುರಿಸುವಂತೆ ಮಾಡುತ್ತೇನೆ" ಎಂದು ಹೇಳಿ ಕೃಷ್ಣನ ಕಡೆ ತಿರುಗಿದನು. "ಎಲೈ ನರಕಮರ್ದನನೇ, ನನಗೆ ಸಂಧಿಯಲ್ಲಿ ಮನಸ್ಸಿಲ್ಲ. ಸಮರವೇ ಸರ್ವಾರ್ಥ. ಇಗೋ, ಇದು ನನ್ನ ಪ್ರತಿಜ್ಞೆ—ಶತ್ರುವನ್ನು ನೆಲಕ್ಕೆ ಕೆಡವಿ ಆತನ ಕರುಳದಂಡೆ

ಯನ್ನು ಈ ನನ್ನ ಮುಡದಿಗೆ ಮುಡಿಸುತ್ತೇನೆ. ಅವನ ಸಹೋದರರ ರಕ್ತವನ್ನು ಶಾಕಿನಿಯರಿಗೆ ಯಥೇಷ್ಟವಾಗಿ ಕುಡಿಸುತ್ತೇನೆ. ನೀನು ಬೇಕಾದರೆ ಸಂಧಿಯನ್ನು ಮಾಡಿ ಈ ನಾಲ್ವರಿಗೂ ನಾಲ್ಕು ಊರುಗಳನ್ನು ಕೊಡಿಸು. ನನಗೆ ಕೌರವನ ಎರಡು ಊರು (ತೊಡೆ)ಗಳೇ ಸಾಕು” ಎಂದನು.

ಶ್ರೀಕೃಷ್ಣ ಬಲು ಚತುರ. “ಏನಯ್ಯಾ, ನಿಮ್ಮ ನಿಮ್ಮಲ್ಲಿ ಒಂದು ನಿಶ್ಚಯವಿಲ್ಲದಿದ್ದರೆ ರಾಜಕಾರ್ಯವನ್ನು ನಡಸುವುದು ಹೇಗೆ? ಅಯ್ಯಾ ಧರ್ಮರಾಯ, ನೀನು ಹಿರಿಯ. ನೀನು ಮುಂದೆ ಏನು ಮಾಡಬೇಕೆಂಬುದನ್ನು ನಿಶ್ಚಯಿಸು” ಎಂದು ಹೇಳಿದ. ಧರ್ಮರಾಯ ಏನು ಹೇಳುತ್ತಾನೆ, ಪಾಪ! “ಏನು ಮಾಡಬೇಕೆಂಬುದು ನಿನಗೇ ಗೊತ್ತು. ನಮ್ಮ ಅಭ್ಯುದಯ ನಿನ್ನ ಅಧೀನ” ಎಂದನು. ಶ್ರೀಕೃಷ್ಣನು ಸಂಧಿಗಾಗಿ ಕೌರವನ ಬಳಿಗೆ ಹೋಗಬೇಕೆಂದೇ ನಿಶ್ಚಯವಾಯಿತು. ಆದರೆ ಹೋಗುವ ಮುನ್ನ ದ್ರೌಪದಿಯನ್ನು ಕುರಿತು “ತಾಯಿ, ಯುದ್ಧವನ್ನೇ ನಿಶ್ಚಯಿಸಿಕೊಂಡು ಬರುತ್ತೇನೆ. ಪಾಂಡವರು ಯುದ್ಧವನ್ನು ತಿರಸ್ಕರಿಸಿದರೆ ನಾನು ನಿನ್ನ ಶತ್ರುಗಳನ್ನು ಸೀಳಿ ಅವರ ಕರುಳ ದಂಡೆಯನ್ನು ನಿನ್ನ ಕಬರಿಯಲ್ಲಿ ಮುಡಿಸುತ್ತೇನೆ. ನನ್ನ ತಂದೆತಾಯಿಗಳ ಮೇಲೆ ಆಣೆಯಿಟ್ಟು ಹೇಳುತ್ತೇನೆ; ನನ್ನ ಮಾತನ್ನು ನಂಬು” ಎಂದು ಹೇಳಿದನು. ರಾಜನೀತಿಜ್ಞನಾದ ಆತನಿಗೆ ಗೊತ್ತು—ಸಮರ ಅನಿವಾರ್ಯವೆಂದು.

ಶ್ರೀಕೃಷ್ಣನು ಕೌರವರಲ್ಲಿ ಸಂಧಿಗಾಗಿ ಬರುತ್ತಿರುವುದನ್ನು ಕೇಳಿ ಹಸ್ತಿನಾಪುರದಲ್ಲಿ ಕೇವಲ ಸಂಭ್ರಮ. ಹಲವರಿಗೆ ಆತನು ಪರಮಾತ್ಮನೆಂದು ಭಕ್ತಿ; ಉಳಿದವರು ಆತನ ಪ್ರತಿಭೆಗೆ ತಲೆಬಾಗಿದವರು. ಅಂತೂ ಎಲ್ಲರೂ ಆತನ ಬರವನ್ನು ಉತ್ಸಾಹದಿಂದ ಇದಿರು ನೋಡುತ್ತಿದ್ದರು. ಹಸ್ತಿನಾಪುರವೆಲ್ಲವೂ ಬಹುಸುಂದರವಾಗಿ ಅಲಂಕೃತವಾಯಿತು. ಪ್ರಮುಖರಾದವರೆಲ್ಲರೂ ತಮ್ಮ ಮನೆಗೆ ಶ್ರೀಕೃಷ್ಣನು ಬರುವನೆಂದು ಹಾರೈಸುತ್ತಾ ಸಕಲ ಸಂಭಾರಗಳನ್ನೂ ಸಿದ್ಧಗೊಳಿಸಿದ್ದರು. ಕೌರವನಂತೂ ತನ್ನ ಮನೆಗೆ ಆತನು ಬರದೆ ಇರುವುದೇ ಇಲ್ಲವೆಂದು ಸಾರವಸ್ತುಗಳನ್ನು ತರಿಸಿ ಆರೋಗಣೆಗೆ ಸಿದ್ಧಗೊಳಿಸಿದ್ದ. ಆದರೆ ಕೃಷ್ಣನು ತಲೆ ತಲೆಯಾದವರಾರ ಮನೆಯಲ್ಲಿಯೂ ಇಳಿದುಕೊಳ್ಳಲಿಲ್ಲ. ಕಡುಬಡವನಾದ ವಿದುರನ ಮನೆಗೆ ಹೋಗಿ ಇಳಿದುಕೊಂಡನು. ಇದರಿಂದ ಎಲ್ಲರಿಗೂ ಆಶಾಭಂಗವಾಯಿತು.

ವಿದುರನಿಗೆ ಶ್ರೀಕೃಷ್ಣ ಪರಮಾತ್ಮನು ತನ್ನ ಮನೆಗೆ ಬಂದನೆಂದು ಹಿಡಿಸಲಾರದಷ್ಟು ಆನಂದ; ಹುಚ್ಚನಂತೆ ತಕತಕ ಕುಣಿದಾಡಿಬಿಟ್ಟನು. ಶ್ರೀಕೃಷ್ಣನು ಆತನನ್ನು ಕೆಣಕಿ ಸ್ವಲ್ಪ ಕೀಟಲೆ ಮಾಡಿದ. ‘ಏನಯ್ಯಾ ವಿದುರ! ನಾವು ಹಸಿದು ಹೊಟ್ಟೆಗಾಗಿ ಹಾತುವರಿಯುತ್ತಾ ಕುಳಿತಿದ್ದರೆ ನೀನು ತಕತಕ ಕುಣಿದಾಡುತ್ತಿದ್ದೀಯಲ್ಲಾ! ಇದರಿಂದ ನಮ್ಮ ಹೊಟ್ಟೆಯ ಕುಣಿತ ನಿಲ್ಲುತ್ತದೆಯೇ? ರಾಜ ಮಹಾರಾಜರೆಲ್ಲಾ ಪ್ರಾರ್ಥಿಸುತ್ತಿದ್ದರೂ ಅದನ್ನು ತಿರಸ್ಕರಿಸಿ ನಿನ್ನ ಬಳಿಗೆ ಬಂದಿದ್ದೇನೆ’ ಎಂದನು. ಆದರೆ ವಿದುರನ ಮನೆಯಲ್ಲಿ ಏಕಾದಶಿ ಪ್ರತ್ಯಕ್ಷ. ಇಲ್ಲ ಎನ್ನದಂತೆ ಒಂದು ಕುಡಿತೆ ಹಾಲು ಮಾತ್ರ ಇತ್ತು. ಅದನ್ನೇ ವಿದುರನು ಅರ್ಪಿಸಿದ; ಕೃಷ್ಣನು ಅದನ್ನೇ ಸ್ವೀಕರಿಸಿ ತೃಪ್ತಿಗೊಂಡ. ಅನಂತರ ಕೌರವನಿಗೆ ಆತನನ್ನು ಕಾಣಲು ತಾನು ಇಚ್ಛಿಸುವುದಾಗಿ ವಿದುರನೊಡನೆ ಹೇಳಿ ಕಳುಹಿಸಿದ. ಕೃಷ್ಣನ ಚರ್ಯೆಯಿಂದ ಸಂತಪ್ತನಾಗಿದ್ದ

ದುರ್ಯೋಧನನು "ಆತನು ಬಂದಿರುವುದಿನ್ನೇತಕ್ಕೆ ? ಶತ್ರುಗಳಿಗೆ ಸಹಾಯಕವಾಗಿ ರಾಯಭಾರಕ್ಕೆ ಬಂದಿರಬೇಕು, ಈ ದಿನ ಆಗುವುದಿಲ್ಲ ; ನಾಳೆ ಕಾಣಿಸಿಕೊಳ್ಳುತ್ತೇನೆ" ಎಂದು ಪ್ರತ್ಯುತ್ತರ ಹೇಳಿಕಳುಹಿಸಿದ.

ಮರುದಿನ ಸುಯೋಧನನು ಅತ್ಯಂತ ಠೀವಿಯಿಂದ ತನ್ನ ಒಡ್ಡೋಲಗವನ್ನು ನೆರಹಿದನು. ಸಹೋದರರೂ ಸಂಬಂಧಿಗಳೂ ಮಂತ್ರಿಗಳೂ ಸಾಮಂತರೂ ರತ್ನಖಚಿತ ವಾದ ಪೀಠಗಳನ್ನು ಅಲಂಕರಿಸಿ ಕುಳಿತುಕೊಂಡರು. ಉನ್ನತವಾದ ರತ್ನಸಿಂಹಾಸನದ ಮೇಲೆ ಸಾರ್ವಭೌಮನಾದ ಸುಯೋಧನನು ಮಂಡಿಸಿದನು. ಇಕ್ಕೆಲದಲ್ಲಿಯೂ ಸುಂದರಿಯರಾದ ತರುಣಿಯರು ಚಾಮರವಿಕ್ಕುತ್ತಿದ್ದರು. ಆ ಸಮಯದಲ್ಲಿ ದುರ್ಯೋಧನನ ಅನುಮತಿಯಂತೆ ಶ್ರೀಕೃಷ್ಣನು ಸಭೆಯನ್ನು ಪ್ರವೇಶಿಸಿದನು. ಒಡನೆಯೇ ಭೀಷ್ಮದ್ರೋಣಾದಿಗಳು ಎದ್ದು ಬಂದು ಆತನನ್ನು ಕರೆತಂದರು. ಸಭೆ ಯಲ್ಲಿದ್ದವರೆಲ್ಲರೂ ಪೀಠಗಳಿಂದ ಮೇಲಕ್ಕೆದ್ದು ವಂದಿಸಿ ಶ್ರೀಕೃಷ್ಣನನ್ನು ಗೌರವಿಸಿ ದರು. ದುರ್ಯೋಧನನು ಮಾತ್ರ "ಇವನಾವ ಮಹಾ" ಎಂದುಕೊಂಡು, ಕುಳಿತೇ ಇದ್ದನು. ಆದರೇನು ? ಮಹಿಮಾಪುರುಷನಾದ ಶ್ರೀಕೃಷ್ಣನ ಇದಿರಿನಲ್ಲಿ ಆತನ ಹೆಮ್ಮೆ ಎಲ್ಲಿ ನಡೆಯಬೇಕು ? ಸಿಂಹಾಸನದ ಗೊಣಸು ಮುರಿದು, ಕೆಳಗೆ ಬಿದ್ದನು. ಶ್ರೀಕೃಷ್ಣನು ಕಾಲೋಚಿತವಾಗಿ ಆತನನ್ನು ಸಮಾಧಾನಪಡಿಸಿ ತನಗಾಗಿ ತೆರವಾಗಿದ್ದ ಸಿಂಹಾಸನವನ್ನು ಏರಿ ಕುಳಿತನು.

ದುರ್ಯೋಧನನು ತನಗಾದ ಆಕಸ್ಮಿಕ ಅಪಮಾನದಿಂದ ನೊಂದು ಮ್ಲಾನವದನ ನಾಗಿದ್ದನು. ಆತನನ್ನು ಕುರಿತು ಶ್ರೀಕೃಷ್ಣನು "ಏನು ಭಾವನವರೇ, ಕುಶಲವೇ ? ಮುಖದ ಮೇಲೆ ದುಗುಡವೇಕೆ" ಎಂದು ಪರಿಹಾಸಮಾಡಿದನು. ಅದಕ್ಕೆ ಸುಯೋಧ ನನು ಕಟುಪರಿಹಾಸದೊಡನೆ ಉತ್ತರ ಕೊಟ್ಟನು—"ಏನೋ ತಾವು ಬಿಜಯಮಾಡಿದಿ ರೆಂದು ಮಹಾವಿಲಾಸದಿಂದ ಷಡ್ರಸೋಪೇತವಾದ ಆಹಾರವನ್ನು ಸಿದ್ಧಗೊಳಿಸಿದೆ. ಆದರೆ ತಮಗೆ ನಮ್ಮಂತಹವರ ಸೇವೆ ಹೇಗೆ ಸರಿಹೋದೀತು ? ವಿದುರನ ಮನೆಯಲ್ಲಿ ಊಟ ಮಾಡಿದಿರಿ. ಗೋವಳಿಗತನ ಹೇಗೆ ಹೋದೀತು ? ಅತಿರಥ ಮಹಾರಥರಾದವ ರೆಲ್ಲಾ ತಮ್ಮ ಬರವಿಗಾಗಿ ಕಾದಿರುವಾಗ ತಾವು ತೊತ್ತಿನ ಮಗನ ಮನೆಯಲ್ಲಿ ಊಟ ಮಾಡುವುದು ನಿಮ್ಮ ಹಣೆಯ ಬರಹವಾಗಬೇಕೆ ? ನಿಮ್ಮ ಹುಟ್ಟು ಸ್ವಭಾವ ನೀವು ಹೇಗೆ ಬಿಟ್ಟೀರಿ ? ರಾಜಠೀವಿ ನಿಮಗೆ ಹೇಗೆ ಸರಿಹೋಗಬೇಕು, ಪಾಪ !" ಎಂದನು.

ಕೌರವನ ನುಡಿಗಳನ್ನು ಶ್ರೀಕೃಷ್ಣನೇನೋ ಸಹಿಸಿದನು, ಆದರೆ ವಿದುರನಿಗೆ ಅದನ್ನು ಸಹಿಸಲಾಗಲಿಲ್ಲ. ತುಂಬಿದ ಸಭೆಯಲ್ಲಿ ತನ್ನನ್ನು ಅಪಮಾನಗೊಳಿಸಿದುದ ಕ್ಕಾಗಿ ಆತನು ಕಿಡಿಕಿಡಿಯಾದನು. ಕೆಂಗಣ್ಣಿನಿಂದ ಕೌರವನನ್ನು ನೋಡುತ್ತಾ "ಎಲವೋ ! ಭೀಮನು ಕೋಪದಿಂದ ನಿನ್ನ ತೊಡೆಗಳನ್ನು ಮುರಿಯುವಂದು ನಿನ್ನ ಸಂರಕ್ಷಣೆಗೆಂದು ಈ ಬಿಲ್ಲನ್ನು ಇರಿಸಿದ್ದೆ, ಇನ್ನು ನನಗೆ ನಿನ್ನ ಹಂಗೇನು" ಎಂದು ಗರ್ಜಿಸುತ್ತ ತನ್ನ ಕೈಯಲ್ಲಿದ್ದ ಧನಸ್ಸನ್ನು ಮುರಿದು ನೆಲಕ್ಕೊಗೆದನು. ಇದನ್ನು ಕಂಡು ಕೌರವನ ಕಡೆಯವರೆಲ್ಲರೂ ತಲ್ಲಣಿಸಿಹೋದರು. ಅನಂತರ ಶ್ರೀಕೃಷ್ಣನು ಕೌರವನನ್ನು ಕುರಿತು "ಅಯ್ಯಾ, ಕುರುರಾಜ ! ಶತ್ರುಗಳ ಮನೆಯಲ್ಲಿ ಅನ್ನಪಾನಾದಿಗಳನ್ನು ಸ್ವೀಕರಿಸಬಾರದೆಂಬುದು ರಾಜನೀತಿ. ನೀನು ಪಾಂಡವರಿಗೆ ಪರಮಶತ್ರು. ಆ

ಪಾಂಡವರು ನನ್ನ ಪ್ರಾಣಕ್ಕೆ ಸಮಾನರು. ಹೀಗಿರುವಲ್ಲಿ ನೀನು ನನ್ನ ಚರ್ಯೆಯನ್ನು ದೂರುವುದೆಂತು?" ಎಂದು ಹೇಳಿದನು. ಕೌರವನು ಅದಕ್ಕೆ ಪ್ರತ್ಯುತ್ತರವಾಗಿ "ನೀನು ಗೋಪೀಜಾರ. ಜಾರೆಯ ಮಕ್ಕಳಿಗೆಲ್ಲಾ ನೀನು ಜೀವ. ಅದರೊಳಗೇನು ತಪ್ಪು? ಅದಿರಲಿ, ನೀನು ಈಗ ಬಂದ ಕಾರ್ಯವೇನು?" ಎಂದನು.

ಶ್ರೀಕೃಷ್ಣನು ತಾನು ಬಂದ ಕಾರ್ಯವನ್ನು ಕೌರವನಲ್ಲಿ ಅರುಹಿದನು—'ಅಯ್ಯಾ ಸುಯೋಧನ, ಪಾಂಡವರು ನಿನ್ನವರು. ಅವರೊಡನೆ ಸ್ನೇಹದಿಂದ ಬಾಳುವುದು ನಿನಗೆ ಹಿತಕರ. ವನವಾಸದಿಂದ ಅವರು ನವೆದುಹೋಗಿದ್ದಾರೆ. ಅವರ ಭಾಗದ ಅರ್ಧ ರಾಜ್ಯವನ್ನು ಅವರಿಗೆ ಬಿಟ್ಟುಕೊಡು. ಈ ಬಾಳು ಅಶಾಶ್ವತ; ಕೀರ್ತಿ ಶಾಶ್ವತ. ನಾನು ಹೇಳುವ ಈ ಮಾತನ್ನು ನಿನ್ನ ಹಿರಿಯರೂ ಒಪ್ಪುತ್ತಾರೆ; ಸತ್ಪುರುಷರೆಲ್ಲರೂ ಒಪ್ಪುತ್ತಾರೆ.' ಆದರೆ ಈ ಸಾಮದ ನುಡಿಗಳು ಆತನ ಮನಸ್ಸನ್ನು ಹೊಗಲಿಲ್ಲ. ಗುರುಹಿರಿಯರು ಹೇಳಿದ ಬುದ್ಧಿವಾದವೂ ವ್ಯರ್ಥವಾಯಿತು. ಕಡೆಗೆ ಕೃಷ್ಣನು "ಅರ್ಧ ರಾಜ್ಯದ ಮಾತು ಹೋಗಲಿ, ಆ ಐವರಿಗೆ ಐದೂರುಗಳನ್ನಾದರೂ ಬಿಟ್ಟು ಕೊಡು" ಎಂದು ಬೇಡಿದನು. ದುರ್ಯೋಧನನು ತನ್ನ ರಾಜ್ಯದಲ್ಲಿ ಮುಳ್ಳುಮೊನೆ ಯಷ್ಟನ್ನು ಕೂಡ ಬಿಟ್ಟುಕೊಡುವುದಿಲ್ಲವೆಂದು ಕಡಾಖಂಡಿತವಾಗಿ ಹೇಳಿಬಿಟ್ಟನು. ಇಷ್ಟೇ ಅಲ್ಲ. ಕೃಷ್ಣನನ್ನು ಪರಿಪರಿಯಾಗಿ ನಿಂದಿಸಿದನು. ಆತನನ್ನು ಹಿಡಿದು ಬಂಧಿಸು ವುದಕ್ಕೆ ಕೂಡ ಪ್ರಯತ್ನಿಸಿದನು. ಆದರೆ ಮಹಿಮಾಪುರುಷನಾದ ಶ್ರೀಕೃಷ್ಣನು ತೋರಿದ ವಿಶ್ವರೂಪದಿಂದ ಸಮಸ್ತರಿಗೂ ಆತನು ಪರಮಾತ್ಮ ಸ್ವರೂಪಿಯೆಂದು ಮನವರಿಕೆಯಾಗಿಹೋಯಿತು.

ಸಂಧಾನಕಾರ್ಯವು ಭಗ್ನವಾಗಿ ಹೋದುದರಿಂದ ಶ್ರೀಕೃಷ್ಣನು ಬಂದ ದಾರಿ ಹಿಡಿದು, ಸಂಧಿ ಮುರಿದುದನ್ನು ಕುಂತಿಗೆ ತಿಳಿಸಿದನು. "ನಿನ್ನ ಐವರು ಮಕ್ಕಳನ್ನು ತಲೆಗಾಯುವಂತೆ ನಿನ್ನ ಮಗನಾದ ಕರ್ಣನನ್ನು ಪ್ರಾರ್ಥಿಸು" ಎಂದು ಆಕೆಗೆ ಬುದ್ಧಿ ವಾದ ಹೇಳಿದನು. ಭೀಷ್ಮ ದ್ರೋಣಾದಿಗಳೆಲ್ಲರಿಂದಲೂ ಬೀಳ್ಕೊಂಡಾಯಿತು; ಕರ್ಣ ನನ್ನು ಮಾತ್ರ ಸ್ವಲ್ಪ ದೂರ ತನ್ನನ್ನು ಸಾಗಕಳುಹಲು ತನ್ನೊಡನೆ ಬರುವಂತೆ ಬೇಡಿ ದನು. ರಥದ ಹೊರಗಿದ್ದ ಆತನನ್ನು ಕೇವಲ ಸಲಿಗೆಯಿಂದ ಕೈಹಿಡಿದು ಒಳಕ್ಕೆ ಎಳೆದುಕೊಂಡನು. ಆತನ ತೊಡೆಗೆ ತನ್ನ ತೊಡೆ ಸೋಕುವಂತೆ ಕೇವಲ ಸಮೀಪದಲ್ಲಿ ಆತನನ್ನು ಕುಳ್ಳಿರಿಸಿಕೊಂಡನು. ಕರ್ಣನಿಗೆ ಕೃಷ್ಣನ ಈ ಬಗೆಯಾದ ಸಲಿಗೆ ಅರ್ಥ ವಾಗಲಿಲ್ಲ. ಸಮಸ್ತರಾಜರಿಂದಲೂ ಸನ್ಮಾನಿತನಾಗುತ್ತಿರುವ ಶ್ರೀಕೃಷ್ಣನೆಲ್ಲಿ, ಕೇವಲ ಶೂದ್ರನೆಂಬ ಅವಹೇಳನಕ್ಕೆ ಗುರಿಯಾದ ತಾನೆಲ್ಲಿ? ಆದ್ದರಿಂದ ಕೃಷ್ಣನನ್ನು ಕುರಿತು "ಸ್ವಾಮಿ, ತಮಗೆ ಸಮಾನನಂತೆ ವರ್ತಿಸುವ ಯೋಗ್ಯತೆ ನನಗೆಲ್ಲಿಯದು?" ಎಂದನು. ಈ ಮಾತುಗಳನ್ನು ಕೇಳಿ ಕೃಷ್ಣನು ಇನ್ನೂ ಸ್ವಲ್ಪ ಆತನ ಸಮೀಪಕ್ಕೆ ಸರಿದನು. ಅನಂತರ ಆತನನ್ನು ಕುರಿತು "ಎಲೈ ಕರ್ಣನೇ, ನಿಜವಾದ ಚಕ್ರವರ್ತಿ ನೀನೆ. ವಂಶದ ಏಳಿಗೆಯಲ್ಲಂತೂ ನೀನು ಸೂರ್ಯವಂಶಲಲಾಮ, ಶ್ರೀರಾಮಚಂದ್ರನಿಗೆ ಸಮಾನನಾದವನು. ನಿನ್ನ ಕುಲಗೌರವಗಳನ್ನರಿಯದ ದುರ್ಯೋಧನನಲ್ಲಿ ಸೇವಾ ವೃತ್ತಿಯನ್ನು ಕೈಕೊಂಡಿರುವೆ. ನಿಜವಾಗಿಯೂ ನೀನು ಪಾಂಡವರಲ್ಲಿ ಹಿರಿಯ. ಕುಂತೀ ದೇವಿ ದುರ್ವಾಸರಿಂದ ಪಡೆದ ಐದು ಮಂತ್ರಗಳಲ್ಲಿ ಮೊದಲನೆಯದರ ಫಲವೇ

ನೀನು. ಹೀಗೆ ಪಾಂಡವರಲ್ಲಿ ನೀನು ಹಿರಿಯನಾಗಿರುವುದರಿಂದ ಭೂಮಿಗಾಗಿ ಪಾಂಡವ ಕೌರವರು ಕಲಹ ಮಾಡಬೇಕಾದ ಪ್ರಮೇಯವೇ ಇಲ್ಲ. ನನ್ನೊಡನೆ ಹೊರಟು ಬಾ. ಪಂಚಪಾಂಡವರನ್ನು ನಿನ್ನ ಪದತಲದಲ್ಲಿ ಉರುಳಿಸುತ್ತೇನೆ. ಹಸ್ತಿನಾಪುರದ ಪಟ್ಟವನ್ನು ಸ್ವೀಕರಿಸಿ, ಎರಡು ಕಡೆಯವರಿಂದಲೂ ಕೈಂಕರ್ಯವನ್ನು ಸ್ವೀಕರಿಸು. ಜಗತ್ತಿನ ಸಮಸ್ತ ರಾಜರುಗಳಿಂದಲೂ ಸೇವೆಯನ್ನು ಕೈಕೊಳ್ಳುತ್ತಾ ಚಕ್ರವರ್ತಿ ಪದವಿಯನ್ನು ಅನುಭವಿಸುವುದನ್ನು ಬಿಟ್ಟು ದುರ್ಯೋಧನನ ಬಳಿಯಲ್ಲಿ "ಜೀಯ, ಹಸಾದ" ಎಂದುಕೊಳ್ಳುತ್ತಾ ಬಿದ್ದಿರಬೇಕೆ?" ಎಂದನು.

ಕೃಷ್ಣನ ಮಾತುಗಳನ್ನು ಕೇಳುತ್ತಾ ಹೋದಂತೆ ಕರ್ಣನಿಗೆ ದಿಕ್ಕೇ ತೋಚದಂತಾಯಿತು. ಕಣ್ಣುಗಳಲ್ಲಿ ನೀರು ಧಾರಾಕಾರವಾಗಿ ಸುರಿಯಿತು. 'ಅಯ್ಯೋ! ಕುರುಪತಿಗೆ ಕೇಡಾಯಿತು' ಎಂದು ಮನದಲ್ಲೇ ಮಿಡುಕಿಕೊಂಡನು. ಈಗ ಕರ್ಣನ ಸ್ಥಿತಿ 'ಅತ್ತ ಪುಲಿ, ಇತ್ತ ದರಿ' ಎಂಬಂತಾಯಿತು. ಪಾಂಡವರೊಡನೆ ಹೋರಾಡಿ ಅವರನ್ನು ಕೊಂದಾನೆ, ಅವರು ಸೋದರರು. ಕೊಲ್ಲದೆ ಬಿಟ್ಟಾನೆಯೆ, ಕೌರವನಿಗೆ ಭೂಮಿಯಲ್ಲಿ ಇರಲು ಎಡೆಯಿಲ್ಲ. ಶ್ರೀಕೃಷ್ಣನ ಭೇದೋಪಾಯವು ಚೆನ್ನಾಗಿ ಫಲಿಸಿಹೋಯಿತು. ಕರ್ಣನು ಏನೂ ತೋಚದೆ ಕ್ಷಣಕಾಲ ಮೌನವಾಗಿದ್ದನು. ಆದರೆ ಕೃಷ್ಣನು ಅವನ ಮೌನವನ್ನು ಮುರಿದನು. "ಏನು ಕರ್ಣಾ, ನಿನ್ನ ಅಭಿಪ್ರಾಯವೇನು? ನಾನೇನೂ ನಿನ್ನ ಅಶ್ರೇಯಸ್ಸನ್ನು ಕೋರತಕ್ಕವನಲ್ಲ. ನಿನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸಿಬಿಡು" ಎಂದನು. ಕರ್ಣನು ತನ್ನ ಕುಲಗೌರವಗಳಿಗೆ ಉಚಿತವಾದ ರೀತಿಯಲ್ಲಿ ಉತ್ತರಕೊಟ್ಟನು.

"ಎಲೈ ಕೃಷ್ಣಸ್ವಾಮಿಯೇ, ನಾನು ಪಾಂಡವರನ್ನು ಸೇರಬಯಸುವುದು ಕೇವಲ ಮರುಳುತನವೇ ಸರಿ. ರಾಜ್ಯೈಶ್ವರ್ಯಗಳನ್ನು ಕಂಡು ನಾನು ಮನಸೋಲುವವನಲ್ಲ. ನನ್ನನ್ನು ಸಲಹಿದ ಒಡೆಯನಿಗೆ ಶತ್ರುಗಳ ತಲೆಯನ್ನು ಕಾಣಿಕೆಯಾಗಿ ಕೊಡಬೇಕೆಂದಿದ್ದೆನು. ಈಗ ಅದು ತಪ್ಪಿತು. ಪಾಂಡವರ ಪ್ರಾಣಗಳು ನನ್ನ ಬಾಣಕ್ಕೆ ಗುರಿಯಾಗುತ್ತಿದ್ದುದನ್ನು ನೀನು ತಪ್ಪಿಸಿದೆ. ಆ ಮೂಲಕ ಸುಯೋಧನನ ಸಾವಿಗೂ ಹೆದ್ದಾರಿಯನ್ನು ನಿರ್ಮಿಸಿದೆ. ಆದರೆ ನಾನು ನನ್ನ ಪ್ರಭುವಿಗಾದ ಗತಿಯನ್ನೇ ಆಲಂಗಿಸುವೆನಲ್ಲದೆ ಪಾಂಡವರಲ್ಲಿ ಸೇರೆನು. ವೀರಕೌರವರಾಯನ ಹಗೆ ನನಗೂ ಹಗೆಯೇ ಸರಿ. ಆತನ ಋಣವು ಹಿಂಗುವಂತೆ ಯುದ್ಧಮಾಡಿ ಸುಭಟಕೋಟಿಯನ್ನು ಸಂಹಾರ ಮಾಡುವೆನು. ಪತಿಕಾರ್ಯದಲ್ಲಿಯೇ ನನ್ನ ಶರೀರವನ್ನು ಸವೆಸುವೆನು. ಆದರೆ ನಿನ್ನ ಪಂಚಪ್ರಾಣದಂತಿರುವ ಪಾಂಡವರನ್ನು ಕೊಲ್ಲುವುದಿಲ್ಲ. ಇದಕ್ಕೆ ನನ್ನ ತಂದೆ ಸೂರ್ಯನೇ ಸಾಕ್ಷಿ" ಎಂದನು.

ಕರ್ಣನ ದೃಢವನ್ನು ಕಂಡು ಕೃಷ್ಣನು ಮನಸಾ ಆತನನ್ನು ಮೆಚ್ಚಿದನು. ತಾನು ಕೈಕೊಂಡ ಕಾರ್ಯವೇನೊ ಫಲಿಸಿದಂತಾಯಿತು. ಆದರೂ ಅಲ್ಲಿಗೇ ಅದನ್ನು ನಿಲ್ಲಿಸದೆ "ಅಯ್ಯಾ, ನೀನು ಪಾಂಡವರ ಕಡೆ ಸೇರಿದರೆ ಸರ್ವಸಂತೋಷ. ಅದಾಗದಿದ್ದರೆ ದುರ್ಯೋಧನನಿಗೆ ಹೇಳಿ, ನಿನ್ನ ತಮ್ಮಂದಿರಿಗೆ ರಾಜ್ಯವನ್ನಾದರೂ ಕೊಡಿಸು. ನಿನ್ನ ಮಾತನ್ನು ಮಿತ್ರನಾದ ಸುಯೋಧನನು ಎಂದಿಗೂ ಅಲ್ಲಗಳೆಯುವುದಿಲ್ಲ" ಎಂದನು. ಆದರೆ ಯುದ್ಧಕ್ಕಾಗಿ ಸರ್ವಸನ್ನಾಹಗಳೂ ಸಿದ್ಧವಾಗಿರುವ ಈ ವಿಷಮ ಸನ್ನಿವೇಶದಲ್ಲಿ

ಸಂಧಿಯ ಸುದ್ದಿಯನ್ನೆತ್ತುವುದು ಅಷ್ಟು ಉಚಿತವಾಗಿ ತೋರಲಿಲ್ಲ, ಕರ್ಣನಿಗೆ. ತನ್ನ ಶೌರ್ಯಕ್ಕೂ ಅದು ಕುಂದೆಂದು ಆತನ ಭಾವನೆ. ಆದ್ದರಿಂದ ಕೃಷ್ಣನ ಮಾತುಗಳನ್ನು ಅವನು ಒಪ್ಪಲಿಲ್ಲ. ಆಗಲೇ ಸೂರ್ಯನು ಮುಳುಗುವ ಸಮಯವಾಗಿದ್ದುದರಿಂದ, ಇನ್ನು ಕೌರವ ವೈರಿಯಾದ ಕೃಷ್ಣನೊಡನೆ ಏಕಾಂತವಾಗಿ ಮಾತನಾಡುತ್ತಿರುವುದು ಅಯೋಗ್ಯವೆನಿಸಿತು, ಆತನಿಗೆ. "ಸ್ವಾಮಿ ನನಗೆ ಅಪ್ಪಣೆಯನ್ನು ಕೊಡಿ; ನಾನು ಹೊರಟುಹೋಗುತ್ತೇನೆ. ಹಾವಿನ ಹುತ್ತದ ಬಳಿಯಿದ್ದ ಹುಲ್ಲಿನ ಸರವೂ ಹಾವೆಂಬ ಭ್ರಮೆಯನ್ನು ಹುಟ್ಟಿಸುತ್ತದೆ. ನೀಚರಾದವರು ನಮ್ಮ ಸಂಭಾಷಣೆಗೆ ಅಪಾರ್ಥ ಕಲ್ಪಿಸಬಹುದು" ಎಂದು ಹೇಳಿ ಆತನಿಂದ ಬೀಳ್ಕೊಂಡು ತನ್ನ ಮನೆಗೆ ಹಿಂದಿರುಗಿದನು.

ಕೃಷ್ಣನು ತನ್ನ ಮನಸ್ಸಿನಲ್ಲಿ ಬಿತ್ತಿದ್ದ ಅಶಾಂತಿಯಿಂದ ಕರ್ಣನಿಗೆ ರಾತ್ರಿಯೆಲ್ಲಾ ನಿದ್ದೆ ಬರಲಿಲ್ಲ. ಕೌರವನ ಗತಿಯೇನು ಎಂಬುದೊಂದೇ ಆತನ ಚಿಂತೆ. ಚಿಂತೆಯಲ್ಲಿಯೇ ರಾತ್ರಿ ಕಳೆದು ಬೆಳಕು ಹರಿಯಿತು. ಆ ದಿನ ಭಾನುವಾರವಾದುದರಿಂದ ಆತನು ಸೂರ್ಯನಿಗೆ ಅರ್ಘ್ಯವನ್ನು ಕೊಡುವುದಕ್ಕಾಗಿ ಗಂಗಾ ನದಿಗೆ ಹೋದನು. ಅಲ್ಲಿ ಸ್ನಾನಮಾಡಿ ಸೂರ್ಯಮಂತ್ರವನ್ನು ಜಪಿಸುತ್ತಾ ನೀರಿನಲ್ಲಿ ನಿಂತಿರಲು, ಕುಂತೀದೇವಿ ಆತನನ್ನು ಅರಸುತ್ತಾ ಅಲ್ಲಿಗೆ ಬಂದಳು. ಕರ್ಣನು ಆಕೆಗೆ ನಮಸ್ಕರಿಸಿ ಕೈಜೋಡಿಸಿ ನಿಂತಿರಲು, ಆಕೆ ಆತನನ್ನು ಪಾಂಡವರ ಪಕ್ಷವನ್ನು ಸೇರುವಂತೆ ಹೇಳಿದಳು. ಕರ್ಣನು ನಿರ್ದಾಕ್ಷಿಣ್ಯವಾಗಿ ತನ್ನ ಅಭಿಪ್ರಾಯವನ್ನು ತಿಳಿಸಿದನು.

ಇಂದು ನೀವುಗಳೆಲ್ಲ ಹೇಳಿದ ಮೇಲೆ ನಾನು ಸೂರ್ಯಪುತ್ರನೆಂದು ಗೊತ್ತಾಯಿತು. ಆದರೆ, ಇದಕ್ಕೆ ಮುನ್ನ ನನ್ನನ್ನು ಕೈಹಿಡಿದು ಉದ್ಧಾರ ಮಾಡಿದ ಕೌರವೇಂದ್ರನು ಏನನ್ನು ನೋಡಿ ಹಾಗೆ ಮಾಡಿದನು? ಈಗ ಬಂದು ಪಾಂಡವರೊಡನೆ ಸೇರಿಕೊಂಡರೆ ಅಪಕೀರ್ತಿ ಬರುತ್ತದೆ. ಆದ್ದರಿಂದ ಅದನ್ನು ಬಿಟ್ಟು ಮತ್ತೇನನ್ನಾದರೂ ಕೇಳು' ಎಂದನು. ಕುಂತಿ ಮಗನಲ್ಲಿ ಎರಡು ವರಗಳನ್ನು ಬೇಡಿದಳು. 'ನಿನ್ನ ಐವರು ತಮ್ಮಂದಿರನ್ನೂ ತಲೆಗಾಯಿ ; ತೊಟ್ಟ ಬಾಣವನ್ನು ತೊಡಬೇಡ.' ಮಹಾನುಭಾವನಾದ ಕರ್ಣನು ತಾಯಿಯ ಮಾತಿಗೆ 'ತಥಾಸ್ತು' ಎಂದನು.

ಅತ್ತ ಶ್ರೀಕೃಷ್ಣನು ಹಸ್ತಿನಾಪುರಿಯಿಂದ ಹಿಂತಿರುಗಿ ಪಾಂಡವರ ಬಳಿಗೆ ಬಂದು ಅಲ್ಲಿ ನಡೆದುದೆಲ್ಲವನ್ನೂ ಅವರಿಗೆ ಹೇಳಿದನು. ಆಗ ಪಾಂಡವರು ತಮ್ಮ ಅಪಾರವಾದ ಸೈನ್ಯದೊಡನೆ ವಿಜಯಯಾತ್ರೆ ಹೊರಟು ಕುರುಕ್ಷೇತ್ರದಲ್ಲಿ ಬೀಡುಬಿಟ್ಟರು.

೬. ವಿಮರ್ಶೆ

i. ವಸ್ತು ಪರಿಶೀಲನೆ

ವಸ್ತು, ಪಾತ್ರ, ರಸ ಇವುಗಳಲ್ಲಿ ಯಾವ ದೃಷ್ಟಿಯಿಂದ ಪರಿಶೀಲಿಸಿದರೂ, ಕನ್ನಡ ಮಹಾಭಾರತದ ಉದ್ಯೋಗಪರ್ವದ ಭಾಗ ಅತ್ಯುತ್ಕೃಷ್ಟವಾಗಿದೆ.

ಹೆಸರಾದ ಕವಿಗಳು ತಮ್ಮ ಕಾವ್ಯಕ್ಕೆ ಸ್ವಂತವಾಗಿ ವಸ್ತುವನ್ನು ಸೃಷ್ಟಿಸಿಕೊಳ್ಳ

ಬಹುದು. ಇಲ್ಲವೆ ಪ್ರಸಿದ್ಧವಾದ ಪುರಾಣೇತಿಹಾಸಗಳಿಂದ ವಸ್ತುವನ್ನು ಆಯ್ದು ಕೊಂಡು, ಆ ವಸ್ತುವನ್ನು ತನಗೆ ತೋರಿದಂತೆ ಮಾರ್ಪಡಿಸಿಕೊಂಡು ಅದರ ಮೇಲೆ ತನ್ನ ಪ್ರತಿಭೆಯ ಮುದ್ರೆಯನ್ನೊತ್ತಿ ಅದನ್ನು ಉತ್ತಮವಾದ ಕಲಾಕೃತಿಯನ್ನಾಗಿ ಪರಿವರ್ತಿಸಿಕೊಳ್ಳಬಹುದು. ಭಾಸ, ಕಾಳಿದಾಸ, ಷೇಕ್ಸ್‌ಪಿಯರ್, ಇವರೇ ಮೊದಲಾದ ಕವಿವರರ ಕೃತಿಗಳನ್ನು ಓದಿದವರಿಗೆ ಈ ವಿಷಯ ಚೆನ್ನಾಗಿ ಮನವರಿಕೆಯಾಗಿರುತ್ತದೆ. ಮಹಾಕವಿ ನಾರಣಪ್ಪನೂ ಈ ಸೂತ್ರಕ್ಕೆ ಹೊರತಾಗಿಲ್ಲ. ಕನ್ನಡ ಮಹಾಭಾರತದ ಉದ್ಯೋಗಪರ್ವಕ್ಕೆ, ಸಂಸ್ಕೃತ ಮಹಾಭಾರತದ ಉದ್ಯೋಗ ಪರ್ವವೇ ಮೂಲ. ಸಂಸ್ಕೃತ ಮಹಾಭಾರತದ ಉದ್ಯೋಗಪರ್ವ (ದಾಕ್ಷಿಣಾತ್ಯ ಪಾಠ)ದಲ್ಲಿ ನೂರತೊಂಬತ್ತಾರು ಅಧ್ಯಾಯಗಳಿವೆ. (೧) ಸೇನೋದ್ಯೋಗಪರ್ವ, (೨) ಸಂಜಯಯಾನಪರ್ವ, (೩) ಪ್ರಜಾಗರಪರ್ವ, (೪) ಸನತ್ಸುಜಾತಪರ್ವ, (೫) ಯಾನ ಸಂಧಿಪರ್ವ, (೬) ಭಗವದ್ಯಾನಪರ್ವ, (೭)ಸೈನ್ಯನಿರ್ಯಾಣಪರ್ವ, (೮) ಉಲೂಕ ದೂತಾಗಮನಪರ್ವ, (೯) ರಥಾತಿಸಂಖ್ಯಾನಪರ್ವ, (೧೦) ಅಂಬೋಪಾಖ್ಯಾನಪರ್ವ ಗಳೆಂಬ ಹತ್ತು ಉಪಪರ್ವಗಳಿವೆ. ಉಪದೇಶ ಉಪಾಖ್ಯಾನಗಳಿಂದ ಕೂಡಿದ ಈ ವಿಸ್ತಾರವಾದ ಕಥೆಯನ್ನು ಕುಮಾರವ್ಯಾಸನು ಹನ್ನೊಂದು ಸಂಧಿಗಳಲ್ಲಿ, ಏಳುನೂರಕ್ಕೆ ಮಿಕ್ಕ ಭಾಮಿನೀಷಟ್ಪದಿಗಳಲ್ಲಿ ಸಂಗ್ರಹಿಸಿದ್ದಾನೆ. ಈ ಸಂಗ್ರಹ ಕಾರ್ಯದಲ್ಲಿ ಮೂಲದ ವಿಸ್ತಾರ ಬೇಸರಗಳನ್ನುಳಿದು ಕಥೆ ರಸವತ್ತಾಗಿ ಬಂದಿದೆ. ಈ ಸಂಗ್ರಹ ಕಾರ್ಯದಲ್ಲಿ ಕವಿ ಮೂಲವನ್ನು ಹೆಜ್ಜೆ ಹೆಜ್ಜೆಗೂ ಅನುಸರಿಸುತ್ತಿರುವುದು ಮಾತ್ರ ವಲ್ಲದೆ ಅನೇಕ ಕಡೆ ಮೂಲದ ಶ್ಲೋಕಗಳನ್ನು ಭಾಷಾಂತರ ಮಾಡುತ್ತಾನೆ. ಇಲ್ಲವೆ ಮೂಲದ ಶ್ಲೋಕದ ಸಾರವನ್ನು ಭಟ್ಟಿಯಿಳಿಸುತ್ತಾನೆ. ಈ ವಿಷಯವನ್ನು ವಿವರಿಸಲು ವಿಸ್ತಾರ ಭಯದಿಂದ ಕೆಲವು ಉದಾಹರಣೆಗಳನ್ನು ಮಾತ್ರ ಇಲ್ಲಿ ಕೊಟ್ಟಿದೆ.

೧. ದ್ರುಪದನ ಮಾತನ್ನು ಕೇಳಿ ಕೃಷ್ಣನು ಹೇಳಿದನು—

ಕಳುಹುವುದು ಶಿಷ್ಟರನು ಧರಣೀ
ತಳವ ಬೇಡಿಸುವಲ್ಲಿ ಸಾಮವ
ಬಳಸುವುದು ಭೀಷ್ಮಾದಿಗಳಿಗಟ್ಟುವುದು ವಿನಯದಲಿ
ತಿಳಿವುದಾತನ ನೆಲೆಯನಲ್ಲಿಂ
ಬಳಿಕ ನಯವಿಲ್ಲೆಂಬಡಾಹವ
ದೊಳಗೆ ಕೈದೋಱುವುದು ಮತವೆಂದನು ಮುರಧ್ವಂಸಿ ॥

ಉ. ಸಂ. ೨-೫

ಮೂಲದಲ್ಲಿ ಈ ಭಾವ ಹೀಗಿದೆ—

ದುರ್ಯೋಧನಸ್ಯಾಪಿ ಮತಂ ಯಥಾವತ್
ನ ಜ್ಞಾಯತೇ ಕಿಂ ನು ಕರಿಷ್ಯತೀತಿ ।
ಅಜ್ಞಾಯಮಾನೇ ಚ ಮತೇ ಪರಸ್ಯ
ಮಂತ್ರಸ್ಯ ಪಾರಂ ಕಥಮಭ್ಯುಪೇಮಃ ॥

ತಸ್ಮಾದಿತೋ ಗಚ್ಛತು ಧರ್ಮಶೀಲಃ
ಶುಚಿಃ ಕುಲೀನಃ ಪುರುಷೋಪ್ರಮತ್ತಃ ।
ದೂತಃ ಸಮರ್ಥಃ ಪ್ರಶಮಾಯ ತೇಷಾಂ
ರಾಜ್ಯಾರ್ಧದಾನಾಯ ಯುಧಿಷ್ಠಿರಸ್ಯ ॥ ಉ. ಪ. ೧-೨೩, ೨೪

೨. ಕೃಷ್ಣನು ದ್ವಾರಕಿಗೆ ಹೋದ ಮೇಲೆ

ಓಲೆಯುಡುಗೊರೆ ಸಹಿತ ಧರಣೀ
ಪಾಲರಿಗೆ ಪಾಂಡವರ ಶಿಷ್ಟರು
ಕಾಳಗಕೆ ಬಲವಾಗಲೋಸುಗ ಕರೆದರಲ್ಲಲ್ಲಿ ॥ ಉ. ಸಂ. ೨-೯

ಧರಣಿಯೆಡೆಗಿಡೆ ರಾಯಮೋಹರ
ತೆರಳಿತಿಬ್ಬರು ರಾಯರಿಗೆ ಕೈ
ನೆರವ ತೋಱಲು ಕವಿದು ಬಂದುದು ಕಾಹಿನಳತೆಗಳ ॥ ಉ. ಸಂ. ೨-೧೦

ಈ ಸಂದರ್ಭ ಮೂಲದಲ್ಲಿ ಹೀಗಿದೆ—

ತತಃ ಸಂಪ್ರೇಷಯಾಮಾಸ ವಿರಾಟಃ ಸಹ ಬಾಂಧವೈಃ ।
ಸರ್ವೇಷಾಂ ಭೂಮಿಪಾಲಾನಾಂ ದ್ರುಪದಶ್ಚ ಮಹೀಪತಿಃ ॥
ವಚನಾತ್ ಕುರುಸಿಂಹಾನಾಂ ಮತ್ಸ್ಯ ಪಾಂಚಾಲಯೋಶ್ಚತೇ ।
ಸಮಾಜಗ್ಮುಃ ಮಹೀಪಾಲಾಃ ಸಂಪ್ರಹೃಷ್ಟಾ ಮಹಾಬಲಾಃ ॥
ಸಮಾಕುಲಾಮಹೀ ರಾಜನ್ ಕುರುಪಾಂಡವ ಕಾರಣಾತ್ ।
ತದಾ ಸಮಭವತ್ ಕೃತ್ಸ್ನಾ ಸಂಪ್ರಯಾಣೇ ಮಹೀಕ್ಷಿತಾಮ್ ॥
ಉ. ಪ. ೫-೧೪, ೧೪, ೧೭.

೩. ತನ್ನ ಸಹಾಯವನ್ನು ಬೇಡಿ ಬಂದ ಅರ್ಜುನ ದುರ್ಯೋಧನರಿಗೆ ಕೃಷ್ಣನು ಹೇಳಿದನು—

ಆದಡಾವಿಹೆವೊಂದು ಕಡೆಯಲಿ
ಕಾದುವವರಾವಲ್ಲ ಬಲನಾ
ಯಾದವರು ಕೃತವರ್ಮ ನಾರಾಯಣ ಮಹಾಸೇನೆ ।
ಕಾದುವವರಿವರೊಂದು ದೆಸೆ ಎರ
ಡಾದುದಿದಱಲಿ ಮೆಚ್ಚಿದುದ ನೀ
ನಾದರಿಸಿ ವರಿಸೆಂದು ಪಾರ್ಥಂಗಸುರರಿಪು ನುಡಿದ ॥ ಉ. ಸಂ. ೨-೨೪

ಮೂಲಭಾರತದ ಈ ಭಾಗವನ್ನು ನೋಡಿ—

ಮತ್ಸಂಹನನತುಲ್ಯಾನಾಂ ಗೋಪಾನಾಮರ್ಬುದಂ ಮಹತ್ ।
ನಾರಾಯಣಾ ಇತಿಖ್ಯಾತಾಃ ಸರ್ವೇ ಸಂಗ್ರಾಮಯೋಧಿನಃ ॥
ತೇವಾ ಯುಧಿ ದುರಾಧರ್ಷಾ ಭವನ್ತ್ವೇಕಸ್ಯ ಸೈನಿಕಾಃ ।
ಅಯುಧ್ಯಮಾನಃ ಸಂಗ್ರಾಮೇ ನ್ಯಸ್ತಶಸ್ತ್ರೋsಹಮೇಕತಃ ॥
ಉ. ಪ. ೧೯, ೨೦.

೪. ದುರ್ಯೋಧನನನ್ನು ಸೇರಿ ತನ್ನಲ್ಲಿಗೆ ಬಂದ ಶಲ್ಯನನ್ನು ನೋಡಿ ಧರ್ಮರಾಜನು ಹೇಳಿದನು—

ಅದಡಾ ಕರ್ಣಂಗೆ ಸಾರಥಿ
ಯಾದಿರಾದಡೆ ಸಮರ ಮುಖದಲಿ
ವಾದತೇಜೋವಧೆಯ ಮಾಡುವುದವನಸವಗಡಿಸಿ।
ಕಾದುಕೊಡುವುದು ನಾವು ಗೆಲುವವೊ
ಲಾದರಿಸುವುದು ನಮ್ಮನು ॥ ಉ. ಸಂ. ೨-೧೬.

ಇದರ ಮೂಲ ಹೀಗಿದೆ—

ಕರ್ಣಾರ್ಜುನಾಭ್ಯಾಂ ಸಂಪ್ರಾಪ್ತೇ ದ್ವೈರಥೇ ರಾಜಸತ್ತಮ।
ಕರ್ಣಸ್ಯ ಭವತಾ ಕಾರ್ಯಂ ಸಾರಥ್ಯಂ ನಾತ್ರ ಸಂಶಯಃ ॥
ತತ್ರ ಪಾಲ್ಯೋಽರ್ಜುನೋ ರಾಜನ್ಯದಿ ಮತ್ಪ್ರಿಯಮಿಚ್ಛಸಿ।
ತೇಜೋವಧಶ್ಚ ತೇ ಕಾರ್ಯಃ ಸೌತೇರಸ್ಮಜ್ಜಯಾವಹಃ ॥
ಉ. ಪ. ೮-೪೯, ೫೦

ಸಂಜಯನು ಕೃಷ್ಣಾರ್ಜುನರನ್ನು ನೋಡಲು ಬಂದಾಗ

ದೇವನಿದ್ದನು ಸತ್ಯಭಾಮಾ
ದೇವಿಯರ ನಸುಮಲಗಿಯರ್ಜುನ
ದೇವನಂಕದ ಮೇಲೆ ಸಿರಿಪದಕಮಲವನು ನೀಡಿ।
ನಾವು ಬರಲೆಮಗುಚಿತದಲಿ ಸಂ
ಭಾವನೆಯ ಮಾಡಿಸಿದನು ॥ ಉ. ಸಂ. ೪-೩

೫. ಈ ಅಂಶವನ್ನೇ ಸಂಸ್ಕೃತ ಭಾರತದಲ್ಲಿ ಹೀಗೆ ಹೇಳಿದೆ—

ಸತ್ಯಾಂಕಮುಪಧಾನಂ ತು ಕೃತ್ವಾ ಶೇತೇ ಜನಾರ್ದನಃ।
ಅರ್ಜುನಾಂಕಗತೌ ಪಾದೌ ಕೇಶವಸ್ಯೋಪಲಕ್ಷ್ಯಯೇ।
ಅರ್ಜುನಸ್ಯ ಚ ಕೃಷ್ಣಾಯಾಃ ಶುಭಾಂಯಾಶ್ಚಾಂಕಗಾವುಭೌ ॥
ಕಾಂಚನಂ ಪಾದಪೀಠಂ ತಂ ಪಾರ್ಥೋ ಮೈಪ್ರಾದಿಶನ್ಮದಾ।
ಉ. ೪೭-೨೩, ೨೪

೬. ಸಂಧಾನದ ವಿಷಯದಲ್ಲಿ ಸಹದೇವನ ಅಭಿಪ್ರಾಯ—

ಸೇರದು ಸಂಧಿ, ಸಂಗರವೆಮಗೆ ಸಮ್ಮತವು ಉ. ಸಂ. ೫-೯

ಇದರ ಮೂಲ ಹೀಗಿದೆ—

ಅಹಂ ಯೋದ್ಧುಮಿಚ್ಛಾಮಿ ಸಂಯುಗೇ ಉ. ಪ. ೮೦-೪

೭. ಸಂಧಾನಕ್ಕೆ ಒಪ್ಪಿದ ಪಾಂಡವರ ವಿಷಯದಲ್ಲಿ ದ್ರೌಪದಿಯ ಉಕ್ತಿ—

ತನಯರೈವರು ವೀರಸಹದೇ
ವನು ಘಟೋತ್ಕಚನೀ ಸುಭದ್ರಾ
ತನಯನೆಮ್ಮಯ ತಂದೆ ಮೂಜಕ್ಷೋಹಿಣೀ ಸೇನೆ।

ಇನಿಬರೇ ಕಾದುವರು ದುಶ್ಶಾ
ಸನನ ರಕುತವ ಕುಡಿದು ಕುರುಕುಲ
ವನವ ಸುಡುವರು ನಿಮ್ಮ ಹಂಗೇಕೆ ॥ ಉ. ಸಂ. ೫-೨೧

ಇದರ ಮೂಲ—

ಪಿತಾ ಮೇ ಯೋತ್ಸ್ಯತೇ ವೃದ್ಧಃ ಸಹ ಪುತ್ರೈರ್ಮಹಾರಥೈಃ ॥
ಪಂಚಚೈವ ಮಹಾವೀರ್ಯಾಃ ಪುತ್ರಾ ಮೇ ಮಧುಸೂದನ ।
ಅಭಿಮನ್ಯುಂ ಪುರಸ್ಕೃತ್ಯ ಯೋತ್ಸ್ಯಂತೇ ಕುರುಭಿಃ ಸಹ ॥
ಉ. ಪ. ೮೧-೩೭, ೩೮.

ಈ ಉದಾಹರಣೆಗಳಿಂದ ಕುಮಾರವ್ಯಾಸನು ಮೂಲಭಾರತವನ್ನು ಹೇಗೆ ಅನುಸರಿಸುತ್ತಾನೆಂಬುದು ಸ್ಫುಟಪಡುತ್ತದೆ. ಇಷ್ಟೇ ಅಲ್ಲ. ಮೂಲದ ವಿಸ್ತಾರವಾದ ಸನ್ನಿವೇಶಗಳನ್ನು ಸಂಗ್ರಹಮಾಡಿ, ಸಾರವತ್ತಾಗಿ ನಿರೂಪಿಸುತ್ತಾನೆ. ಸನ್ನಿವೇಶಗಳನ್ನು ಸ್ಥಳಪಲ್ಲಟ ಮಾಡುತ್ತಾನೆ. ಹೊಸದಾಗಿ ಸನ್ನಿವೇಶಗಳನ್ನು ಕಲ್ಪಿಸಿಕೊಳ್ಳುತ್ತಾನೆ. ಒಂದೊಂದು ಅಂಶಕ್ಕೂ ಒಂದೊಂದು ಉದಾಹರಣೆಯನ್ನು ಕೊಟ್ಟು ವಿಷಯವನ್ನು ಸ್ಫುಟಪಡಿಸಬಹುದು.

ಮೂಲ ಭಾರತದಲ್ಲಿ ಬರುವ ಉಪಪರ್ವಗಳಲ್ಲಿ ಕೊನೆಯ ಮೂರು ಉಪಪರ್ವಗಳನ್ನು ಕವಿ ಕೈಬಿಟ್ಟಿದ್ದಾನೆ. ಅಲ್ಲದೆ ಪ್ರಜಾಗರ, ಸನತ್ಸುಜಾತಪರ್ವಗಳಲ್ಲಿ ಕವಿ ಮೂಲವನ್ನು ಮಾತ್ರ ಅನುಸರಿಸದೆ, ಆ ಪರ್ವಗಳಿಗೆ ನಾನಾ ಗ್ರಂಥಗಳಿಂದ ವಿಷಯವನ್ನು ಸಂಗ್ರಹಿಸಿದ್ದಾನೆ. (ಮೈಸೂರಿನ ಪ್ರಾಚ್ಯ ಕೋಶಾಗಾರದ ಉದ್ಯೋಗಪರ್ವದ ಪೀಠಿಕೆಯನ್ನು ನೋಡಿ.) ಅಂಬೋಪಾಖ್ಯಾನ, ವಿದುರೋಪಾಖ್ಯಾನ ಮುಂತಾದ ಉಪಾಖ್ಯಾನಗಳನ್ನು ಕವಿ ಕತ್ತರಿಸಿ ಹಾಕಿದ್ದಾನೆ. ಒಂದು ವೇಳೆ ಕಥೆಯ ದೃಷ್ಟಿಯಿಂದ ಒಂದು ಉಪಾಖ್ಯಾನ ಮುಖ್ಯವೆಂದು ತೋರಿದರೆ ಕವಿ ಅದನ್ನು ಒಂದು ಪದ್ಯದಲ್ಲೋ ಇಲ್ಲವೆ ಅರ್ಧ ಪದ್ಯದಲ್ಲೋ ಸಂಗ್ರಹಿಸುತ್ತಾನೆ. ದುರ್ಯೋಧನನ ಪಕ್ಷವನ್ನು ನಿರ್ವಾಹವಿಲ್ಲದೆ ಸೇರಿದ ಶಲ್ಯನು, ತಂಗಿಯ ಮಕ್ಕಳನ್ನು ನೋಡಿಕೊಂಡು ಬರಲು ಧರ್ಮರಾಜನ ಬಳಿಗೆ ಬರುತ್ತಾನೆ. ಪರಸ್ಪರ ಕುಶಲ ಪ್ರಶ್ನೆಗಳಾದ ಮೇಲೆ ಶಲ್ಯನು ಧರ್ಮರಾಜನಿಗೆ ಧೈರ್ಯ ಹೇಳಿ, ಸುಮಾರು ಹತ್ತು ಅಧ್ಯಾಯಗಳಲ್ಲಿ ಬರುವ ನಹುಷನ ಕಥೆಯನ್ನು ಅವನಿಗೆ ಹೇಳುತ್ತಾನೆ. ಇದನ್ನೇ ಕುಮಾರವ್ಯಾಸನು 'ಅಡಡೇನೆಲೆ ಕಂದ ತಪ್ಪದು ಮೇದಿನಿಯು ಸಿರಿ ನಿಮಗೆ ಸತ್ಯವ ಕಾದು ಹದಿಮೂಜಬುದ ನವೆದಿರಿ ಮುಂದೆ ಲೇಸಹುದು' ಎಂದು ಶಲ್ಯನಿಂದ ಹೇಳಿಸಿ 'ಕಾದಿ ವೃತ್ರಾಸುರನ ಮುರಿದಪವಾದದಲಿ ಸಿರಿ ಹೋಗಿ ದುಃಖಿತನಾದಸಿಂದ್ರನು ಮತ್ತೆ ಬದುಕಿದ ಶಚಿಯ ದೆಸೆಯಿಂದ' ಎಂದು ಆ ಕಥೆಯನ್ನು ಮುಗಿಸಿಬಿಡುತ್ತಾನೆ. ಮೂಲದಲ್ಲಿ ಎರಡು ಅಧ್ಯಾಯಗಳಲ್ಲಿ ಬರುವ ದ್ರುಪದರಾಜಪುರೋಹಿತನ ದೌತ್ಯ, ಕನ್ನಡ ಭಾರತದಲ್ಲಿ 'ದ್ರುಪದರಾಜಪುರೋಹಿತನು ಕುರುನೃಪನನಿತ್ತಲು ಬಂದು ಕಂಡನು ವಿಪುಳ ಮತಿ ಮಾತನಾಡಿದನು ನಿಜ ರಾಜಕಾರಿಯದ' ಎಂಬ ಅರ್ಧ ಪದ್ಯದಲ್ಲೇ ಮುಗಿದು ಹೋಗಿದೆ. ಸಂಜಯನು ತಂದ ದೌತ್ಯದಲ್ಲಿ ಅದೆಷ್ಟು ಪುನರುಕ್ತಿ, ಅದೆಷ್ಟು ಗೋಳಾಟ,

ಅದೆಷ್ಟು ಉಪದೇಶ! ಆದರೆ ಕನ್ನಡ ಭಾರತದಲ್ಲಿ ಸಂಜಯನು ಪಾಂಡವರಿಗೆ ಕೌರವರಿಂದ ತಂದ ಸಂದೇಶ, ಕೌರವರಿಗೆ ಪಾಂಡವರಿಂದ ತಂದ ಸಂದೇಶ ಮೂಲದ ವಿಸ್ತಾರವನ್ನುಳಿದು ಸಂಗ್ರಹವಾಗಿ ಸಾರವತ್ತಾಗಿ ಬಂದಿದೆ. ಕುಮಾರವ್ಯಾಸನಲ್ಲಿ ಪುನರುಕ್ತಿ ದೋಷವನ್ನು ಆರೋಪಿಸುವ ವಿಮರ್ಶಕರು ಈ ಭಾಗವನ್ನು ಮೂಲದೊಡನೆ ಹೋಲಿಸಿ ನೋಡಿದರೆ ಕುಮಾರವ್ಯಾಸನ ಸಂಗ್ರಹ ಸಾಮರ್ಥ್ಯ, ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ವಿಷಯ ನಿರೂಪಿಸುವ ಶಕ್ತಿ ಮನದಟ್ಟಾಗುತ್ತದೆ.

ಯಾನಸಂಧಿಪರ್ವದಲ್ಲಿ ಬರುವ ಕರ್ಣನ ಶಸ್ತ್ರಸಂನ್ಯಾಸವನ್ನೂ, ಉಲೂಕದೂತಾಗಮನದಲ್ಲಿ ಬರುವ ಉಲೂಕನ ದೌತ್ಯವನ್ನೂ ಕವಿ ಭೀಷ್ಮಪರ್ವದ ಮೊದಲನೆಯ ಸಂಧಿಯಲ್ಲಿ ಹೇಳಿದ್ದಾನೆ.

ನಾರಣಪ್ಪನ ಸನ್ನಿವೇಶದ ಸ್ವಂತ ಸೃಷ್ಟಿಗೆ ಉದಾಹರಣೆಯೊಂದನ್ನು ಕೊಟ್ಟು ಈ ಭಾಗವನ್ನು ಮುಗಿಸಬಹುದು. ಸಂಸ್ಕೃತ ಮಹಾಭಾರತದಲ್ಲಿ ಸಂಧಿಗಾಗಿ ಹಸ್ತಿನಾವತಿಗೆ ಬಂದ ಕೃಷ್ಣನನ್ನು ರಾಜಸಭೆಗೆ ಕರೆತರಲು ದುರ್ಯೋಧನ ಶಕುನಿಗಳೇ ವಿದುರನ ಮನೆಗೆ ಬರುತ್ತಾರೆ. ರಾಜಸಭೆಗೆ ಹೊರಟ ಶ್ರೀಕೃಷ್ಣನಿಗೆ ದುರ್ಯೋಧನ ಕರ್ಣರೇ ದಾರಿ ತೋರಿಸುತ್ತಾರೆ. ಕೌರವನ ಸಭೆಯಲ್ಲಿ ತುಂಬ ಆದರ ಶ್ರೀಕೃಷ್ಣನಿಗೆ. ಪಂಪ ಭಾರತದಲ್ಲಿಯಾದರೋ ರಾಜಸಭೆಗೆ ಶ್ರೀಕೃಷ್ಣನು ಬಂದಾಗ ತಾನು ಎದ್ದು ಅವನನ್ನು ಸತ್ಕರಿಸಬೇಕೆಂಬ ಮನಸ್ಸೇನೂ ಕೌರವನಿಗಿರಲಿಲ್ಲ. ಸಜ್ಜನರನ್ನು ಧಿಕ್ಕರಿಸಬೇಕೆಂಬ ಮನಸ್ಸು ದುಷ್ಟರಿಗಿದ್ದರೂ ಸಜ್ಜನರ ಪ್ರಭಾವಕ್ಕೆ ಅವರು ಒಳಗಾಗುವಂತೆ 'ಅಂಜನಾಚಲದವೊಲ್ ಕಣ್ಗೊಪ್ಪಿಬರ್ಪಂಬುಜೋದರ'ನನ್ನು ನೋಡಿ ಅವನ ಪ್ರಭಾವಕ್ಕೆ ಮನಸೋತು 'ಮೆಯ್ಯುಲಸಿದಂತೆಂತಾನುಮೆಳ್ದಿರ್ದು' ಕೌರವನು ಕೃಷ್ಣನನ್ನು ಸತ್ಕರಿಸುತ್ತಾನೆ. ಕುಮಾರವ್ಯಾಸನಲ್ಲಿ ಈ ಸನ್ನಿವೇಶ ಬದಲಾಗಿದೆ. ಕೃಷ್ಣನು ಸಭೆಗೆ ಬಂದಾಗ ಅವನನ್ನು ಎಲ್ಲರೂ ಗೌರವಿಸಿದರು. ಕೌರವನ ಓಲಗದ ಸಿರಿ ನೊಸಲ ಕೈಗಳಲ್ಲಿ ತಲೆಬಾಗಿತು. ಆದರೆ ಕುಮತಿ ಕೌರವ ಕಮಲಗಣ್ಣಿನ ಕೃಷ್ಣನಿಂದ ನನಗೇನಾಗಬೇಕು ಎಂಬ ಅಹಂಕಾರದಿಂದ ಸಿಂಹಾಸನವನ್ನು ಬಿಟ್ಟೇಳಲೇ ಇಲ್ಲ. ಇದನ್ನು ನೋಡಿ ಸೆಣಸು ಸೇರದ ಕೃಷ್ಣ ತನ್ನ ಉಂಗುಟದ ತುದಿಯಿಂದ ಭೂಮಿಯನ್ನು ಒತ್ತಿದನು. ಇದರ ಫಲವಾಗಿ ಕೌರವನು ಕುಳಿತಿದ್ದ 'ಮಣಿಖಚಿತ ಕಾಂಚನದ ಪೀಠದ ಗೊಣಸು ಮುಱಿದುದು ; ಕೆಡೆದು ಬಿದ್ದನು ಹರಿಯ ಚರಣದಲಿ.' ಮೂಲದಲ್ಲಿಲ್ಲದ ಕೃಷ್ಣನ ಮಹಿಮೆಯನ್ನು ಬೀರುವ ಈ ಸನ್ನಿವೇಶವನ್ನು ಕುಮಾರವ್ಯಾಸನು ಭಾಸನ 'ದೂತವಾಕ್ಯ'ವೆಂಬ ಏಕಾಂಕ ನಾಟಕದಿಂದ ತೆಗೆದುಕೊಂಡಿರಬಹುದು. ನಾಟಕದಲ್ಲಿಯಾದರೋ ರಾಜಸಭೆಗೆ ಕೃಷ್ಣನು ಬಂದಾಗ ಅವನನ್ನು ಅಪಮಾನಗೊಳಿಸಲೆಂಬಂತೆ, ಕೌರವನು ದ್ರೌಪದೀ ವಸ್ತ್ರಾಪಹರಣ ಚಿತ್ರವನ್ನು ನೋಡುವುದರಲ್ಲಿ ಮಗ್ನನಾಗಿರುತ್ತಾನೆ. ಆಸನದಿಂದ ಬಿದ್ದೊಡನೆಯೇ ಕೃಷ್ಣನು ಸಭೆಗೆ ಬಂದಿರುವುದು ಅವನಿಗೆ ಗೊತ್ತಾಗುತ್ತದೆ. ಕುಮಾರವ್ಯಾಸನು ಈ ಸೂಚನೆಯನ್ನೇ ತೆಗೆದುಕೊಂಡು ಅದನ್ನು ತನಗೆ ತೋಚಿದ ರೀತಿಯಲ್ಲಿ ಮಾರ್ಪಡಿಸಿಕೊಂಡು ಕೃಷ್ಣನ ಮಹಿಮೆಯನ್ನು ಸಾರಿದ್ದಾನೆ. ಈ ಭಾಗವನ್ನು ಓದಿದವರು ಕೃಷ್ಣನ ಮಹಿಮೆಯನ್ನು ಕಂಡು ತಲೆದೂಗಬಹುದು. ಆದರೆ ಇಲ್ಲಿನ ವರ್ತನೆ ದುರ್ಯೋಧನನಿಗಾಗಲೀ ಕೃಷ್ಣನಿಗಾಗಲೀ ಗೌರವ ತರುವಂತಿಲ್ಲ.

ಈ ಭಾಗವನ್ನು ಮುಗಿಸುವುದಕ್ಕಿಂತ ಮುಂಚೆ ಕುಮಾರವ್ಯಾಸನು ಪಂಪನನ್ನು ಎಲ್ಲಿಯಾದರೂ ಅನುಸರಿಸುವನೇ ಎಂಬ ಅಂಶವನ್ನು ಪರಿಶೀಲಿಸಬಹುದು. ಪಂಪ ಕುಮಾರವ್ಯಾಸರಿಗೆ ವ್ಯಾಸಭಾರತವೇ ಮೂಲವಾಗಿದ್ದರೂ ಈ ಇಬ್ಬರು ಕವಿಗಳು ಈ ದೊಡ್ಡ ಕಥೆಯನ್ನು ತಮ್ಮ ತಮ್ಮ ಕಾಲ, ಆವರಣ, ಅಭಿರುಚಿ, ಸಂಸ್ಕಾರಗಳಿಗೆ ತಕ್ಕಂತೆ ಸಂಗ್ರಹಿಸಿರುತ್ತಾರೆ. ಕಾಲದ ದೃಷ್ಟಿಯಿಂದ ಹಿರಿಯನಾದ ಪಂಪನನ್ನು ನಾರಣಪ್ಪನು ಎಲ್ಲಿಯಾದರೂ ಅನುಸರಿಸಿರಬಹುದೇ ಎಂಬ ಕುತೂಹಲ ಹುಟ್ಟುವುದು ಸಹಜವಾಗಿದೆ. ಈ ಉದ್ಯೋಗಪರ್ವದಲ್ಲಿ ಸಂಸ್ಕೃತ ಭಾರತದಲ್ಲಿಲ್ಲದ ಎರಡು ಸನ್ನಿವೇಶಗಳು ಕಂಡು ಬರುತ್ತವೆ. ಇದೇ ಸನ್ನಿವೇಶಗಳು ಪಂಪಭಾರತದಲ್ಲಿಯೂ ಕಂಡುಬರುತ್ತವೆ. ಆದ್ದರಿಂದ ಕುಮಾರವ್ಯಾಸನಿಗೆ ಪಂಪಭಾರತದ ಗಾಢವಾದ ಪರಿಚಯವಿದ್ದು, ಅದರ ಕೆಲವು ಭಾಗಗಳು ಆತನಿಗೆ ಅತ್ಯಂತ ಪ್ರಿಯವಾಗಿದ್ದುವೆಂದು ಹೇಳಬಹುದು. ಹಾಗೆ ಆ ಭಾಗಗಳು ಕವಿಗೆ ಪ್ರಿಯವೆನಿಸದಿದ್ದರೆ, ಅವನು ಅವುಗಳನ್ನು ತನ್ನ ಕಾವ್ಯದಲ್ಲೇಕೆ ಸೇರಿಸಿಕೊಳ್ಳುತ್ತಿದ್ದ?

ಪಂಪ ಕುಮಾರವ್ಯಾಸರ ಭಾರತಗಳಲ್ಲಿದ್ದು ಮೂಲಭಾರತದಲ್ಲಿಲ್ಲದ ಎರಡು ಸನ್ನಿವೇಶಗಳು—

೧. ಕೃಷ್ಣನು ದುರ್ಯೋಧನನನ್ನು ಸಂಧಿಗೆ ಒಪ್ಪಿಸಲು ಪ್ರಯತ್ನಪಡುತ್ತಾನೆ. ಆಗ ಕೌರವನು ಕೋಪಗೊಂಡು

ಏಳ್ನೋಗು ದೂತನಪ್ಪನ
ಬೆಳ್ಪನ ನುಡಿಗೇಳ್ದು ಮುಳಿಯಲಾಗದು ನೀನುಂ
ಮೇಳ್ಪಟ್ಟು ವಿದುರನೆಂಬೀ
ತೋಳ್ಪುಟ್ಟಿಯ ಮನೆಯ ಕೂಳೆ ನುಡಿಯಿಸೆ ನುಡಿದೈ ॥

ಎನೆ ವಿದುರನತಿ ಕುಪಿತಮನನಾಗಿ—

ಕಡುಮುಳಿದು ನಿನ್ನ ತೊಡೆಗಳ
ನುಡಿವೆಡೆಯೊಳ್ ಭೀಮಸೇನನಾಪದದೊಳ್ ।
ಪಿಡಿಯಲ್ಕೆಂದಿರ್ದೆನಿದಂ
ಪಿಡಿಯೆಂ ಪೋಗೆಂದು ಸಭೆಯೊಳುಡಿದಂ ಬಿಲ್ಲಂ ॥

ಪಂ. ಭಾ. ೯-೫೮, ೫೯

ಗದುಗಿನ ಭಾರತದಲ್ಲಿಯೂ ಸಂಧಿಗಾಗಿ ಕೃಷ್ಣನು ಕೌರವನ ಸಭೆಗೆ ಬಂದಾಗ, ದುರ್ಯೋಧನನು 'ಕೃಷ್ಣನಿಂದ ನನಗೇನಾಗಬೇಕು?' ಎಂಬ ಅಹಂಕಾರದಿಂದ ಸಿಂಹಾಸನವನ್ನು ಬಿಟ್ಟೇಳಲೇ ಇಲ್ಲ. ಸೆಣಸು ಸೇರದ ಕೃಷ್ಣನು ಕೌರವನ ಅಹಂಕಾರಕ್ಕೆ ಪ್ರಾಯಶ್ಚಿತ್ತ ರೂಪವಾಗಿ ಕೌರವನು ತನ್ನ ಕಾಲಮೇಲೆ ಸಿಂಹಾಸನದಿಂದ ಬಂದು ಬೀಳುವಂತೆ ಮಾಡಿದನು. ಸಭೆಯಲ್ಲಿ ಎಲ್ಲರೂ ಆಸನಗಳಲ್ಲಿ ಕುಳಿತಮೇಲೆ ಕೃಷ್ಣನು ಕೌರವನ ದುಗುಡಕ್ಕೆ ಕಾರಣವನ್ನು ಕೇಳಲು, ಅವನು ಅದಕ್ಕೆ ಕಾರಣವನ್ನು ಹೇಳಿ,

ಈ ಕೃಪನ ಈ ದ್ರೋಣನೀ ಗಂ
ಗಾಕುಮಾರನ ಮನೆಯ ಹೊಗದವಿ

ವೇಕೆ ತೊತ್ತಿನ ಮಗನ ಮನೆಯಲಿ ಹಸಿವ ನೂಕಿದಿರಿ
ಸಾಕಿದಾತನು ನಂದಗೋಪನು
ಕಾಕ ಬಳಸಲು ಸಲ್ಲದೇ ನಿಮ
ಗೇಕೆ ರಾಯರ ಠೀವಿಯೆಂದನು ನಗುತ ಕುರುರಾಯ ॥

ಕುರುಪತಿಯ ಬಿರುನುಡಿಯ ಕೇಳಿದು
ಕರಣದಲಿ ಕೋಪಾಗ್ನಿಯುಕ್ಕಲು
ಕೆರಳಿ ನಿರ್ಭೀತಿಯಲಿ ನುಡಿದನು ವಿದುರನರಸಂಗೆ ॥

ಕಡುಮುಳಿದು ಕಲಿಭೀಮ ನಿನ್ನಯ
ತೊಡೆಗಳನು ಮುರಿವಾ ಸಮಯದಲಿ
ಬಿಡದೆ ನಿನ್ನನು ಕಾಯಬೇಕೆಂದುಳುಹಿದೆನು ಧನುವ
ಕೆಡನುಡಿಸಿಕೊಂಡಿನ್ನು ಕಾವೆನೆ
ಪೊಡವಿಪತಿ ಕೇಳೆಂದು ವಿದುರನು
ಹಿಡಿದ ಬಿಲ್ಲನು ಮುರಿದನಾ ಕುರುಸೇನೆ ಕಳವಳಿಸೆ ॥

ಉ. ಪ. ಸಂ. ೬-೪೫-೪೭

ಪಂಪನನ್ನು ನಾರಣಪ್ಪನು ಕನ್ನಡಿಸಿಲ್ಲವೇ ಇಲ್ಲಿ ? ಆದರೆ ಈ ಸನ್ನಿವೇಶಕ್ಕೆ ಪಂಪನಿಗೆ ಮೂಲ ಯಾವುದು ? ಹಾಗೆಯೇ ಇಲ್ಲಿ ಬರುವ 'ನಿನ್ನಯ ವರ ಜನನಿಗಾದಿಯಲಿ ಗಂಡನದಾರು' ಎಂಬ ಕಥೆಗೆ ನಾರಣಪ್ಪನಿಗೆ ಮೂಲ ಯಾವುದು ?

೨. ಕುಂತಿ ಕರ್ಣನನ್ನು ಕಾಣಲು ಬಂದಾಗ 'ಗಂಗಾದೇವಿಯುಂ ದಿವ್ಯ ಮೂರ್ತಿಯಂ ಕೆಯ್ಕೊಂಡು ಬಂದು'—

ಒಪ್ಪಿಸಿದೆಂ ಕೈಯೆಡೆಯಂ
ದಪ್ಪೈಸಿದ ನಿನ್ನ ಮಗನನೀಗಂ ನಿನಗೆಂ
ದಪ್ಪೈಸಿ ಗಂಗೆ ಪೋಪುದುಂ । ಪಂ. ಭಾ. ೯-೭೬

ಎಂದು ಪಂಪ ಹೇಳುತ್ತಾನೆ. ಇದನ್ನೇ ಕುಮಾರವ್ಯಾಸನು ಹೀಗೆ ಹೇಳಿದ್ದಾನೆ—

ಆ ಸಮಯದಲಿ ಗಂಗೆ ನಾರೀ
ವೇಷದಲಿ ನಡೆತಂದಳೆಲೆ ಕುಂ
ತೀಸತಿಯೆ ಕೈಯೆಡೆಯ ಕಂದನನೊಪ್ಪುಗೊಳು ನೀನು
ಈಸುದಿನಮಿವನಾಗು ಹೋಗಿನ
ಗಾಸಿಯನು ತಲೆಗಾಯ್ದೆ ನಿನ್ನಯ
ಘಾಸೆ ಸಂದುದೆನುತ್ತ ತಾಯಿಗೆ ಕೊಟ್ಟಳಾತ್ಮಜನ ॥

ಉ. ಪ. ಸಂ. ೮-೨೮

ಈ ಸಂದರ್ಭದಲ್ಲಿ ಇನ್ನೊಂದು ಸಣ್ಣ ಅಂಶವನ್ನು ಇಲ್ಲಿ ಸೂಚಿಸಬಹುದು. ಕುಂತಿ ಕರ್ಣನನ್ನು ಕಾಣಲು ಬಂದಾಗ ಸೂರ್ಯನು ಗಗನದಿಂದಲೇ 'ಕುಂತಿ ನುಡಿಯುವುದು ಸತ್ಯ. ನೀನು ಪಾಂಡವರ ಪಕ್ಷವನ್ನು ಸೇರು' ಎಂದು ಹೇಳಿದನೆಂದು

ವ್ಯಾಸರ ಹೇಳಿಕೆ. ಪಂಪನಲ್ಲಿಯಾದರೊ ಗಂಗೆ ಕರ್ಣನನ್ನು ಒಪ್ಪಿಸಿ ಹೋದಮೇಲೆ ‘ಒಪ್ಪುವ ನಿಜಬಿಂಬದೊಳಗಣಿಂದಂ ದಿನಪಂ’

ಪೊಱಮಟ್ಟು ಬರಲ್ ತನ್ನಡಿ
ಗೆಱಗಿದ ನಿಜಸುತನನಳ್ಕಱಿಂ ಪರಸಿ ಮನಂ।
ಮಜುಗಿ ರವಿ ನುಡಿದನೆನ್ನುವ
ನುಱದೆ ಮರುಳ್ಮಗನೆ ಹರಿಗೆ ಕವಚಮನಿತ್ತೈ॥
ನುಡಿಯೆನದಂ ನಿನ್ನಂಬಿಕೆ
ಪಡೆಮಾತೇಂ ಕೊಂತಿ ಹರಿಯ ಮತದಿಂ ಕಾಯ।
ಲ್ಕೊಡರಿಸಿ ಬಂದಳ್ ಸುತರಂ
ಕುಱದಿರ್ ಪುರುಗಣೆಯುನೆನಿತು ಲಲ್ಲೈಸಿದೊಡಂ॥

ಪಂ. ಭಾ. ೯-೭೭, ೭೮

ಕುಮಾರವ್ಯಾಸನು ಇದೇ ಭಾಗವನ್ನು ತನ್ನ ಭಾರತದಲ್ಲಿ ಈ ರೀತಿ ಅನುವಾದಿಸುತ್ತಾನೆ:

ಇರಲಿರಲು ರವಿ ಬಂದನೆಕ್ಕಟಿ
ಕರೆದನೀತನ ಕಿವಿಯೊಳೆಲ್ಲವ
ನೊರೆದ ನಿನಗೆಲೆ ಮಗನೆ ಕುಂತೀದೇವಿ ತಾಯಹುದು।
ಮುರಹರನ ಮತದಿಂದ ನಿನ್ನಯ
ಸರಳ ಬೇಡಲು ಬಂದಳಂದಾ
ಹರಿಗೆ ಕವಚವನಿತ್ತವೊಲು ಮರುಳಾಗಬೇಡೆಂದ॥

ಉ. ಪ. ಸಂ. ೮-೨೮

ಮೇಲಿನ ವಿವರಣೆಯಿಂದ ಫಲಿತವಾಗುವುದೇನೆಂದರೆ ಕುಮಾರವ್ಯಾಸನು ಸಂಸ್ಕೃತ ಮಹಾಭಾರತವನ್ನು ಆಮೂಲಾಗ್ರವಾಗಿ ಪಠಿಸಿ ಜೀರ್ಣಿಸಿಕೊಂಡಿದ್ದನು. ಪಂಪ ಭಾರತದ ಪರಿಚಯ ಆತನಿಗಿತ್ತು. ಭಾಸನ ನಾಟಕಗಳ ಪರಿಚಯ ಅವನಿಗಿದ್ದಿದ್ದರೂ ಇರಬಹುದು. ಇದಲ್ಲದೆ ನಾರಣಪ್ಪನು ಹಲವಾರು ಗ್ರಂಥಗಳನ್ನು ಮನನಮಾಡಿದ್ದನು. ಹುಟ್ಟಿನಿಂದಲೇ ಪ್ರತಿಭಾವಂತನಾದ ಆತನು ತಾನು ಪಡೆದ ಸಂಸ್ಕಾರದಿಂದ ಕವಿಪುಂಗವನಾದುದರಲ್ಲಿ ಏನು ಕೌತುಕ? ಮಹಾಕವಿಯಾದ ನಾರಣಪ್ಪನು ಹೆರವರಿಂದ ವಸ್ತುವನ್ನು ಸ್ವೀಕರಿಸಿರಬಹುದು. ಆ ವಸ್ತುವನ್ನು ಚೆನ್ನಾಗಿ ಜೀರ್ಣಿಸಿಕೊಂಡು ದುಂಬಿಗಳು ಹೂವಿನ ಸಾರವನ್ನು ಜೀರ್ಣಿಸಿಕೊಂಡು ಲೋಕಕ್ಕೆ ಮಧುವನ್ನು ಕೊಡುವಂತೆ ಅವನು ಅತ್ಯುತ್ಕೃಷ್ಟವಾದ ಕಾವ್ಯವನ್ನು ರಚನೆ ಮಾಡಿದನು. ಶೀತಕಿರಣನಾದ ಚಂದ್ರನಲ್ಲಿ ಕಳಂಕವಿರುವಂತೆ (ಅದು ದೋಷವಲ್ಲ; ಭೂಷಣವೆಂದೇ ಕಾಳಿದಾಸನ ಹೇಳಿಕೆ) ನಾರಣಪ್ಪನ ಕಾವ್ಯದಲ್ಲಿ ಅಲ್ಲಲ್ಲೇ ದೋಷಗಳಿರಬಹುದು. ಆ ದೋಷವನ್ನು ಗುಣಗಳೆಂದು ಯಾರೂ ಸಮರ್ಥನೆ ಮಾಡಬೇಕಿಲ್ಲ. ಆದರೇನು? “ನಡೆವರೆಡಹದೆ ಕುಳಿತರೆಡಹುವರೆ?” ಕುಮಾರವ್ಯಾಸನ ಭಾರತಕ್ಕೆ ಆಕರಗಳನ್ನು

ಕಂಡುಹಿಡಿದು ಆತನ ಕಾವ್ಯದ ಬೆಲೆಯನ್ನು ಕಟ್ಟುವ ಕೆಲಸ ನಡೆಯಬೇಕಾಗಿದೆ. ಆಗ ಆತನ ಹಿರಿಮೆ ಗೊತ್ತಾಗುತ್ತದೆ.

ii. ಪಾತ್ರ ಪರಿಚಯ

ಸಮಗ್ರ ಮಹಾಭಾರತ ಒಂದು ದೊಡ್ಡ ಪಾತ್ರ ಪ್ರದರ್ಶನಶಾಲೆ. ಈ ಮಹಾ ಇತಿಹಾಸದಲ್ಲಿ ಬಾರದ ವ್ಯಕ್ತಿಗಳೇ ಇಲ್ಲ. ದೇವತೆಗಳು ದಾನವರು ಗಂಧರ್ವರು ಮನುಷ್ಯರು—ಇವರಲ್ಲಿ ಚಕ್ರವರ್ತಿಗಳಿಂದ ಹಿಡಿದು ಸೇವಕರವರೆಗೆ ನಾನಾ ಗುಣ ಗಳುಳ್ಳವರೂ, ಗಂಡಸರು, ಹೆಂಗಸರು, ಕೊನೆಗೆ ಮಕ್ಕಳೂ ಸಹ—ಎಲ್ಲರೂ ರೂಪು ಗೊಂಡಿದ್ದಾರೆ. ಭೀಷ್ಮ ದ್ರೋಣರಂತಹ ಮಹಾ ಮಹಿಮರೂ ಉನ್ನತವಾದ ಚಾರಿತ್ರ ವುಳ್ಳವರೂ, ಕರ್ಣನಂತಹ ದುರ್ದೈವಿಗಳೂ ಹಾಗೂ ತ್ಯಾಗಶೀಲರೂ, ದುರ್ಯೋಧನ ನಂತಹ ಅಭಿಮಾನಧನರೂ ಛಲದಂಕಮಲ್ಲರೂ, ಶಲ್ಯ ಭೀಮರಂತಹ ಗಂಡುಗಲಿ ಗಳೂ, ಅರ್ಜುನ ಅಭಿಮನ್ಯು ಅಶ್ವತ್ಥಾಮರಂತಹ ವೀರಪುಂಗವರೂ, ಉತ್ತರ ಕುಮಾರನಂತಹ ಮಾತಿನಮಲ್ಲರೂ, ಧರ್ಮರಾಯನಂತಹ ನಿರ್ಮಳ ಧರ್ಮಚಿತ್ತರೂ, ವಿದುರನಂತಹ ಸುಜ್ಞಾನಿಗಳೂ, ಶಕುನಿ ಕೀಚಕರಂತಹ ತಂತ್ರಿಗಳೂ ಹಾಗೂ ದುರ್ಮಾರ್ಗಿಗಳೂ, ಕುಂತಿ ಗಾಂಧಾರಿ ದ್ರೌಪದಿಯರಂತಹ ಚಾರಿತ್ರಶೀಲರೂ ವೀರ ರಮಣಿಯರೂ ಇಲ್ಲಿ ಸೊಗಸಾಗಿ ಚಿತ್ರಿತರಾಗಿದ್ದಾರೆ. ಮಹಾಭಾರತದಲ್ಲಿ ಬರುವ ಪಾತ್ರ ಗಳ ಗುಣಶೀಲಗಳಲ್ಲಿ ಏನು ವೈವಿಧ್ಯ! ಕನ್ನಡ ಮಹಾಭಾರತವೂ ಬಹುಮಟ್ಟಿಗೆ ಮೂಲದ ಪಾತ್ರಗಳನ್ನು ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಚಿತ್ರಿಸುತ್ತದೆ. ಪ್ರಕೃತ ದಲ್ಲಿ ಉದ್ಯೋಗಪರ್ವದಲ್ಲಿ ಬರುವ ಪಾತ್ರಗಳಲ್ಲಿ ಮುಖ್ಯರಾದವರು ಶ್ರೀಕೃಷ್ಣ, ದುರ್ಯೋಧನ, ಕರ್ಣ. ಈ ಪಾತ್ರಗಳ ಪರಿಚಯವನ್ನು ಮಾತ್ರ ಇಲ್ಲಿ ಕೊಟ್ಟಿದೆ.

೧. ಶ್ರೀಕೃಷ್ಣ

ಕನ್ನಡ ಮಹಾಭಾರತದ ನಾಯಕ ಶ್ರೀಕೃಷ್ಣ. ಕುಮಾರವ್ಯಾಸನಿಗೆ ಶ್ರೀಕೃಷ್ಣ ನಲ್ಲಿ ಅಚಲವಾದ ಭಕ್ತಿ. ಅವತಾರ ಪುರುಷನಾದ ಆ ಮಹಾತ್ಮನು ಮಹಾಭಾರತಕ್ಕೆ ಸೂತ್ರಧಾರನಂತಿದ್ದು, ಕಥೆಯಲ್ಲಿ ಬರುವ ವ್ಯಕ್ತಿಗಳೆಲ್ಲರನ್ನೂ ತನ್ನ ಪ್ರಭಾವಕ್ಕೆ ಒಳಗು ಮಾಡಿಕೊಂಡಿದ್ದಾನೆ. ಆತನು ಕುಣಿಸಿದಂತೆ ಸಮಸ್ತರೂ ಕುಣಿಯುತ್ತಿದ್ದಾರೆ.

'ಭಾರ ಹೆಚ್ಚಿದಡೊಜಿಲಿ ಧರಣೀನಾರಿ ಬಿನ್ನಹ' ಮಾಡಲು ಶ್ರೀಕೃಷ್ಣನು ಭೂಲೋಕದಲ್ಲಿ ಅವತಾರಮಾಡಿದನು. ಆದ್ದರಿಂದ ದುಷ್ಟನಿಗ್ರಹ ಶಿಷ್ಟಪರಿಪಾಲನೆ ಯಲ್ಲಿ ನಂಬಿಕೆಯುಳ್ಳ ಆತನು ಭಜಕರ ಬೆಂಬಳಿಯಲ್ಲಿಯೇ ನಿಂತನು. ಸಂಜಯನ ಮೂಲಕ ಕೌರವನಿಗೆ ಆತನು ಹೇಳಿಕಳುಹಿಸಿದುದಾದರೂ ಏನು? 'ಬಂಟರಾವ್ ಭಕ್ತರಿಗೆ. ನೆನೆವರು ನಂಟರು. ಎಮಗೊಲಿದಂತೆ ಹೊಗಳಿದಡೆ ಎಂಟುಮಡಿ ಮೆಚ್ಚು ವೆವು. ಮೆಚ್ಚೆವು ತರ್ಕಸಾಧಕರ. ಉಂಟು ಪಾಂಡವರೈವರೊಳು ಬಲುನಂಟತನ. ಮುಱಿಯೇತಕವರಿಗೆ ಕಂಟಕರು ನಮಗಾದ ಕಂಟಕರು.' ಪಾಂಡವರಲ್ಲಿದ್ದ ಈ ಗಾಢ ವಾದ ಪ್ರೇಮ ('ವಿಗಡ ಪಾಂಡವರೆನ್ನ ಜೀವನ' ಎನ್ನುವುದು ಆತನ ಮಾತಲ್ಲವೆ?)

ಅವನನ್ನು ಅರ್ಜುನನ ಸಾರಥಿತನವನ್ನು ಕೈಕೊಳ್ಳುವಂತೆ ಪ್ರೇರಿಸಿತು. ಪಾಂಡವರ ದೂತನಾಗಿ ಆತನು ಕೌರವನಲ್ಲಿಗೆ ಬಂದು ಆಳಿಕಾಜಿ, ಗೋಪೀಜಾರ, ಜಾರೆಯ ಮಕ್ಕಳ ಜೀವ, ಕೈತವದ ಶಿಕ್ಷಾಗುರು ಇವೇ ಮೊದಲಾದ ಬಿರುದುಗಳನ್ನು ಧರಿಸ ಬೇಕಾಯಿತು. ಅಷ್ಟೇ ಅಲ್ಲ; ತುಂಬಿದ ಸಭೆಯಲ್ಲಿ ಒಳಗಾಗುವ ಸಂದರ್ಭವುಂಟಾ ಯಿತು. ಈ ಅವಮಾನಗಳನ್ನು ಆತನು ಭಕ್ತರಿಗಾಗಿ ಸಹಿಸಿದನು. ಹಾಗೆ ಸಹಿಸಿ ದ್ರೌಪದಿಗೆ ಕೊಟ್ಟ 'ಕಾಳಗವನೇ ಬಲಿದು ಬಹೆನು. ಇವರೇಳಿಲವ ಮಾಡಿದರೆ ರಿಪು ಗಳ ಸೀಳಿ ಕರುಳನು ಮುಡಿಸದಿಹೆನೇ ನಿನ್ನ ಕಬರಿಯೊಳು' ಎಂಬ ಭಾಷೆಯನ್ನು ಸಾರ್ಥಕಗೊಳಿಸಿದನು. ಕೃಷ್ಣನ ಈ ಭಕ್ತವಾತ್ಸಲ್ಯ ಕರ್ಣನನ್ನು ಪಾಂಡವರ ಕಡೆಗೆ ಸೆಳೆಯುವಂತೆ ಪ್ರೇರಿಸಿತು. ಕರ್ಣನು ಪಾಂಡವರ ಕಡೆಗೆ ಬರಬೇಕೆಂಬುದೇನೂ ಕೃಷ್ಣನ ಹೆಬ್ಬಯಕೆಯಾಗಿರಲಿಲ್ಲ. 'ನಿನ್ನಯ ಧೀರರೈವರ ನೋಯಿಸೆನು ರಾಜೀವಸಖ ನಾಣೆ' ಎಂಬ ಕರ್ಣನ ದೃಢವನ್ನು ಕಂಡು ಕೃಷ್ಣನು ಮನಸ್ಸಿನಲ್ಲಿಯೇ ಉತ್ಸಾಹ ಗೊಂಡನು. ಮುಖ್ಯವಾಗಿ ಪಾಂಡವರನ್ನು ತಲೆಗಾಯಬೇಕಾದುದು ಅವನ ಆಶೆ ಯಾಗಿತ್ತು. ಸಾಮದಾನಗಳು ಕೌರವನಲ್ಲಿ ವಿಫಲಗೊಂಡಿದ್ದವು. ಈಗ ಕುಂತಿಯಿಂದ ವರವನ್ನು ಬೇಡಿಸಿ, ತಾನು ಕರ್ಣನಿಗೆ ಅವನ ಕುಲವನ್ನು ಅರುಹಿ, ಭೇದದಲ್ಲಿ ಕುರು ಕುಲವನ್ನು ಕೊಂದನು. ದಂಡವಿಧಾನ ನಿಧಾನವಾದರೂ ನಿಶ್ಚಯವಾಯಿತು.

ಕೃಷ್ಣನು ವ್ಯವಹಾರಕುಶಲ. ತನ್ನ ಸಹಾಯವನ್ನು ಬೇಡಿ ಬಂದ ಕೌರವನನ್ನು ವಿನಯದಿಂದಲೇ ಕಂಡನು. ಕೌರವನಿಗೆ ಅವನು ಹೇಳಿದ ಬುದ್ಧಿವಾದದಿಂದ ನಿಜ ವಾಗಿಯೂ-ಕೊನೆಗೆ ಆ ಸಂದರ್ಭದಲ್ಲಿಯಾದರೂ—ಎರಡು ಪಕ್ಷಗಳಿಗೂ ಸಮಾಧಾನ ವನ್ನು ಏರ್ಪಡಿಸಲು ಯತ್ನಿಸಿದನೆಂದು ತೋರುತ್ತದೆ. ಆದರೆ ಕೌರವನು ಅದಕ್ಕೆ ಜಗ್ಗಲಿಲ್ಲ. ಆದರೂ ಈ ಪರ್ವದ ಉದ್ದಕ್ಕೂ ಕೃಷ್ಣನ ಮನಸ್ಸನ್ನು ಪರೀಕ್ಷಿಸಿದರೆ ಯುದ್ಧಕ್ಕಾಗಿ ಅವನು ತವಕಿಸುತ್ತಿದ್ದನೆಂದು ತೋರುತ್ತದೆ. ಭೀಮನ ಮನಸ್ಸು ಸಂಧಿ ಗಾಗಿ ತವಕಿಸಿದಾಗ ಇದು ಸ್ಪಷ್ಟವಾಗುತ್ತದೆ. ಕೌರವನ ಸಭೆಯಲ್ಲಿಯೂ ಆತನು ಸಂಧಿಗಾಗಿ ಸಾಮದಾನಗಳಿಂದ ಯತ್ನಿಸಿ ನೋಡಿದನು. ಆದರೆ ಕೌರವನು ಯಾವು ದಕ್ಕೂ ಒಪ್ಪದಿದ್ದಾಗ ವಿಶ್ವರೂಪವನ್ನು ತೋರಿಸಿದನು. ಕೊನೆಗೆ ಕೃಷ್ಣನು ಅಂಧ ನೃಪನಿಗೂ ಕಣ್ಣುಗಳನ್ನು ಕರುಣಿಸಿದನು. ಕೃಷ್ಣನು ತಾನು ಮಹಾಮಹಿಮ ನಾಗಿದ್ದರೂ ಲೋಕಮರ್ಯಾದೆಯನ್ನು ಮೀರಲಿಲ್ಲ. ಅವನು ಪ್ರಯಾಣ ಹೊರಡ ಬೇಕಾದರೆ ಜೋಯಿಸರ ಜೋಕೆ ಇರಬೇಕು. ಭೂಮೀಸುರರನ್ನು ಪೂಜಿಸಿ ಪ್ರಯಾಣ ಹೊರಡುತ್ತಾನೆ. ಹಿರಿಯರಿಗೆ ತಾ ಹಿರಿಯನೆನಿಸುವ ಗರುವತನವನ್ನು ಬಿಸುಟು ಕುಂತಿಗೆ ಕರವ ಮುಗಿಯುತ್ತಾನೆ. ಸಂಜಯನನ್ನು ಕಂಡು ಗೌರವಿಸಿದುದು ಕೃಷ್ಣನ ಲೋಕ ವ್ಯವಹಾರವನ್ನು ತಿಳಿಸುವುದಕ್ಕೆ ಉತ್ತಮವಾದ ಉದಾಹರಣೆ. ಇಂತಹ ಮಹಾ ಮಹಿಮನು ಪಾಂಡುಪುತ್ರರ ಬೆನ್ನಿನಲ್ಲಿರುವಾಗ ಅವರಿಗೆ ಮಂಗಳವಲ್ಲದೆ ಇನ್ನೇನು?

ಇನ್ನೊಂದು ಅಂಶ. ಕೃಷ್ಣನು ಸರಸಿ. ಅರ್ಜುನನೊಡನೆ ಅವನು ಸಂಭಾಷಿಸಿದ ಸಂದರ್ಭದಲ್ಲಿಯೂ, ತನ್ನನ್ನು ನಿರ್ಲಕ್ಷಿಸಿ ಕುಳಿತಿದ್ದ ಕೌರವನನ್ನು ಕೆಡವಿದಾಗ ಅವನು ಮಾತನಾಡಿದ ರೀತಿಯಿಂದಲೂ ಅದು ವ್ಯಕ್ತವಾಗುತ್ತದೆ. ಬಾಳಿನಲ್ಲಿ ಬಂದ ನಾನಾ ಕಷ್ಟಗಳನ್ನು ಎದುರಿಸಿದ ಈತನಿಗೆ ಈ ಸರಸತೆ ಹುಟ್ಟುಗುಣ. ಶ್ರೀಕೃಷ್ಣನು

ತನ್ನ ಭಕ್ತವಾತ್ಸಲ್ಯದಿಂದ, ಲೋಕವ್ಯವಹಾರಜ್ಞಾನದಿಂದ, ಮೃದುಮಧುರವಾದ ಹಾಸ್ಯದಿಂದ ತನ್ನ ಪ್ರಭಾವವನ್ನು ಎಲ್ಲರ ಮೇಲೂ ಬೀರಿ ಹಿರಿಯಸ್ಥಾನದಲ್ಲಿ ನಿಂತಿದ್ದಾನೆ.

೨. ದುರ್ಯೋಧನ

ಪಂಪ ಮಹಾಕವಿ ತನ್ನ ಭಾರತವನ್ನು ಉಪಸಂಹರಿಸುತ್ತ 'ಇವರ್ಗಳಿನ್ ಈ ಭಾರತಂ ಲೋಕಪೂಜ್ಯಂ' ಎಂದು ಸಾರುವಾಗ ಭೀಷ್ಮದ್ರೋಣ ಕರ್ಣಾದಿಗಳ ಸಾಲಿನಲ್ಲಿ 'ಚಲದೊಳ್ ದುರ್ಯೋಧನನ್' ಎಂದು ಕೌರವನನ್ನು ಮೊದಲು ಹೆಸರಿಸಿದ್ದಾನೆ. ಕೌರವನ ವಿಷಯದಲ್ಲಿ ಕವಿಯ ಉಕ್ತಿ ಸತ್ಯವಾದುದು. ಏಕೆಂದರೆ ಪಾಂಡವರಿಗೆ 'ಮುಳ್ಳುಮೊನೆಯುಚ್ಚಳಿಪ ಧರಣಿಯು'ನ್ನು ಕೊಡೆನೆಂದ ಅವನ ಚಲವೇ ಮಹಾಭಾರತ ಯುದ್ಧದ ದುರಂತಕ್ಕೆ ಮೂಲವಾಯಿತಲ್ಲವೇ ? ಈ ದುರಂತಕ್ಕೆ ಪೀಠಿಕೆ ಉದ್ಯೋಗ ಪರ್ವವಾಗಿರುವ ಕಾರಣ, ಕೌರವನ ಪಾತ್ರ ಇಲ್ಲಿ ಸಾಕಷ್ಟು ವಿವರವಾಗಿ ಬಂದಿದೆ. ದುರ್ಯೋಧನನ ಪಾತ್ರವನ್ನು ಪರಿಶೀಲಿಸುವಾಗ ಅವನಿಗೂ ಕೃಷ್ಣನಿಗೂ ಮತ್ತು ಪಾಂಡವರಿಗೂ ಇರುವ ಸಂಬಂಧವನ್ನು ನಾವು ಗಮನಿಸಬೇಕು.

ದುರ್ಯೋಧನನು ತಂತ್ರಿ. ಕೃಷ್ಣನು ಹೇಳುವಂತೆ ಅವನು 'ಮಾಯಾವಿದ.' ಪಾಂಡವರು ಯುದ್ಧಸನ್ನದ್ಧರಾಗುತ್ತಲೇ 'ಅರಿಗಳತಿ ಹೆಚ್ಚಿದರು. ವೈಮುಜಿದಿರಲು ಮಹಿಮೆಗೆ ಅಮಾನ್ಯವಹುದು, ಇನ್ನು ಉರವಣಿಸಬೇಕೆ'ಂದು ಯೋಚಿಸಿ ಕೃಷ್ಣನನ್ನು ಒಳಗುಮಾಡಿಕೊಳ್ಳಬಯಸಿದನು. ಪಾಂಡವರ ಜೀವ ಕೃಷ್ಣನೆಂಬುದು ಕೌರವನಿಗೆ ಚೆನ್ನಾಗಿ ಗೊತ್ತಿತ್ತು. ಈ ಉದ್ದೇಶ ಸಾಧನೆಗಾಗಿ ಅವನು ದ್ವಾರಕೆಗೆ ಬಂದಾಗ, ನಿದ್ರೆ ಹೋಗುತ್ತಿದ್ದ ಕೃಷ್ಣನ ತಲೆಯ ದೆಸೆಯಲ್ಲಿ ಕುಳಿತನೇ ಹೊರತು, ತನ್ನ ಬಿಂಕವನ್ನು ಬಿಡಲಿಲ್ಲ. ಸಹಾಯದ ಮಾತು ಬಂದಾಗ ಅವನು ತುಂಬ ವಿನಯವಾಗಿ ಮಾತನಾಡಿದನು.

> ಯಾದವರು ಕೌರವರೊಳುಂಟೇ। ಭೇದವಾವೈತಂದರೆಮ್ಮೊಳ।
> ಗಾದ ಲಾಘವವೇನು ನಿಮ್ಮ ವೊಲಾರು ಸಖರೆಮಗೆ॥
> ಸೋದರರ ಮನ ಕದಡಿದವು ದಾ। ಯಾದ ವಿಷಯದಲಿನ್ನು ಧರಣಿಗೆ।
> ಕಾದುವೆವು ನೀವಿಬ್ಬರಿಗೆ ಬಲವಾಗಬೇಕು॥ ೨-೧೪

ಕೃಷ್ಣನು ಎರಡು ವಂಶಗಳಿಗೂ ಶ್ರೇಯಸ್ಸಾಗಲೆಂಬ ಉದ್ದೇಶದಿಂದ ನಾಲ್ಕು ಒಳ್ಳೆಯ ಮಾತುಗಳನ್ನು ಹೇಳಿದರೆ ಕೌರವನಿಗೆ ಅದು ಪಥ್ಯವೆನಿಸಲಿಲ್ಲ. ಅವನದು ಒಂದೇ ಹಟ. 'ಅವಧರಿಸು ಮುರವೈರಿ, ಧರ್ಮಶ್ರವಣಕೋಸುಗ ಬಾರೆವಾವ್ ; ಪಾರ್ಥಿವರ ಪಂಥದ ಕದನ ವಿದ್ಯಾಕಾಮುವೆಮಗಾಯ್ತು. ನಿವಗೆ ನಾವಿತ್ತಂಡ ಸರಿ. ಪಾಂಡವರಿಗೆಯು (ಪಾಂಡವರ ವಿಷಯದಲ್ಲಿ ನಿನಗೆ ತುಂಬ ಪ್ರೇಮವಷ್ಟೇ) ಮನದೊಲವಿನಲಿ ಕೌರವರಿಗೆಯು ಬಲವಾಗಬೇಕು' ಎಂದು ಪ್ರಾರ್ಥಿಸಿದನು. ಕೃಷ್ಣನು ತನ್ನ ಬಲವನ್ನು ಎರಡು ಭಾಗಮಾಡಿ ಅರ್ಜುನನಿಗೆ ಮೊದಲು ವರಣ ಸ್ವಾತಂತ್ರ್ಯವನ್ನು ಕೊಟ್ಟಾಗ ಕೌರವನಿಗೆ ಅರ್ಥವಾಯಿತು, ಕೃಷ್ಣ ತನ್ನ ಬಲೆಗೆ ಬೀಳುವವನಲ್ಲ

ವೆಂದು. (ಆದರೆ ಅದೇ ಶಲ್ಯ ಕೌರವನ ಆತಿಥ್ಯಕ್ಕೆ ಮರುಳಾಗಿ ತನ್ನ ಸರ್ವಸ್ವವನ್ನೂ ಕೌರವನಿಗೆ ಒಪ್ಪಿಸಿದನು!) ಕೃಷ್ಣನು ಆತ್ಮವನ್ನೂ ಅರ್ಜುನನಿಗೆ ಕೊಟ್ಟು, ದೇಹವನ್ನು ತನಗೆ ಕೊಟ್ಟಾಗ ಕೌರವನು ಹೊಟ್ಟೆಯುರಿದುಕೊಂಡು ಮೊದಲಿನ ವಿನಯವನ್ನು ಚುಚ್ಚುಮಾತಿಗೆ ತಿರುಗಿಸಿದನು. ಅವನು ಕೃಷ್ಣನಿಗೆ ಹೇಳಿದ್ದಾದರೂ ಏನು? 'ಮಱೆಯ ಮಾತುಗಳೇಕೆ? ಪಾಂಡವರೆಱಕ ನಿಮ್ಮಲಿ ಹಿರಿದು. ಪಾರ್ಥಗೆ ಮಱುಗು ವಿರಿ ಹಿರಿದಾಗಿ. ಮನಮೆಚ್ಚುಂಟು ನಿಮ್ಮೊಳಗೆ. ಉಱುವ ಕಾರ್ಯಕೆ ಕಡೆಯಲಾವೇ ಹೊಱಗು.' ಇಷ್ಟನ್ನು ಹೇಳಿ ಕೌರವನು ಸುಮ್ಮನಾಗಲಿಲ್ಲ. ಕೃಷ್ಣನ ಶಕ್ತಿ ಸಾಮರ್ಥ್ಯಗಳನ್ನು ಮನಗಂಡಿದ್ದ ಅವನು ಮತ್ತೆ 'ಸಾಕಂತಿರಲಿ ನೀವ್ ಹೊಕ್ಕಿಱಿಯಲಾಗದು. ಮತ್ತೆ ಇದನೆ ಬೇಡಿಕೊಳ್ಳುವೆನು' ಎಂದು ಅವನ ಮನಸ್ಸನ್ನು ಒಲಿಸಿಕೊಳ್ಳಲು ಯತ್ನಿಸಿದನು. ಶ್ರೀಕೃಷ್ಣನು ಚತುರನಾಗಿದ್ದ ಕಾರಣ ದುರ್ಯೋಧನನ ತಂತ್ರ ಅವನಲ್ಲಿ ನಾಟಲಿಲ್ಲ.

ಶ್ರೀಕೃಷ್ಣನ ಶಕ್ತಿಸಾಮರ್ಥ್ಯಗಳೂ ಮಹಿಮೆಗರಿಮೆಗಳೂ ಕೌರವನಿಗೆ ಚೆನ್ನಾಗಿ ಗೊತ್ತಿದ್ದವು. ಅವುಗಳನ್ನು ಕಂಡು ಅವನಿಗೆ ಸಾಕಷ್ಟು ಭಯವೇನೋ ಇತ್ತು. ಒಂದು ದೃಷ್ಟಿಯಿಂದ 'ಹರಿ ಹಗೆ ಕಣಾ! ಕುಂತೀ ಕುಮಾರರು ಹಗೆಗಳೇ? ಮನ್ನಿಸಿದರೆಂದು ಳುಹುವನೆ ಮುರವೈರಿ?' ಎಂಬುದನ್ನು ಅವನು ಮನಗಂಡಿದ್ದನು. ಆದ್ದರಿಂದ ಕೃಷ್ಣನು ಹಸ್ತಿನಾವತಿಗೆ ಬರುವನೆಂಬ ಸುದ್ದಿಯನ್ನು ಕೇಳಿದಾಗ ಅವನನ್ನು ಸತ್ಕರಿಸಲು ಅವನಿಗೆ ಮನಸ್ಸಾಗಲಿಲ್ಲ. ಅದಕ್ಕೆ ಬದಲಾಗಿ ಅವನನ್ನು ಬಿಗಿದು ಕೆಡಹುವುದೇ ಉಚಿತವೆಂದು ಅವನಿಗೆ ತೋರಿತು. (ಅವನು ಹಾಗೆ ಮಾಡಲು ಯತ್ನಿಸಿದನು. ಆದರೆ ಕೃಷ್ಣನು ಅವನಿಗೆ ದಕ್ಕಲಿಲ್ಲ!) ಹಸ್ತಿನಾವತಿಗೆ ಬಂದಾಗ 'ಕೌರವನು ಹರಿಬಾರದಿರನೆಂದು' ಎಲ್ಲ ಏರ್ಪಾಟುಗಳನ್ನು ಮಾಡಿದರೂ ಕೃಷ್ಣನನ್ನು ಹೋಗಿ ಕರೆಯಲಿಲ್ಲ. ಕೃಷ್ಣನು ಕೌರವನ ಏರ್ಪಾಡುಗಳನ್ನು ವ್ಯರ್ಥಗೊಳಿಸಿದ ಕಾರಣ ವಿದುರನು ಸಭೆಗೆ ಹೋಗಿ 'ಸಿರಿಲೋಲ ಬಿಜಯಂಗೈಯಲವಸರವುಂಟೇ?' ಎಂದು ಕೇಳಿದರೆ, 'ಆಳಿಕಾಱನ ಬರವು ಇನ್ನೇತಕ್ಕೆ? ಹಗೆವರ ಪಾಲಿಸುವ ಭರ ಸಂಧಿಕಾರ್ಯಕೆ ಬಾರದಿಹನು, ಆದ್ದರಿಂದ ನಾಳೆ ಬರಹೇಳು' ಎಂದು ಧಿಕ್ಕರಿಸಿ ನುಡಿದನು. 'ಐಶ್ವರ್ಯ ವಿಜೃಂಭಣೆ ಅಂಧಕಾರಗಳಲ್ಲಿ ಬೀಗಿಹೋದ ಸಕಲಧರಿತ್ರೀ ಕಾಂತನಿಗೆ ಪುರುಷೋತ್ತಮಗಿರು ಷೋತ್ತಮರ ಲಕ್ಷವೇ? ಬಡದಾಯಾದಿಗಳ ದಿನಗೂಲಿ ತಾನೆ ಆ ದನ ಕಾಯುವ ಗೊಲ್ಲ; ತಾನು "ಜಗದೂಳಿಗದ ದುರುದುಂಬಿ ಕುರುಪತಿ. ಚಕ್ರವರ್ತಿಯ ಸಮಯವನ್ನು ಕಾದಿದ್ದು ದರ್ಬಾರಿಗೆ ಬರಲಿ; ಕೊಳ್ಳೆ ಹೋದುದೇನು!" ಎಂದು ಹೇಳಿದನು. ಅವನ ಶಠತನ ಇಷ್ಟಕ್ಕೇ ನಿಲ್ಲಲಿಲ್ಲ. ಸಹಸ್ರ ಕೈಗಳಲ್ಲಿ ಲೋಕಕ್ಕೆ ಐಶ್ವರ್ಯವನ್ನು ದಾನಮಾಡುವ ಲಕ್ಷ್ಮೀಕಾಂತನೆದುರು ಪಾಂಡವರಿಗೆ ಅದನ್ನು ಕೃಷ್ಣನು ವರ್ಣಿಸಿ ಹೇಳಿ ಹೊಟ್ಟೆ ಉರಿಸಲೆಂಬಂತೆ ತನ್ನ ಎಲ್ಲ ವೈಭವವನ್ನು ಪ್ರದರ್ಶಿಸಿ ಬೀಗಿ ಮೆರೆದ ಇವನಿಗೆ ಸೆಣಸು ಸೇರದೆ ದೇವನಿಂದ ತಕ್ಕ ಮರ್ಯಾದೆಯಾಯಿತು. ಆದರೂ ಕೌರವನು ಬಿದ್ದರೂ ಮೀಸೆ ಮಣ್ಣಾಗದವನಂತೆ 'ಗೋವಳಿಗತನ ನಿಮ್ಮ ಮೈಸಿರಿ ತಪ್ಪದಾಯ್ತು' 'ನಿಮಗೆ ರಾಯರ ಠೀವಿ ಏಕೆ?' ಎಂದು ಹಂಗಿಸಿದನು. ಕೃಷ್ಣನ ಸಾಮದಾನಗಳಿಗೆ ಅವನು ಬಗ್ಗಲಿಲ್ಲ, ಒಳಗಾಗಲಿಲ್ಲ. ಐದು ಗ್ರಾಮಗಳನ್ನಾದರೂ

ಕೊಡು ಎಂದು ಸ್ವಾಮಿ ಬೇಡಿದರೆ 'ಬೆರಳ ಮಿಾಸೆಯೊಳಿಡುತ ಕಿಱುನಗೆವೆರಸಿ' 'ಕರೆದು ಮೂಱಡಿ ನೆಲನ ಧಾರೆಯನೆಱೆದ ಬಲಿ ತಳಕಿಳಿದನು, ಎನ್ನ ಈ ಧರೆಯೊಳು (ತಾನು ಶಾಶ್ವತವಾಗಿರುವೆನೆಂಬ ಜಂಕದಿಂದ ಹೇಳುವ ಅವನ ಔದ್ಧತ್ಯವೆಷ್ಟು!) ಐದೂರುಗಳ ನಿತ್ತೆನಗಾವ ಪದವಹುದೊ! ಪರಮಪುರುಷನು ನೀನು. ನಿನಗಾಂ ಶರಣುಪ್ರೇಕ್ಷೆನು, ಬಂದ ಪಥದಲಿ ಮರಳಿ ಬಿಜಯಂಗೈ' ಎಂದು ಹೇಳಿ ಪಾಂಡವರಿಗೆ 'ಮುಳ್ಳು ಮೊನೆ ಯುಚ್ಚಳಿಪ' ಭೂಮಿಯನ್ನೂ ಕೊಡೆನೆಂದು ಹಟಹಿಡಿದು, ಈ ಗೋಪೀಜಾರ ಜಾರೆಯ ಮಕ್ಕಳಿಗೆ ಜೀವವೆಂದರಿತು ಅವನನ್ನು ಕಟ್ಟಿಹಾಕಲು ಯತ್ನಿಸಿದನು. ದೂತರನ್ನು ಕಟ್ಟುವುದು ರಾಯರಿಗೆ ಉಚಿತವಲ್ಲವೆಂಬ ನೀತಿಯನ್ನು ಬಗೆಯಲಿಲ್ಲ.

ಶ್ರೀಕೃಷ್ಣನು ವಿಷ್ಣುವಿನ ಅವತಾರವೆಂದು ಕೌರವನು ಬಗೆದಿದ್ದರೂ ಸಂಧಾನದ ವಿಷಯದಲ್ಲಿ ಅವನು ತನ್ನ ನಿರ್ಧಾರವನ್ನು ಬದಲಿಸಲಿಲ್ಲ. ನಿಜವಾಗಿಯೂ ಕೃಷ್ಣನ ಅಭಿಪ್ರಾಯ ಸಂಧಿಗೆ ಅಲ್ಲವೆಂದು ಅವನಿಗೆ ಗೊತ್ತು. 'ಸಂಧಿಯ ಮಾತು ತಾ ನಿಚ್ಚಯವೆ ನೀವ್ ಬೆಸಗೊಳ್ಳಿ ಮುರಹರನ.' ಅಂತರ್ಯಾಮಿಯಾದ ಆತನಿಗೆ ತಾನೇಕೆ ಹೆದರಬೇಕು? ಕೌರವನ ಕೊನೆಯ ನಿರ್ಧಾರ 'ಮಣಿದು ಬದುಕುವವನಲ್ಲ, ಹಗೆಯಲಿ ಸೆಣಸಿ ಬಿಡುವವನಲ್ಲ, ಧಾರಿಣಿಯ ಸಿರಿಗೆ ಎಳಸುವವನಲ್ಲ ಅಳುಕಿಲ್ಲ ಕಾಯ ದೊಳು. ರಣಮಹೋತ್ಸವವೆಮ್ಮ ಮತ. ಕೈದಣಿಯೆ ಹೊಯ್ದಾಡುವೆನು. ಕೃಷ್ಣನ ಕೆಣಕಿ ದಲ್ಲದೆ ವಹಿಲದಲಿ ಕೈವಲ್ಯವಿಲ್ಲ.' ಕೌರವನ ಈ ಹಟ, ಅಭಿಮಾನ, ಆತ್ಮಗೌರವ ಗಳನ್ನು ನಾವು ಮೆಚ್ಚಲೇಬೇಕು.

ಪಾಂಡವರ ವಿಷಯದಲ್ಲಿ ಕೌರವನಿಗೆ ತಾತ್ಸಾರಭಾವ. ವಾನಪ್ರಸ್ಥ ಸನ್ಯಾಸಗಳನ್ನು ಕೈಕೊಂಡ ಧರ್ಮರಾಜನು ರಾಜ್ಯಕ್ಕೆ ಮತ್ತೆ ಆಸೆಪಡುವುದು ಉಚಿತವಲ್ಲವೆಂಬ ವ್ಯಂಗ್ಯ ಸೂಚಕವಾದ ಸಂದೇಶ ಅವನ ಮನೋಭಾವವನ್ನು ವ್ಯಕ್ತಪಡಿಸುತ್ತದೆ. 'ನಾಡಬಯ ಸುವಡೆಮ್ಮೊಡನೆ ಹೊಯ್ದಾಡುವುದು, ಸಂಪ್ರತಿಗೆ ಚಿತ್ತವ ಮಾಡಲಾಗದು. ಸಂಧಿ ವೀರಕ್ಷತ್ರಿಯರ ಮತವೆ' ಎಂಬ ಅವನ ಮಾತು ಕ್ಷತ್ರಿಯರಿಗೆ ಉಚಿತವಾಗಿದೆ. ಆದ್ದ ರಿಂದಲೇ ಪಾಂಡವರು ಭೂಮಿಯಲ್ಲಿ ಅರ್ಧ ಭೂಮಿಯನ್ನು ಬೇಡಿದರೆ ಸಂಗ್ರಾಮ ಭೂಮಿಯನ್ನು ಕೊಟ್ಟನು.

ಕಥೆಯ ಉದ್ದಕ್ಕೂ ಕೌರವನು ಹಿರಿಯರಿಗೆ ಧಿಕ್ಕರಿಸಿ ಮಾತನಾಡುತ್ತಾನೆ. ಭೀಷ್ಮ, ದ್ರೋಣ, ವಿದುರ ಇವರ ಬುದ್ಧಿಯ ಮಾತುಗಳು ಅವನ ಮನಸ್ಸನ್ನು ಹೊಗವು. ಇದಕ್ಕೆ ಕಾರಣವೇನು? ಭೀಷ್ಮ ದ್ರೋಣರ ಮಾತುಗಳು ಹಿತಕರವಾಗಿ ದ್ದರೂ, ಅವು ಕೌರವನನ್ನು ತೆಗಳುವಂತೆಯೂ, ಪಾಂಡವರನ್ನು ಹೊಗಳುವಂತೆಯೂ ಇರುತ್ತಿದ್ದವು. ಇದರಿಂದ ಅವನು ಕೆರಳುತ್ತಿದ್ದುದು ನ್ಯಾಯವಾಗಿಯೇ ಇತ್ತು. 'ಹುರುಳುಗೆಡಿಸುವಿರಾವು ನುಡಿವಡೆ, ಕರಗಿ ಕುಂತಿಯ ಮಕ್ಕಳೆಂದರೆ ಹರಹಿಕೊಂಬಿರಿ; ಡಿಂಬವೆಮ್ಮಲಿ ಜೀವವವರಲ್ಲಿ. ಭರತ ಸಂತತಿಗಳಲಿ ಕೆಲಬರು ನರರೆ, ಕೆಲಬರು ಸುರರೆ? ಸಾಕಂತಿರಲಿ ಸಮರದಲೆಮ್ಮ ನೋಡು' ಎಂಬ ಅವನ ಮಾತಿನ ಹಿಂದೆ ಇರುವ ಮನೋಭಾವವೂ ಪಾಂಡವರ ವಿಷಯದಲ್ಲಿ ತಿರಸ್ಕಾರವೂ ಸ್ಪಷ್ಟಪಡುತ್ತವೆ.

ಕೌರವನು ಪೂರ್ತಿಯಾಗಿ ದುಷ್ಟನೇನಲ್ಲ. ಕರ್ಣನ ಮಾತಿನಿಂದ ಅವನ ಮಿತ್ರ ಸ್ನೇಹದ ವೈಭವದ ಅರಿವು ನಮಗಾಗುತ್ತದೆ.

೩. ಕರ್ಣ

ಕನ್ನಡ ಮಹಾಭಾರತದಲ್ಲಿ ಕರ್ಣನ ವ್ಯಕ್ತಿಚಿತ್ರ ಸಂಪೂರ್ಣವಾಗಿ ನಮ್ಮೆದುರಿಗೆ ನಿಲ್ಲುವುದು ಉದ್ಯೋಗಪರ್ವದಲ್ಲಿಯೇ. ಇದಕ್ಕಿಂತ ಮುಂಚೆ ಉಳಿದ ಪರ್ವಗಳಲ್ಲಿ ಕರ್ಣನ ಚಿತ್ರ ಅಲ್ಲಷ್ಟು ಇಲ್ಲಷ್ಟು ಕಾಣಿಸಿಕೊಂಡರೂ ಕತ್ತಲಲ್ಲಿ ಮಿಣುಕುವ ಮಿಂಚುಹುಳುವಿನ ಪ್ರಭೆಯಂತೆ, ಮರಳಿನಲ್ಲಿ ಹರಿಯುವ ಕಿರುದೊರೆಯ ಪ್ರವಾಹದಂತೆ ಅದು ಅಸ್ಪಷ್ಟ. ಉದ್ಯೋಗಪರ್ವದ ಕರ್ಣನ ಪಾತ್ರವನ್ನು ಸಂಪೂರ್ಣವಾಗಿ ಗ್ರಹಿಸುವುದಕ್ಕಿಂತ ಮುಂಚೆ ಕರ್ಣನ ಬಾಲ್ಯಕ್ಕೆ, ಅದರ ಮುಂದಿನ ಜೀವನಕ್ಕೆ ಸಂಬಂಧಿಸಿದ ಒಂದೆರಡು ಅಂಶಗಳನ್ನು ಇಲ್ಲಿ ತಿಳಿದುಕೊಳ್ಳುವುದು ಅವಶ್ಯಕ. ಕುಂತಿ ದುರ್ವಾಸರಿಂದ ಪಡೆದ ಮಂತ್ರಗಳನ್ನು ಪರೀಕ್ಷಿಸುವುದಕ್ಕಾಗಿ 'ಮಗುವುತನದಲಿ ಬೊಂಬೆಯಾಟಕೆ ಮಗುವನೇ ತಹೆನೆಂದು' ಗಂಗಾ ತೀರಕ್ಕೆ ಬಂದು ಸೂರ್ಯನನ್ನು ಆಹ್ವಾನಿಸಿದಳು. ದುರ್ವಾಸನು ಕೊಟ್ಟ ಮಂತ್ರ ಸಾಮಾನ್ಯವಾದುದೇನು? ಸೂರ್ಯನಿಂದ ಅವನ ತೂಕದ ಮಗನೇ ಜನಿಸಿದನು. ತರಣಿ ಬಿಂಬದ ಮರಿಯಂತಿದ್ದ ಆ ಮಗುವನ್ನು ಕಂಡು ಕುಂತಿಗೆ ಒಂದು ಕಡೆ ಲಜ್ಜೆ, ಮತ್ತೊಂದು ಕಡೆ ಭಯ! ಹೀಗೆ ಅವಳ ಮನಸ್ಸಿನಲ್ಲಿ ಹೋರಾಟವಾಗಿ ಕುಲದ ಸಿರಿ ತಪ್ಪುವುದೆಂದು ಹೆದರಿ, ಜನದಪವಾದ ಭೀತಿಯಿಂದ ಮಗುವನ್ನು ಆ ಮಹಾಮಾತೆ ಗಂಗಾಜಲದಲ್ಲಿ ಹಾಕಿಬಿಟ್ಟಳು. ಹುಟ್ಟಿದ ಮಕ್ಕಳನ್ನು ಹೊಳೆಗೆಸೆಯುವುದಕ್ಕೆ ಈ ಮುಂಚೆ ಕುಂತಿಯ ಅತ್ತೆಯ ಅತ್ತೆ (ಗಂಗೆ) ಆದರ್ಶಳಾಗಿದ್ದಳು. ಅಂತೂ ಕುರು ಪಾಂಡವ ವಂಶಕ್ಕೆ ಹಿರಿಯನಾಗಿ ಬೆಳಗಿ ಚಕ್ರವರ್ತಿಯಾಗಬೇಕಾಗಿದ್ದವನು ತಾಯಿಯ ಅವಿವೇಕದಿಂದ ಅಕಾರ್ಯದಿಂದ ತಬ್ಬಲಿಯಾದನು.

ಆದರೆ ವಿಧಿ ಕರ್ಣನನ್ನು ಅಷ್ಟಕ್ಕೇ ಬಿಡಲಿಲ್ಲ. ಗಂಗೆ ಮಗು ಸಾಯುವುದಕ್ಕೆ ಅವಕಾಶಕೊಡಲಿಲ್ಲ. ಗಂಗೆ ತಡಿಗೆ ಚಾಚಿದ ಮಗುವನ್ನು ಸೂತನೊಬ್ಬನು ನೋಡಿದನು. 'ಮರ್ತ್ಯರಿಗೆ ಮಗನಿವನಲ್ಲ' ಎಂಬ ಭಾವನೆ ಅವನಲ್ಲಿ ಮೂಡಿತು. ಆ ಸೂತನಿಂದ, ಅವನ ಹೆಂಡತಿಯಾದ ರಾಧೆಯಿಂದ ಸಾಕಲ್ಪಟ್ಟ ಇವನು ರಾಧೇಯನೆನಿಸಿ 'ಉರು ಪರಾಕ್ರಮಿ ಬೆಳೆಯುತಿರ್ದನು ಸೂತ ಭವನದಲಿ.' ಕ್ಷತ್ರಿಯನು ಸೂತನಾದನು!

ಕರ್ಣನ ಹುಟ್ಟುಗುಣವೆಲ್ಲಿ ಹೋಗಬೇಕು? ತೇಜಸ್ಸು ಪರಾಕ್ರಮಗಳಿಂದ ಮೆರೆಯುತ್ತಿದ್ದ ಬಾಲಕನು ಸಕಾಲದಲ್ಲಿ ಪರಶುರಾಮರ ಬಳಿ ಶಸ್ತ್ರಾಭ್ಯಾಸ ಮಾಡಿದರೂ ಅದು ಫಲಿಸಲಿಲ್ಲ. ಅದೇನು ದೈವಲೀಲೆಯೋ ಬಲ್ಲವರಾರು? ಕರ್ಣನು ಹಸ್ತಿನಾವತಿಗೆ ಬಂದು ಕೌರವೇಶ್ವರನನ್ನು ಕಂಡ ದಿನವೇ ಅವರಿಬ್ಬರೂ ಪ್ರಾಣಸ್ನೇಹಿತರಾದರು. 'ಅಂದು ಮೊದಲಾಗೆ ಅವರ ಸಖ್ಯಕ್ಕೆ ಸಂದ ಕಾಣೆನು.' ಕರ್ಣ ಕುರುಪತಿಗೆ ಒಂದೆ ಜೀವನ, ಮನ, ಒಂದೆ ಮತ.' ಕರ್ಣ ದುರ್ಯೋಧನರ ಮೈತ್ರಿಯಾದರೂ ಎಂಥಾದ್ದು! 'ಬೇಟೆ ಕರ್ಣನ ಕೂಡೆ, ಹಗಲಿರುಳಾಟ ಕರ್ಣನ ಕೂಡೆ, ಷಡುರಸದೂಟ ಕರ್ಣನ ಕೂಡೆ.' ಹೀಗಾಗಿ ತಾವಿಬ್ಬರೊಂದೆನಿಸಿದರು ಜಗವರಿಯೆ.' ಆದರೆ ಕರ್ಣನನ್ನು ಕಂಡರೆ ಭೀಷ್ಮದ್ರೋಣಾದಿಗಳಿಗೆ ಒಂದು ಕಣ್ಣು. ಅವನು ಸೂತ ಪುತ್ರನೆನಿಸಿದುದು ಅವನ ಮಿಕ್ಕೆಲ್ಲ ಗುಣಗಳನ್ನು ಮರೆಮಾಡಿತು. ಕುರು ಪಾಂಡವರ ಶಸ್ತ್ರವಿದ್ಯಾ ಪ್ರದರ್ಶನ ಸಮಯದಲ್ಲಿ ಕರ್ಣನು ಅರ್ಜುನನಷ್ಟೇ ಚಮತ್ಕಾರಗಳನ್ನು ತೋರಿ 'ಸೆಣಸುವಡೆ ಬಾ'

ಎಂದು ಪಾರ್ಥನ ಕರೆದಾಗ ಕೃಪನು 'ಎಲವೋ ಕರ್ಣ, ನೀನನುನಾಯಕನೋ ನೃಪ ಹಾರದಲಿ ಮೇಣ್ ನಾಯಕನೊ' ಎಂದು ಹಂಗಿಸಿದನು. ಕರ್ಣನ ಕಳೆಗೆಟ್ಟ ಮುಖ ವನ್ನು ನೋಡಿ ದುರ್ಯೋಧನನು ಅಂದೇ ಅವನನ್ನು ಅಂಗರಾಜನನ್ನಾಗಿ ಮಾಡಿದನು. ಕರ್ಣನನ್ನು ಭಂಗಪಡಿಸಲು ಅವನ ಕುಲ ಸಹಕಾರಿಯಾಯ್ತು. ಕುಂತಿಯ ಅವಿವೇಕ ದಿಂದ, ವಿಧಿಯ ಮಹಿಮೆಯಿಂದ ಚಕ್ರವರ್ತಿಯಾಗಬೇಕಾಗಿದ್ದವನು ತಬ್ಬಲಿಯಾದನು; ಕ್ಷತ್ರಿಯನು ಸೂತನಾದನು; ಅಣ್ಣನು ತಮ್ಮನಾದ ಅರ್ಜುನನಿಗೆ ಬದ್ಧವೈರಿಯಾಗಿ ದಾಯಾದರೊಡನೆ ಸೇರಿ ನಾಶವಾದನು!

ಈ ಹಿನ್ನೆಲೆಯ ಅರಿವಾದರೆ ಕರ್ಣನ ಮನಸ್ಸು, ವರ್ತನೆ ನಮಗೆ ಅರ್ಥವಾಗು ತ್ತದೆ. ಎಂದು ಕರ್ಣನು ತನ್ನ ತನುಮನಗಳನ್ನು ದುರ್ಯೋಧನನಿಗಾಗಿ ಒಪ್ಪಿಸಿದನೊ ಅಂದಿನಿಂದ ಅವನ ಅನುಯಾಯಿಯಾಗಬೇಕಾಯಿತು. ಕೌರವನ ವೈರಿಗಳು ಕರ್ಣನ ವೈರಿಗಳು. ಕೌರವನ ಅಭ್ಯುದಯ ಮೇಲ್ಮೆ, ಕರ್ಣನ ಮೇಲ್ಮೆ ಅಭ್ಯುದಯಗಳಾದವು. ದುಷ್ಟರಾದ ಶಕುನಿ ಕೌರವರನ್ನು ಮರೆಹೊಕ್ಕ ಕರ್ಣನು ತನ್ನ ಅಭಿಪ್ರಾಯಗಳನ್ನು ಅವರ ಅಭಿಪ್ರಾಯಗಳಿಗೆ ತಕ್ಕಂತೆ ಹೊಂದಿಸಿಕೊಳ್ಳಬೇಕಾಯಿತು. ಅವರ ದುರಾಲೋಚನೆಗೆ ತಕ್ಕ ಸಹಕಾರವನ್ನು ನೀಡಬೇಕಾಯಿತು. ಕೌರವನನ್ನು ತೃಪ್ತಿಗೊಳಿಸಲೆಂಬಂತೆ ದಾಸಿ ಯಾಗಿದ್ದ ದ್ರೌಪದಿಯನ್ನು ಕುರಿತು 'ಇವಳು ಹಲಬರನುಪಚರಿಸಿದವಳು. ಕೃಪಣನೇ ಕುರುರಾಯ? ನಿನಗಿನ್ನಪದೆಸೆಯ ಹೊಲೆ ಹೋಯ್ತು. ರಾಯನ ವಿಪುಳ ವಿಭವವನನು ಭವಿಸು' ಎಂದು ಕುಹಕವಾಗಿ ನುಡಿದನು. ಭೀಷ್ಮದ್ರೋಣರು ಒಮ್ಮೊಮ್ಮೆ ಮುಖ ಭಂಗ ಮಾಡಿದರೂ ಕೌರವನ ಮನ್ನಣೆ ಅವನಿಗೆ ತಪ್ಪಲಿಲ್ಲ; ಕುಗ್ಗಲಿಲ್ಲ.

ಕೃಷ್ಣನಿಗೆ ಕರ್ಣನಲ್ಲಿ ಸರ್ಪಾಸ್ತ್ರವಿದ್ದ ವಿಷಯ ತಿಳಿಯಬಂದಿತ್ತು. ಇದರಿಂದ ಅರ್ಜುನನನ್ನೂ, ತನ್ಮೂಲಕ ಪಾಂಡವರನ್ನೂ ರಕ್ಷಿಸಬೇಕೆಂದು ಬಯಸಿ ಅವನಲ್ಲಿ ಭೇದವನ್ನು ಎಸಗಲು ಯತ್ನಿಸಿದನು. ಇದಕ್ಕಾಗಿ ಕೃಷ್ಣನು ಕುಂತಿಗೆ 'ಇಂದು ಮುಱಿ ದುದು ಸಂಧಿ. ನಿನ್ನಯ ಕಂದ ಕರ್ಣನ ಬೇಡಿಕೊಳು ನೀನು' ಎಂದು ಸೂಚಿಸಿದನು. ಕೃಷ್ಣನ ಮೇಲಿದ್ದ ಗೌರವದಿಂದ ಭೀಷ್ಮಾದಿಗಳು ಅವನನ್ನು ಕಳುಹಿಸಲು ಬಂದಾಗ ಅವರನ್ನೆಲ್ಲ ಬೀಳ್ಕೊಟ್ಟು, ಕರ್ಣನನ್ನು ಮಾತ್ರ ಹತ್ತಿರ ಕರೆದು 'ಬಂದು ಕಿಱಿದೆಡೆಗಾಗಿ ಕಳುಹುವುದು' ಎಂದು ನೇಮಿಸಿದನು.

ಕರ್ಣನ ಬಾಳಿನಲ್ಲಿ ಅಂದು ವಿಷಮ ಸಮಯ, ಹಾಗೂ ಪರೀಕ್ಷಾ ಸಮಯ; ಕರ್ಣನಿಗೆ ಕೃಷ್ಣನ ನೇರವಾದ ಪರಿಚಯವಿರದಿದ್ದರೂ ಅವನು ಕೃಷ್ಣನ ವಿಷಯವನ್ನು ಸಾಕಷ್ಟು ಕೇಳಿದ್ದನು. ಸಭೆಯಲ್ಲಿ ವಿಶ್ವರೂಪ ದರ್ಶನ ಬೇರೆ ಆಗಿತ್ತು ಕರ್ಣನಿಗೆ. ಈಗ ಸಾಕ್ಷಾತ್ ಪರಮಾತ್ಮನೇ ಬಂದು ಕರ್ಣನೊಡನೆ ಮೈದುನತನದ ಸರಸವನೆಸಗಿ, ತೊಡೆ ಸೋಂಕಿನಲ್ಲಿ ಕುಳಿತು ಅವನ ಕುಲವನ್ನು ಬಣ್ಣಿಸಿದನು. ಪಾಂಡವರ ಹಿರಿಯ ನೀನು ಎಂದು ತಿಳಿಸಿದನು. ಕೃಷ್ಣನ ಸಂಧಾನ ಅಷ್ಟಕ್ಕೇ ನಿಲ್ಲಲಿಲ್ಲ. ಕರ್ಣನು ಉಸಿ ರೆತ್ತುವುದಕ್ಕೂ ಅವಕಾಶಕೊಡದೆ ನೀನು ದೊರೆಯಾಗು. ಪಾಂಡವರನ್ನು ನಿನ್ನ ಕಾಲ ಮೇಲೆ ಕೆಡಹುತ್ತೇನೆ; ಚಕ್ರವರ್ತಿಯಾದ ನಿನ್ನನ್ನು ಕುರುಪಾಂಡವರು ಓಲೈಸುತ್ತಾರೆ, ಹಾಗಾದರೆ ಯುದ್ಧಕ್ಕೆ ಕಾರಣವೇ ಇಲ್ಲ—ಎಂದು ಬಗೆಬಗೆಯಾಗಿ ಬಣ್ಣಿಸಿ ಅವನ ಮುಂದೆ ಸ್ವರ್ಗವನ್ನೇ ಸೃಷ್ಟಿಸಿದನು.

ಕರ್ಣನು ಮೈಯೆಲ್ಲ ಕಿವಿಯಾದವನಂತೆ ಕೃಷ್ಣನ ಮಾತುಗಳನ್ನು ಕೇಳಿದನು. ತಾನು ಸೂತನಲ್ಲ, ಕ್ಷತ್ರಿಯ; ಪಾಂಡವರ ಹಿರಿಯ—ಎಂಬ ಮಾತುಗಳು ಅವನಿಗೆ ಸಂತೋಷವನ್ನುಂಟುಮಾಡಿರಬೇಕು, ತನ್ನನ್ನು ಮುಂದೆ ಯಾರೂ ಕುಲವೆತ್ತಿ ನುಡಿಯರು ಎಂದು. ಆದರೇನು ? ಆ ಸಂತೋಷ ಕ್ಷಣಕಾಲ ಇದ್ದು ಮಾಯವಾಯಿತು. ಎರಡು ಪಕ್ಷಗಳು ಯುದ್ಧಕ್ಕೆ ಸಿದ್ಧವಾಗಿರುವಾಗ ಇದರಿಂದ ಏನು ಸಂತೋಷ ? ತಾನು ಕುಲವನ್ನು ಹೇಳಿಕೊಳ್ಳುವಂತಿಲ್ಲ. ಮುಖ್ಯವಾಗಿ ಕರ್ಣನಿಗೆ 'ಕುರುಪತಿಗೆ ಕೇಡಾದುದು' ಎಂಬ ಭಾವನೆಯುಂಟಾಯಿತು. ಕೃಷ್ಣನ ಹಗೆ ಬೆಂಕಿ. ಕರ್ಣನ ಕುಲವೇ ಅವನಿಗೂ ಕೌರವನಿಗೂ ಮೃತ್ಯುವಾಯಿತು.

ಈಗ ಕರ್ಣನ ಮನಸ್ಸಿನಲ್ಲಿ ಪ್ರಬಲವಾದ ಹೋರಾಟಕ್ಕೆ ಮೊದಲಾಯಿತು. 'ಯುದ್ಧದಲ್ಲಿ ಪಾಂಡವರನ್ನು ಕೊಂದಾನೇ, ಅವರು ಸಹೋದರರು. ಕೊಲ್ಲದೆ ಬಿಟ್ಟಾನೆ, ಕೌರವನು ಭೂಮಿಯಲ್ಲಿ ಬದುಕುವಂತಿಲ್ಲ.' ಪರಮಾತ್ಮನೇ ಬಂದು ಚಕ್ರವರ್ತಿ ಪದವಿಯನ್ನು ಕೊಡಿಸುತ್ತೇನೆ ಎಂದಾಗ ಯಾವ ಮನುಷ್ಯನಿಗೆ ತಾನೇ ಬಾಯಲ್ಲಿ ನೀರೂರುವುದಿಲ್ಲ ? ಆದರೆ ಮಹಾತ್ಮನಾದ ಕರ್ಣನಿಗೆ ಹಾಗಾಗಲಿಲ್ಲ. ಕೃಷ್ಣ ಕರ್ಣನಿಗೆ ಚಕ್ರವರ್ತಿ ಪದವಿ, ಕುರುಪಾಂಡವರ ಸೇವೆ ಇವೇ ಮೊದಲಾದ ಆಕರ್ಷಣೆಗಳನ್ನು ಒಡ್ಡಿದ್ದನಲ್ಲವೇ? ಕರ್ಣನು ಪ್ರತಿಯಾಗಿ 'ಮರುಳು ಮಾಧವ, ಸಕಲ ರಾಜ್ಯದ ಸಿರಿಗೆ ಸೋಲುವನಲ್ಲ. ಕೌಂತೇಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ. ಕೌರವೇಶ್ವರನೊಲುಮೆ ತಪ್ಪಿಸೆ ಭುವನದೊಳಗೆನಗಾಪ್ತ ಜನವಿಲ್ಲ. ವೀರ ಕೌರವರಾಯನೇ ದಾತಾರನು. ಆತನ ಹಗೆಯೆ ಹಗೆ. ಕೈವಾರವೇ ಕೈವಾರ. ಆದುತಹೆನು ಕುರುನೃಪತಿ.' ಆದ್ದರಿಂದ 'ಕಾಡಲಾಗದು ಕೃಷ್ಣ. ಖಾತಿಯ ಮಾಡಲಾಗದು. ಬಂದೆನಾದಡೆ ರೂಢಿ ಮೆಚ್ಚದು.' ಮಹಾತ್ಮನಾದ ಕರ್ಣನು ಕೃಷ್ಣನ ಮನಸ್ಸನ್ನು ಗ್ರಹಿಸಿ 'ನಿನ್ನಯ ಧೀರ ರೈವರ ನೋಯಿಸೆನು, ರಾಜೀವ ಸಖನಾಣೆ' ಎಂದು ಭಾಷೆ ಕೊಟ್ಟನು. ಕುಂತಿ ಅವನನ್ನು ಬೇಡಿದಾಗಲೂ, ಕರ್ಣನಿಗೆ ತನ್ನ ಚಿಂತೆಗಿಂತಲೂ ಹೆಚ್ಚಾಗಿ ಸ್ವಾಮಿಯ ಚಿಂತೆ. 'ಇಂದು ನೀವಱುಹಿದಡೆ ರವಿನಂದನನೆಯೆಂದಱಿದೆನಲ್ಲದೆ ಹಿಂದೆ ದುರ್ಯೋಧನನ ದಾವುದ ನೋಡಿ ಸಲಹಿದನು' ಎಂದು ಹೇಳಿದನೇ ಹೊರತು ಪಾಂಡವರ ಪಕ್ಷವನ್ನು ಸೇರಲು ಒಪ್ಪಲಿಲ್ಲ. ಸಂಧಿಮಾಡಿಸೆಂದು ಹೇಳಿದ ಕೃಷ್ಣನ ಮಾತಿಗೆ ಕರ್ಣನು ಖಂಡಿತವಾಗಿ ಹೇಳಿದನು. 'ಈಗ ಸಂಧಿಯನುಸುರಿದಡೆ ಮನಗಾಣನೇ ಕೌರವ ಮಹೀಶ್ವರನು. ವಿಸಸನದ ಕಟ್ಟಾಳು ಮಂತ್ರವನೆಸಗಲಾಗದು. ತನ್ನ ಬೀರಕೆ ಮುಸುಳಹುದು. ಮುರವೈರಿ ಸಂಧಿಯನಱಿಯೆ ನಾನು.' ಈ ಸನ್ನಿವೇಶದಲ್ಲಿ ಕರ್ಣನ ತ್ಯಾಗ, ಮಿತ್ರಪ್ರೇಮ, ಸ್ವಾಮಿಭಕ್ತಿ, ಕರ್ತವ್ಯನಿಷ್ಠೆಗಳು ಎದ್ದು ನಿಂತು ಅವನ ವ್ಯಕ್ತಿಚಿತ್ರವನ್ನು ಸಂಪೂರ್ಣಗೊಳಿಸುತ್ತವೆ.

ಈ ಪರ್ವದಲ್ಲಿ ಬರುವ ಮಿಕ್ಕ ವ್ಯಕ್ತಿಗಳ ಪರಿಚಯವನ್ನು ಆಯಾ ಸಂದರ್ಭಗಳಿಂದ ಅರಿಯಬಹುದು.

i. ಇತರ ವಿಷಯಗಳು .

ಕೊನೆಯದಾಗಿ ಇನ್ನು ಒಂದೆರಡು ಅಂಶಗಳನ್ನು ತಿಳಿಸಿ ಈಗಾಗಲೇ ದೀರ್ಘ ವಾಗಿರುವ ಈ ವಿಮರ್ಶೆಯ ಭಾಗವನ್ನು ಮುಕ್ತಾಯಗೊಳಿಸಬಹುದು. ಈ ಪರ್ವದ ಪ್ರಧಾನವಾದ ರಸ ವೀರ. ಸಂಜಯನು ಪಾಂಡವರಿಂದ ತಂದ ಸಂದೇಶದಲ್ಲಿ, ಭೀಮನ ವೀರಾಲಾಪಗಳಲ್ಲಿ ಆ ರಸದ ಪ್ರವಾಹವನ್ನು ಕಾಣಬಹುದು. ವಿಶ್ವರೂಪ ಪ್ರದರ್ಶನ ಸಂದರ್ಭದಲ್ಲಿ ಅದ್ಭುತರಸ, ಕರ್ಣಭೇದ ಸಂದರ್ಭದಲ್ಲಿ ಕರುಣರಸ, ಕೃಷ್ಣನು ಬರುವ ಪ್ರಸಂಗಗಳಲ್ಲಿ ಸಾಮಾನ್ಯವಾಗಿ ಹಾಸ್ಯರಸ ಕಂಡುಬರುತ್ತದೆ. ಕೃಷ್ಣ ಭಕ್ತನಾದ ಕವಿ ಕೃಷ್ಣನು ಬರುವ ಸಂದರ್ಭಗಳಲ್ಲಿ ಭಕ್ತಿರಸದ ಹೊನಲನ್ನೇ ಹರಿಯಿಸಿಬಿಡುತ್ತಾನೆ.

ಈ ಸಂಗ್ರಹವನ್ನು ಓದುತ್ತಿರುವಾಗ ವಿದ್ವಾಂಸರಿಗೆ ಕಡುಮಾನ್ಯ, ಮುಜಿಮೇಘ, ಕಡುಪಾತಕಿ, ಕಡುಲೋಲುಪತೆ, ಕಮಲಗಣ್ಣು, ಕಡುವಿಲಾಸ, ದಳಪತಿ ಮುಂತಾದ ಅರಿಸಮಾಸ ಪ್ರಯೋಗಗಳೂ ದೇವತನ, ಕೃಪಣತನ, ಸಾರಥಿತನ, ಕಾಣಿಕೆ, ನಾರಾಯಣ, ನಾರಣ ಮುಂತಾದ ವ್ಯಾಕರಣ ವಿರುದ್ಧ ಪ್ರಯೋಗಗಳೂ ಕಂಡುಬರ ಬಹುದು. ಆದರೇನು? ಕುಮಾರವ್ಯಾಸನ ವಾಕ್ಪ್ರವಾಹದಲ್ಲಿ ಈ ತಪ್ಪುಗಳೆಲ್ಲ ಮಾಯ ವಾಗುತ್ತವೆ. ಅವನ ಭಾರತವನ್ನು ಓದುತ್ತಿರುವಾಗ ರಸಪ್ರವಾಹದಲ್ಲಿ ಮೈಮರೆತಿರು ವಾಗ ಪ್ರಯೋಗಗಳ ಸಾಧುತ್ವ ಅಸಾಧುತ್ವಗಳನ್ನು ಕೇಳುವವರಾರು? ಕುಮಾರವ್ಯಾಸನ ಭಾಷೆಗೆ ಅವನೇ ಪಾಣಿನಿ. ರಸದ ವಿಷಯವನ್ನು ಕುರಿತು ಆಗಲೇ ಹೇಳಿಯಾಯಿತು. ಇನ್ನು ಅಲಂಕಾರದ ವಿಷಯ. ಕುಮಾರವ್ಯಾಸನಿಗೆ ಅನುಪ್ರಾಸವೆಂದರೆ ಪಂಚಪ್ರಾಣ. ಭಾರತದ ಪ್ರತಿ ಪದ್ಯದಲ್ಲಿಯೂ ಅದು ಅನಿರೀಕ್ಷಿತವಾಗಿ ಕಂಡುಬರುವುದಲ್ಲದೆ ಎಲೆಯ ಮರೆಯ ಹೂವಿನಂತಿದ್ದು ಆಹ್ಲಾದದಾಯಕವಾಗಿರುತ್ತದೆ. ಅರ್ಥಾಲಂಕಾರಗಳಲ್ಲಿ ರೂಪಕದ ಮೇಲೆ ಕವಿಗೆ ಮಮತೆ. ನಾರಣಪ್ಪ ರೂಪಕ ಸಾಮ್ರಾಜ್ಯ ಚಕ್ರವರ್ತಿಯೆಂದು ಪ್ರಖ್ಯಾತನಾಗಿದ್ದಾನೆ. ಕವಿ ಉಪಮೆ ರೂಪಕ ಇಲ್ಲವೆ ಇನ್ನಾವ ಅಲಂಕಾರಗಳನ್ನೇ ಉಪಯೋಗಿಸಲಿ, ಅದರಲ್ಲಿ ನವೀನತೆ ಕಂಡುಬರುತ್ತದೆ. 'ಕಾರಿರುಳ ಪಟ್ಟಣಕೆ ಚಂದ್ರನ ತೋರಣವ ಬಿಗಿದಂತೆ' ಘಟೋತ್ಕಚನ ದಾಡೆಗಳಿದ್ದವಂತೆ! ದ್ರೌಪದಿ ಪಲ್ಲಕ್ಕಿಯನ್ನಿಳಿದುದು 'ಮಿಂಚಿನ ಗವಿಸಹಿತ ಮುಜಿ ಮೇಘ ಆವಿರ್ಭವಿಸಿದಂ'ತಾ ಯಿತು! ಕೃಷ್ಣನು ಕೌರವನ ಸಭೆಯಲ್ಲಿ ಮೈಮುರಿದು ನಿಂತೊಡನೆಯೇ 'ಮಿಂಚಿನ ಹೊದಜು ಹುರಿಗೊಂಡ'ಂತಾಯಿತು. ಇಲ್ಲಿ ಬರುವ ದೃಷ್ಟಾಂತಗಳೂ ಹಾಗೆಯೇ. 'ಹುಲುಸರವಿ ಹಾವಹುದು ಹುತ್ತಿನ ಬಳಿಯೊಳಿರಲು' 'ಕರಗುವುದು ಶಶಿಕಾಂತ ಚಂದ್ರನ ಕಿರಣ ತಾಗಲು' 'ವಜ್ರಹತಿಯನು ಧರಿಸಿದಲ್ಲದೆ ಗಿರಿಗಳಳುಕವು' 'ತಗರೆರಡ ಖತಿಗೊಳಿಸಿ ಬಲುಗಾಳಗವ ನೋಡುವರಂತೆ'—ಹೀಗೆಯೆ ಉದಾಹರಣೆಗಳನ್ನು ಕೊಡುತ್ತ ಹೋಗಬಹುದು. ಆದರೆ ಅದಕ್ಕೆ ತುದಿ ಮೊದಲೆಲ್ಲಿ? ದಾನ ಮಾಡಿದನು ಎಂಬುದನ್ನು 'ವರವಿಬುಧ ವೈತಾಳಿಕರ ಕಾರ್ಪಣ್ಯವಡಗಿದವು' ಎಂಬ ಮಾತು ಎಷ್ಟು ಧ್ವನಿಪೂರ್ಣವಾಗಿ ಚಿತ್ರಿಸುತ್ತದೆ! ಕೃಷ್ಣನನ್ನು ಮಗನು ಕಟ್ಟುವನೆಂದು ಕೇಳಿದಾಗ ಗಾಂಧಾರಿ 'ಹೆತ್ತೆನಗೆ ಹರುಷವ ತಂದೆ' ಎಂದು ಮುಳಿದು ತನ್ನ ಹೊಟ್ಟೆಯುರಿಯನ್ನು ತೋಡಿಕೊಂಡಳಂತೆ. ಬಂಧುಗಳ ದರ್ಶನ ಫಲವಲಾ ಸಂಸಾರ ತರುವಿಂಗೆ, ನಾವ್

ಉಂಡಾಡಿಭಟ್ಟರು, ಪರಿಣತ ಪ್ರೌಢಿಗಳಿಗಂತಃಕರಣ ನೆನೆವುದು ಇವೇ ಮೊದಲಾದ ವಾಕ್ಯಗಳು ಗಾದೆಗಳಾಗಿ ಪರಿಣಮಿಸಿವೆ.

ನಾರಣಪ್ಪನ ಉಕ್ತಿವೈಚಿತ್ರ್ಯ, ಮಾತಿನ ಗಾರುಡಿ, ಹಿತಮಿತವಾದ ವರ್ಣನೆಗಳ ಸೊಗಸು ಇವುಗಳನ್ನು ಇಲ್ಲಿ ವರ್ಣಿಸಲು ಸಾಧ್ಯವಿಲ್ಲ. ಭಾರತದ ಈ ಭಾಗವನ್ನು ಓದಿದರೆ. ಕಾವ್ಯದ ಉತ್ಕೃಷ್ಟತೆ, ಕವಿಯ ಹಿರಿಮೆ ತಾನಾಗಿಯೇ ತಿಳಿದುಬರುತ್ತದೆ. ಉದ್ಯೋಗಪರ್ವದ. ವಿಷಯದಲ್ಲಿ ಆಯೋಕ್ತಿ ಇಷ್ಟೇ ಅಲ್ಲವೇ ?—

ಭಾರತೇ ಸಾರಮುದ್ಯೋಗಃ

ಕನ್ನಡ

ಮಹಾಭಾರತ

ಉದ್ಯೋಗಪರ್ವ ಸಂಗ್ರಹ

೧. ಮಂಗಳಾಚರಣೆ

ಶ್ರೀವನಿತೆಯರಸನೆ ವಿಮಲ ರಾ
ಜೀವಪೀಠನ ಪಿತನೆ ಜಗಕತಿ
ಪಾವನನೆ ಸನಕಾದಿ ಸಜ್ಜನ ನಿಕರ ದಾತಾರ
ರಾವಣಾಸುರ ಮಥನ ಶ್ರವಣಸು
ಧಾ ವಿನೂತನ ಕಥನಕಾರಣ
ಕಾವುದಾನತ ಜನವ ಗದುಗಿನ ವೀರನಾರಯಣ ॥ ೧

ವೀರನಾರಾಯಣನೆ ಕವಿ ಲಿಪಿ
ಕಾರ ಕುವರವ್ಯಾಸ ಕೇಳುವ
ಸೂರಿಗಳು ಸನಕಾದಿಗಳು ಜಂಗಮು ಜನಾರ್ದನರು
ಚಾರುಕವಿತೆಯ ಬಳಕೆಯಲ್ಲ ವಿ
ಚಾರಿಸುವಡಳವಲ್ಲ ಚಿತ್ತವ
ಧಾರು ಹೋ ಸರ್ವಜ್ಞರಾದರು ಸಲುಗೆ ಬಿನ್ನಪವ ॥ ೨

ತಿಣಿಕಿದನು ಫಣಿರಾಯ ರಾಮಾ
ಯಣದ ಕವಿಗಳ ಭಾರದಲಿ ತಿಂ
ಥಿಣಿಯ ರಘುವರ ಚರಿತೆಯಲಿ ಕಾಲಿಡಲು ತೆಱಪಿಲ್ಲ
ಬಣಗು ಕವಿಗಳ ಲೆಕ್ಕಿಪನೆ ಸಾ
ಕೆಣಿಸದಿರು ಶುಕರೂಪನಲ್ಲದೆ
ಕುಣಿಸಿ ನಗನೇ ಕವಿ ಕುಮಾರವ್ಯಾಸನುಳಿದವರ || ೩

ಹಲಗೆ ಬಳಪವ ಪಿಡಿಯದೊಂದ
ಗ್ಗಳಿಕೆ ಪದವಿಟ್ಟಳುಪದೊಂದ
ಗ್ಗಳಿಕೆ ಪರರೊಡ್ಡವದ ರೀತಿಯ ಕೊಳ್ಳದಗ್ಗಳಿಕೆ
ಬಳಸಿ ಬರೆಯಲು ಕಂಠಪತ್ರದೊ
ಳುಲುಹುಗೆಡದಗ್ಗಳಿಕೆಯೆಂಬೀ
ಬಲುಹು ಗದುಗಿನ ವೀರನಾರಾಯಣನ ಕಿಂಕರಗೆ || ೪

ಅರಸುಗಳಿಗಿದು ವೀರ ದ್ವಿಜರಿಗೆ
ಪರಮವೇದದ ಸಾರ ಯೋಗೀ
ಶ್ವರರ ತತ್ತ್ವವಿಚಾರ ಮಂತ್ರಿಜನಕೆ ಬುದ್ಧಿಗುಣ
ವಿರಹಿಗಳ ಶೃಂಗಾರ ವಿದ್ಯಾ
ಪರಿಣತರಲಂಕಾರ ಕಾವ್ಯಕೆ
ಗುರುವೆನಲು ರಚಿಸಿದ ಕುಮಾರವ್ಯಾಸ ಭಾರತವ || ೫

ವೇದ ಪಾರಾಯಣದ ಫಲ ಗಂ
ಗಾದಿ ತೀರ್ಥಸ್ನಾನಫಲ ಕೃ
ಚ್ಛ್ರಾದಿ ತಪಸಿನ ಫಲವು ಜ್ಯೋತಿಷ್ಟೋಮಯಾಗಫಲ
ಮೇದಿನಿಯನೊಲಿದಿತ್ತ ಫಲ ವ
ಸ್ತ್ರಾದಿ ಕನ್ಯಾದಾನಫಲವಹು
ದಾದರಿಸಿ ಭಾರತದೊಳೊಂದಕ್ಷರವ ಕೇಳ್ದರಿಗೆ || ೬

೨. ಸಾರಥಿತನವ ಕೈಕೊಂಡನು

ಕೇಳು ಜನಮೇಜಯಧರಿತ್ರೀ
ಪಾಲ ಕುಂತೀತನಯರುನ್ನತ
ಡೇಳಿಗೆಯನೇನೆಂಬೆನೈ ಕಾರುಣ್ಯಸಿಂಧುವಲಾ
ಶ್ರೀಲತಾಂಗಿಯ ರಮಣನೈವರೊ
ಳಾಳೊಡೆಯರಾರೆಂಬ ಭೇದವ
ಬೀಳುಕೊಟ್ಟೀ ನಡಸುತಿರ್ದನು ತನ್ನ ಮೈದುನರ ೧

ಹೋಲಿಕೆಗೆ ಬಾಯ್ಬಿಡುವ ವೇದದ
ತಾಳಿಗೆಗಳೊಣಗಿದವು ಘನತೆಯ
ಮೇಲೆ ತನ್ನದು ಘನತೆಯೆಂಬುದನತ್ತ ಬೇಱರಿಸಿ
ಕಾಲಿಗೆಱಗುವನಾ ಯುಧಿಷ್ಠಿರ
ನೇಳಲೊಡನೇಳುವನು ಕೃಷ್ಣನ
ಲೀಲೆಯನುಪಮವೆಂದು ವೈಶಂಪಾಯಮುನಿ ನುಡಿದ || ೨

ಒಂದು ದಿನ ಒಡ್ಡೋಲಗಕ್ಕೈತ
ತಂದು ನಿಖಿಳಾವನಿಯ ರಾಯರ
ಮುಂದಿಯಲಿ ಮುರವೈರಿ ನುಡಿದನು ರಾಜಕಾರಿಯವ
ಹಿಂದೆ ಜೂಜಿನ ವಿಲಗದಲಿ ಮನ
ನೊಂದರಿವರಡವಿಯಲಿ ಧರೆಗಿ
ನ್ನೆಂದು ಸೇರುವರೇನು ಹದನೀ ಪಾಂಡುತನಯರಿಗೆ || ೩

ದೇವ ನೀನೇ ಬಲ್ಲೆ ನಿನ್ನಯ
ಭಾವನೀ ಧರ್ಮಜನ ಬಹುಮಾ
ನಾವಮಾನದ ಹೊಱಗೆ ನಿನ್ನದು ಹರಣಭರಣವನು
ನೀವು ಬಲ್ಲಿರಿ ಕಾಲಲೊದೆದುದ
ನೋವಿ ತಲೆಯಲಿ ಹೊತ್ತು ನಡಸುವ
ಡಾವು ಬಲ್ಲೆವು ಜೀಯ ಎಂದನು ದ್ರುಪದಭೂಪಾಲ || ೪

ಕಳುಹುವುದು ಶಿಷ್ಟರನು ಧರಣೀ
ತಳವ ಬೇಡಿಸುವಲ್ಲಿ ಸಾಮವ
ಬಳಸುವುದು ಭೀಷ್ಮಾದಿಗಳಿಗಟ್ಟುವುದು ವಿನಯದಲಿ
ತಿಳಿವುದಾತನ ನೆಲೆಯನಲ್ಲಿಂ
ಬಳಿಕ ನಯವಿಲ್ಲೆಂದಡಾಹವ
ದೊಳಗೆ ಕೈದೋಱುವುದು ಮತವೆಂದನು ಮುರಧ್ವಂಸಿ ॥ ೫

ಮದುವೆಗೋಸುಗ ಬಂದೆವಾವಿಂ
ದಿದಱ ಮೇಲಣ ರಾಜಕಾರ್ಯದ
ಹದನನಱುಪುವುದಟ್ಟಿದಡೆ ಬಹೆವಾವು ವಹಿಲದಲಿ
ಹದುಳವಿಹುದೆಂದಸುರರಿಪು ಕರು
ಣದಲಿ ಕುಂತೀಸುತರನಾ ದ್ರೌ
ಪದಿಯನಭಿಮನ್ಯುವ ಸುಭದ್ರೆಯ ಹರಸಿ ಬೀಳ್ಕೊಂಡ ॥ ೬

ಕೂಡಿಕೊಂಡಿಹುದಿವರು ಮಕ್ಕಳು
ನೋಡಲಾಗದು ಹೆಚ್ಚುಕುಂದನು
ನಾಡ ಬೇಡಲು ಬುದ್ಧಿವಂತರನಲ್ಲಿಗಟ್ಟುವುದು
ಕೂಡೆ ಸೋದಿಸಿ ಸೆಜ್ಜೆಯಲಿ ವ್ಯೆ
ಗೂಡಿ ಆರೋಗಣೆಗಳಲಿ ಮನ
ಗೂಡಿ ಬೆರಸಿಹುದೆಂದು ದ್ರುಪದ ವಿರಾಟರಿಗೆ ನುಡಿದ ॥ ೭

ಎಂದು ಕಳುಹಿಸಿಕೊಂಡು ನಾರೀ
ವೃಂದ ಯದುಬಲಸಹಿತ ದೇವ ಮು
ಕುಂದ ಬಿಜಯಂಗೈದನತ್ತಲು ದ್ವಾರಕಾಪುರಿಗೆ
ಒಂದುದಿನವಾಲೋಚನೆಯ ನೆಲೆ
ಯಿಂದ ಕರೆದು ಪುರೋಹಿತನ ನಲ
ವಿಂದ ಕಳುಹಿದ ದ್ರುಪದನಾ ಕೌರವನ ಪಟ್ಟಣಕೆ ॥ ೮

ಓಲೆಯುಡುಗೊರೆಸಹಿತ ಧರಣೀ
ಪಾಲರಿಗೆ ಪಾಂಡವರ ಶಿಷ್ಟರು
ಕಾಳಗಕೆ ಬಲವಾಗಲೋಸುಗ ಕರೆದರಲ್ಲಲ್ಲಿ

ಆಳುಕುದುರೆಯು ನೆರಹಿ ಬಂದರು
ಮೂಲೆಯರಸುಗಳೆಲ್ಲ ಕುರುಭೂ
ಪಾಲನಲ್ಲಿಗೆ ಕೆಲರು ಕೆಲಬರು ಪಾಂಡುತನಯರಿಗೆ ॥ ೯

ಧರಣಿಯೆಡೆಗಿಡೆ ರಾಯಮೋಹರ
ತೆರಳಿತಿಬ್ಬರು ರಾಯರಿಗೆ ಕೈ
ನೆರವ ತೋಱಲು ಕವಿದು ಬಂದುದು ಕಾಣೆನಳತೆಗಳ
ಅರಿಗಳತಿಹೆಚ್ಚಿದರು ವೈಮಱಿ
ದಿರಲು ಮಹಿಮೆಗಮಾನ್ಯವಹುದಿ
ನ್ನರವಣಿಸಬೇಕೆಂದು ದುರ್ಯೋಧನನು ಚಿಂತಿಸಿದ ॥ ೧೦

ಹದನನಾಪ್ತರಿಗಱುಹಿದನು ಗುಪಿ
ತದಲಿ ಕೃಷ್ಣನನೊಳಗುಮಾಡುವ
ಮುದದಿ ಕೌರವರಾಯ ಬಂದನು ದ್ವಾರಕಾಪುರಿಗೆ
ಇದನು ಭೇದಿಸಿ ಬೇಹಿನವರಱು
ಹಿದರು ಕುಂತೀಸುತರಿಗತಿ ವೇ
ಗದಲಿ ಧರ್ಮಜನಳುಕಿ ಕಳುಹಿದನಿಂದ್ರನಂದನನ ॥ ೧೧

ಬೀಳುಕೊಂಡರ್ಜುನನು ಲಕ್ಷ್ಮೀ
ಲೋಲನಲ್ಲಿಗೆ ಬರುತ ಕಂಡನು
ಲೀಲೆಯಲಿ ನರ್ತಿಸುವ ನವಿಲನು ಬಲದೊಳಡಹಾಯ್ದು
ಮೇಲೆ ಹಂಗನ ಬಲವ ಹರಿಣೀ
ಜಾಲದೆಡನನು ತಿದ್ದುವಲ್ಲಿ ವಿ
ಶಾಲಶಕುನವನಾಲಿಸುತ [ದೋರಕಿಗೆ] ನಡೆತಂದ ॥ ೧೨

ಅಟ್ಟೆ ಬಳಲಿದ ಶ್ರುತಿಗೆ ಹರಿ ವೈ
ಗೊಟ್ಟ ಠಾವಿದು ತಾಪಸರು ಜಪ
ಗುಟ್ಟೆ ಜಿನುಗಿದಡವರನುಜ್ಜೀವಿಸಿದ ತಾಣವಿದು
ಹುಟ್ಟುಸಾವಿನ ವಿಲಗ ಜೀವರ
ಬಿಟ್ಟ ಠಾವಿದು ಕಾಲಕರ್ಮದ
ಘಟ್ಟು ಮುಱಿನಡೆದೋಡಿಡೆಡೆಯಿದು ಶಿವ ಶಿವಾ ಎಂದ ॥ ೧೩

ಹೊಗಳುತರ್ಜುನನಸುರರಿಪುವಿನ
ನಗರಿಗೈತಂದರಮನೆಗೆ ಬರ
ಲಗಧರನು ಮಂಚದಲಿ ನಿದ್ರಾಂಗನೆಯ ಕೇಳಿಯಲಿ
ಸೊಗಸು ಮಿಗಲರೆದೆಱೆದ ಲೋಚನ
ಯುಗಳ ಸಮತಳಿಸಿದ ಸುಷುಪ್ತಿಯ
ಬಿಗುಹಿನಲಿ ಪರಮಾತ್ಮನೆಸೆದನು ಭ್ರಾಂತಿಯೋಗದಲಿ ॥ ೧೪

ಮುಕುಳಕರಪುಟನಾಗಿ ಭಯಭರ
ಚಕಿತಚಿತ್ತಶರೀರನಬುಜಾಂ
ಬಕನನೆಬ್ಬಿಸಲಮ್ಮದೊಯ್ಯನೆ ಚರಣಸೀಮೆಯಲಿ
ಅಕುಟಿಲನು ಸಾರಿದನು ಬಳಿಕಾ
ವಿಕಳ ದುರ್ಯೋಧನನು ನಿಗಮ
ಪ್ರಕರ ಮೌಳಿಯ ಮೌಳಿಯತ್ತಲು ಸಾರ್ದು ಮಂಡಿಸಿದ ॥ ೧೫

ಇರಲು ನಿಮಿಷದೊಳಸುರರಿಪು ಮೈ
ಮುರಿದನುಪ್ಪವಡಿಸಿದನಿದಿರಲಿ
ಸುರಪತಿಯ ಸೂನುವನು ಕಂಡನು ನಗೆಯ ಮೊಳೆ ಮಿನುಗೆ
ತಿರುಗಿ ನೋಡುತ ತಲೆಯ ದೆಸೆಯಲಿ
ಕುರುಕುಲೇಶ್ವರನತಿ ವಿಕಾರತೆ
ಯಿರವ ಕಂಡನಿದೇನಿದೇನೆಂದಸುರರಿಪು ನುಡಿದ ॥ ೧೬

ವೀಳೆಯವ ತಾ ಕೊಂಡು ಕುರುಭೂ
ಪಾಲ ಪಾರ್ಥರಿಗಿತ್ತು ಲಕ್ಷ್ಮೀ
ಲೋಲ ನುಡಿಸಿದನುಭಯರಾಯರಿಗಿತ್ತ ಬರವೇನು
ಹೇಳಿರೈ ಬರವಘಟಿತವಲಾ
ಮೇಳವೇ ಕಡುಮಾನ್ಯರೆಮ್ಮಾ
ಯಾಲಯಕೆ ಬರವೇನೆನಲು ಕುರುರಾಯನಿಂತೆಂದ ॥ ೧೭

ಯಾದವರು ಕೌರವರೊಳುಂಟೇ
ಭೇದವಾವೈತಂದರೆಮ್ಮೊಳ
ಗಾದ ಲಾಘವವೇನು ನಿಮ್ಮವೊಲಾರು ಸಖರೆನುಗೆ

ಶ್ರೀಸಂತ

ಸೋದರರ ಮನ ಕದಡಿದವು ದಾ
ಯಾದವಿಷಯದಲಿನ್ನು ಧರಣಿಗೆ
ಕಾದುವೆವು ನೀವಿಬ್ಬರಿಗೆ ಬಲವಾಗಬೇಕೆಂದ ॥ ೧೮

ಕೌರವೇಶ್ವರ ಕೇಳು ಧರಣೀ
ನಾರಿ ಯಾರೊಡನೊಕ್ಕತನವಿ
ದ್ದಾರ ಮೆಚ್ಚಿದಳಾರ ಸಂಗಡವುರಿಯ ಹಾಯಿದಳು
ಭೂರಿಮಮಕಾರದಲಿ ನೃಪರು ವಿ
ಚಾರಿಸದೆ ಧರೆ ತಮ್ಮದೆಂದೇ
ನಾರಕದ ಸಾಮ್ರಾಜ್ಯಕೈದುವರೆಂದು ಹರಿ ನುಡಿದ ॥ ೧೯

ನಾಡಿಗೋಸುಗ ಸೋದರರು ಹೊ
ಯ್ದಾಡಿ ಹಜಿಹಂಚಾದರೆಂಬುದ
ನಾಡದಿಹುದೇ ಲೋಕ ಕಮಲಜನುಸಿರಿಹನ್ನೆಬರ
ಬೇಡ ಖತಿ ನಿಮ್ಮೊಳಗೆ ನೀವ್ ಕೈ
ಗೂಡಿ ಬದುಕುವುದೊಳ್ಳಿತಾವ್ ನೆಱೆ
ನೋಡಿ ಸಂತಸಬಡುವೆನೆಂದನು ದಾನವಧ್ವಂಸಿ ॥ ೨೦

ತಗರೆರಡ ಖತಿಗೊಳಿಸಿ ಬಲುಗಾ
ಳಗವ ನೋಡುವರಂತೆ ನಿಮ್ಮನು
ತೆಗೆತೆಗೆದು ಕಲಿಮಾಡಿ ಬಿಡುವರು ಖುಲ್ಲರಾದವರು
ನಗುತ ಹೆಱೆಹಿಂಗುವರು ಹಿಸುಣರು
ಜಗುಳ್ಪರವದಿರು ಬಳಿಕ ಕಡೆಯಲಿ
ಹೊಗುವಿರೈ ನೀವಿಬ್ಬರಪಕೀರಿತಿಯ ಹಾದರಕೆ ೨೧

ಅವಧರಿಸು ಮುರವೈರಿ ಧರ್ಮ
ಶ್ರವಣಕೋಸುಗ ಬಾರೆವಾವ್ ಪಾ
ರ್ಥಿವರ ಪಂಥದ ಕದನವಿದ್ಯಾಕಾಮುವೆಮಗಾಯ್ತು
ನಿಮಗೆ ನಾವಿತ್ತಂಡ ಸರಿ ಪಾಂ
ಡವರಿಗೆಯು ಮನದೊಲವಿನಲಿ ಕೌ
ರವರಿಗೆಯು ಬಲವಾಗಬೇಕೆಂದನು ಸುಯೋಧನನು ॥ ೨೨

ಎನಲು ತಂಬುಲ ಸೂಸೆ ನಗುತ
ರ್ಜುನನ ನೋಡಿದನಸುರರಿಪು ನಿ
ನ್ನನುವ ಹೇಳೈ ಪಾರ್ಥಯೆನೆ ತಲೆವಾಗಿ ಕೈಮುಗಿದು
ಎನಗೆ ಮತ ಬೇಱಿಕೇನು ದುರ್ಯೋ
ಧನನ ಮತವೇ ತನ್ನ ಮತ ನಿ
ಮ್ಮನುನಯವೆ ನಯವೆನ್ನೊಳೀ ಸ್ವಾತಂತ್ರ್ಯವಿಲ್ಲೆಂದ ॥ ೨೩

ಆದಡಾವಿಹೆವೊಂದು ಕಡೆಯಲಿ
ಕಾದುನವರಾವಲ್ಲ ಬಲನಾ
ಯಾದವರು ಕೃತವರ್ಮ ನಾರಾಯಣ ಮಹಾಸೇನೆ
ಕಾದುನವರಿವರೊಂದು ದೆಸೆ ಎರ
ಡಾದುದಿದರಲಿ ಮೆಚ್ಚಿದುದ ನೀ
ನಾದರಿಸಿ ವರಿಸೆಂದು ಪಾರ್ಥಂಗಸುರರಿಪು ನುಡಿದ ॥ ೨೪

ಮುರಮಥನ ಬಿನ್ನಹವು ಕೌರವ
ರರಸನತಿಸಿರಿವಂತನಿದ ಸಂ
ತರಿಸಲಾಪನು ಬಹುಳ ಯಾದವ ಸೈನ್ಯಸಾಗರವ
ಧರೆಯ ಸಂಪದವಿಲ್ಲದಡವಿಯ
ತಿರುಕರಾವೆಮಗಿನಿಬರನು ಸಂ
ತರಿಸಲಪ್ಪುದೆ ಕೃಷ್ಣ ನೀನೇ ಸಾಕು ನಮಗೆಂದ ॥ ೨೫

ನಾವು ಬಡವರು ಬಡವರಿಗೆ ದಿಟ
ನೀವು ಬೆಂಬಲವೆಂಬ ಬಿರುದನು
ದೇವ ಕೇಳಿದು ಬಲ್ಲೆನೆಂದನು ಪಾರ್ಥ ಕೈಮುಗಿದು
ನೀವು ಸುಖದಲಿ ಪಾಂಡವರನು
ಜ್ಜೀವಿಸುವುದೆಮಗುಳಿದ ಯದುಭೂ
ಪಾವಳಿಯ ಕೃಪೆಮಾಡಿಯೆಂದನು ಕೌರವರ ರಾಯ ॥ ೨೬

ಮಱಿಯ ಮಾತುಗಳೇಕೆ ಪಾಂಡವ
ರೆಱಕ ನಿಮ್ಮಲಿ ಹಿರಿದು ಪಾರ್ಥಗೆ
ಮಱುಗುವಿರಿ ಹಿರಿದಾಗಿ ಮನಮೆಚ್ಚುಂಟು ನಿಮ್ಮೊಳಗೆ

ಉಱುವ ಕಾರ್ಯಕೆ ಕಡೆಯಲಾವೇ
ಹೊಱಗು ಸಾಕಂತಿರಲಿ ನೀವ್ ಹೊ
ಕ್ಕಿಱಿಯಲಾಗದು ಮತ್ತೆಯಿದನೇ ಬೇಡಿಕೊಳ್ಳುವೆನು ॥ ೨೭

ಹಸುಳೆತನ ಮೊದಲಾಗಿ ಬಲು ರ
ಕ್ಕಸರೊಡನೆ ತಲೆಯೊತ್ತಿ ರಣದಾ
ಯಸವ ಸೈರಿಸಿ ಹೊಯ್ದು ಕೊಂದೆವು ಕೋಟಿ ದಾನವರ
ಮಿಸುಕಲಾಱೆವು ಚಕ್ರ ಭಂಡಾ
ರಿಸಿತು ಮುನ್ನಿನ ಜವ್ವನದ ಬಲ
ಮುಸುಳಿತಾವುಂಡಾಡಿಭಟ್ಟರು ನೃಪತಿ ಕೇಳೆಂದ ॥ ೨೮

ಎನಲು ಬಲು ಲೇಸೆಂದು ಕೌರವ
ಜನಪ ಕಳುಹಿಸಿಕೊಂಡು ಬಲರಾ
ಮನನು ಕೃತವರ್ಮನನು ಕಂಡನು ನಿಖಿಳಯಾದವರ
ಇನಿತು ಬಲಸಹಿತೊಲವಿನಲಿ ಹ
ಸ್ತಿನಪುರಕೆ ಹಾಯಿದನು ಬಳಿಕೀ
ದನುಜರಿಪು ನಸುನಗುತಲಿಂತೆಂದನು ಧನಂಜಯಗೆ ॥ ೨೯

ಸುರಗಿಯನು ಬಿಸುಟೋಱೆಯನಂಗೀ
ಕರಿಸಿದವೊಲಾಹವದ ಧುರ
ಧುರದ ಯಾದವಬಲವನೊಲ್ಲದೆ ಮಂದಮತಿಯಾಗಿ
ಮರುಳೆ ಕಾದದ ಕಟ್ಟಿದೆನ್ನನು
ಬಱಿದೆ ಬಯಸಿದೆ ಇದನು ಕೇಳ್ದಡೆ
ಮರುಳುಗುಟ್ಟದೆ ಮಾಣರೇ ನಿನ್ನಗ್ರಜಾನುಜರು ॥ ೩೦

ಎನಲು ಗಹಗಹಿಸಿದನಿದಾರಿಗೆ
ಮನವ ಕದ್ದಾಡುವಿರಿ ನಿಜ ಶಿ
ಷ್ಯನಲಿ ನೋಟಕದಿಂದ್ರಜಾಲವೆ
ಎನಗೆ ಶ್ರಮವುಂಟದು ನಿಲಲಿಯೆ
ನ್ನನುಜನಗ್ರಜರಱಿಯರೇ ನಿ
ಮ್ಮನುಪಮಿತಮಹಿಮಾವಲಂಬನ ... ಪಾರ್ಥ ॥ ೩೧

ನಾವು ಬಜಾಗ್ಸೆಯುವರು ಬರಲೆನು
ಗಾವುದಲ್ಲಿಯು ಕೆಲಸವುಂಡುಂ
ಡಾವು ಕುಳ್ಳಿಹರಲ್ಲ ಹಂಗಾಗಿರೆವು ಕಟಕದಲಿ
ದ್ದೇವರೆಂಪೇ ನೀವು ಬಗೆವಿರಿ
ದೇವತನವೆಮಗಿಲ್ಲವೆಂಬುದ
ನಾವು ಬಲ್ಲೆವು ಬಂದು ಮಾಡುವುದೇನು ಹೇಳೆಂದ || ೨೨

ದೇವ ಮಾತ್ರವೆ ನೀವು ದೇವರ
ದೇವರೊಡೆಯರು ಹೊಗುಳವಡೆ ವೇ
ದಾವಳಿಗಳಳವಲ್ಲ ಸಾಕಾ ಮಾತದಂತಿರಲಿ
ನಾವು ಭಕ್ತರು ಭಕ್ತಭೃತ್ಯರು
ನೀವು ಸಾರಥಿಯಾಗಿ ನಮ್ಮನು
ಕಾವುದೆಂದರ್ಜುನನು ಹಣೆ ಚಾಚಿದನು ಹರಿಪದಕೆ || ೨೩

ಎನಲು ನಗುತೆತ್ತಿದನು ಸಾರಥಿ
ತನವ ಕೈಕೊಂಡನು ಕೃಪಾಳುವಿ
ನನುನಯುವ ನಾವೆತ್ತ ಬಲ್ಲೆವು ಭೃತ್ಯವರ್ಗದಲಿ
ತನಗಹಂಕೃತಿಯಿಲ್ಲ ವೈರೋ
ಚನಿಯ ಪಡಿಹಾಜಾಕೆ ಕಿರೀಟಿಯ
ಮನೆಯ ಬಂಡಿಯು ಬೋವತನವೆಲೆ ನೃಪತಿ ಕೇಳೆಂದ || ೨೪

೩. ಮಗುಳಳುಪಿದರೆ ರಾಜ್ಯದ ಪದವಿಗನುಚಿತವಾಯ್ತು

ಎಲೆ ಪರೀಕ್ಷಿತತನಯ ಕೇಳು
ವ್ವಳಿಸಿದನು ಯಮಸೂನು ಮುರರಿಪು
ಫಲುಗುಣಗೆ ವೈಗೊಡುವನೋ ಕೌರವನಿಗೊಳಗಹನೊ
ತಿಳಿಯಲಜಾದೆನುತಿರಲು ಬಲಗ
ಣ್ಣಲುಗಿತಿದಿರಲಿ ಕೈಯ ಗುಡಿಯಲಿ
ಸುಳಿದನೊಬ್ಬನು ಬಹಳ ಮಾರ್ಗಶ್ರಮದ ಭಾರದಲಿ ||

ಇದಿರುಗೊಳ್ಳೇಳರಸ ನಡೆ ಕಟ
ಕದಲಿ ಕಟ್ಟಿಸು ಗುಡಿಯನಹಿತರ
ಸದೆದೆ ಹೋಗಿನ್ನೇನು ಸರಿಯೇ ನಿನಗೆ ಸುರಗಿರರು
ಪದವನಱಿಸಿದಡಾಳಿಗೊಂಡನು
ಸದಮಲಶ್ರುತಿತತಿಯನೆಂಬ
ಗ್ಗದ ಮಹಾ ಪರದೈವ ಬಿಜಯಂಗೈದನೇಳೆಂದ ॥ ೨

ಕಥೆಗೆ ನಿನ್ನೊಡಹುಟ್ಟಿದನ ಸಾ
ರಥಿತನವ ಕೈಕೊಂಡನಿನ್ನೀ
ಪೃಥಿವಿ ನಿನ್ನಯ ರಾಣಿವಾಸವು ಚಿಂತೆ ಬೇಡಿದಕೆ
ವ್ಯಥಿತವಾಯಿತು ವೈರಿಬಲ ಸಂ
ಪ್ರಥಿತಸಾಹಸನಾದೆ ನೀನೆನೆ
ಶಿಥಿಲಸಂಶಯನಂಗಚಿತ್ರವನಿತ್ತನಾತಂಗೆ ॥ ೩

ಉಕ್ಕಿ ವಿಸಟಂಬರಿವ ಹರುಷದ
ತೆಕ್ಕೆಯಲಿ ಕೈಗೊಡುವ ನೃಪಜನ
ವಿಕ್ಕಲಿಸೆ ಹೊಱವಂಟನರಸನು ಸಕಲ ದಳಸಹಿತ
ಮಿಕ್ಕು ಬರೆ ಬರೆ ಕೃಷ್ಣನನು ಕಂ
ಡೊಕ್ಕನೊಡಲನು ಚರಣದಲಿ ಸಾ
ಕಕ್ಕಜವಿದೇನೆನುತ ಹರಿ ನೆಗಹಿದನು ಧರ್ಮಜನ ॥ ೪

ಪರಕೆ ಪರತರವಸ್ತುವನು ಗೋ
ಚರಿಸಿದೆವಲ್ಲೈ ಮುನಿಜನಂಗಳ
ವರಸಮಾಧಿಗೆ ಸಮಯವಿಲ್ಲದ ದೇವನೆಮಗೊಲಿದೈ
ಕರುಣಿ ಬಿಜಯಂಗೈದೆಯೆನೆ ಮುರ
ಹರನು ನಗುತಿಂತೆಂದ ನಾವೀ
ನರನ ಸಾರಥಿಯಲ್ಲದೆಲ್ಲಿಯ ವಸ್ತು ಹೇಳೆಂದ ॥ ೫

ಬಯಲಿಗೆನ್ನನು ನಾಚಿಸದೆ ಪಾ
ಳೆಯಕೆ ನಡೆಯೆಂದಸುರರಿಪು ಸೇ
ನೆಯನು ಕೈವೀಸಿದನು ಬಂದನು ರಾಜಮಂದಿರಕೆ

ನಿಯತವಿತ್ತಲು ಕೇಳು ಜನವೋ
ಜಯಮಹೀಪತಿ ಧರ್ಮಸುತನೋ
ಲೆಯ ಹದನನಱಿದಂತೆ ಶಲ್ಯನೃಪಾಲ ಹೊಱವಂಟ ॥ ೬

ಮೇಳವಿಸಿ ಹೊಱವಂಟನಗಣಿತ
ದಾಳು ಕುದುರೆಯು ಕೂಡಿ ಬರುತಿರೆ
ಕೇಳಿದನು ಕುರುರಾಯನಾ ಮದ್ರಾಧಿಪನ ಬರವ
ಆಳೊಳಗ್ಗಳನದಟ ಶಲ್ಯನೃ
ಪಾಲಕನ ತಿರುಹಿದರೆ ಗೆಲುವುದು
ಕಾಳಗವು ತನಗೆಂದು ನಿಶ್ಚೈಸಿದನು ಮನದೊಳಗೆ ॥ ೭

ಎಂದಖಿಳವಸ್ತುಗಳ ಜೋಡಿಸಿ
ಬಂದು ಪಾಳೆಯ ಬಿಡುವ ಠಾವಿನೊ
ಳಂದ ವಿಗೆ ಮಾಡಿಸಿದ ಗುಡಿ ಮಂಡವಿಗೆ ಚೌಕಿಗೆಯ
ಒಂದು ಯೋಜನದಗಲದಲಿ ಹಯ
ವೃಂದ ಗಜಶಾಲೆಗಳ ಪರುಠವ
ದಿಂದ ರಚಿಸಿದ ಕೊಳ ಬಾಣಸವಖಿಳ ಮೋಹರಕೆ ॥ ೮

ಬಂದು ಬಿಡುವನ್ನೆಬರ ಮುನ್ನಿನ
ಮಂದಿರವ ಹೊಗುವಂತೆ ಶಲ್ಯನ
ಮಂದಿ ಸಂತೋಷದ ಸಮುದ್ರದಿ ಮೂಡಿ ಮುಳುಗಾಡಿ
ಮುಂದೆ ನಡೆಯಲು ಮತ್ತೆ ಮುನ್ನಿನ
ಚಂದದಲಿ ಮನೆಮನೆಗಳನು ನಲ
ವಿಂದ ರಚಿಸಿದನ್ಯೆದೆ ಕುರುಪತಿ ಪಯಣ ಪಯಣದಲಿ ॥ ೯

ಆರು ನಯದಲಿ ನಮ್ಮಖಿಳ ದಳ
ಭಾರವನು ಸಂತೈಸಿದವ ಕುರು
ವೀರನೋ ಯಮನಂದನನೊ ಹಿರಿದಾಗಿ ಮೆಚ್ಚಿದೆನು
ಆರು ಮಾಡಿಸಿದವರು ಬಂದರೆ
ಹಾರಲೇಕೆನ್ನೊಡಲ ತೆಱುವೆನು
ಧೀರ ನೈದೋಱಲಿಯೆನುತ ಹೊಯ್ಸಿದನು ಡಂಗುರವ ॥ ೧೦

ನಗುತ ಕೌರವರಾಯನವನೋ
ಲಗಕೆ ಬರಲಿದಿರೆದ್ದು ಮುದದಲಿ
ತೆಗೆದು ಬಿಗಿಯಪ್ಪಿದನು ಕುಶಲವನ್ನೆದೆ ವಿಸ್ತರಿಸಿ
ಮಗನೆ ನೀನೇ ರಚಿಸಿದಾತನು
ಬಗೆದಣಿಯೆ ಬೇಡುವುದು ತಾ ಹಂ
ಗಿಗನು ನಿನಗೆನೆ ಮಾವ ಬಿನ್ನಹ ಮರಳಿ ನೀವೆಂದ ॥ ೧೧

ಎನಗೆ ಬೆಂಬಲವಾಗಿ ಕುಂತೀ
ತನಯರನು ಬಿಡಿ ಮರಳಿ ನೀವ್ ಹ
ಸ್ತಿನಪುರಿಗೆ ನೀವಿತ್ತ ವರವೆನೆ ಶಲ್ಯ ಮನವಳುಕಿ
ತನುಜ ಕೈಕೊಂಡೆನು ಯುಧಿಷ್ಠಿರ
ಜನಪನಳಿಯನು ನೀನು ಲೋಗನೆ
ಎನಗೆ ನೀವಿತ್ತುಂಡ ಸರಿ ನಿಮ್ಮತ್ತ ಬಹೆನೆಂದ ॥ ೧೨

ಅಗಲಿದೆನು ಹಲಕಾಲವೈವರ
ಮೊಗವನೀಕ್ಷಿಸಿ ಮರಳುವೆನು ಬಂ
ಧುಗಳ ದರುಶನ ಫಲವಲಾ ಸಂಸಾರತರುವಿಂಗೆ
ಮಗನೆ ಸೇನೆಯ ಕೊಂಡು ವಾರಣ
ನಗರಿಗೈದುವುದೆಂದು ಭೂಪನ
ಮಗುಳಿಚಿದನಾ ಶಲ್ಯ ಬಂದನು ಪಾಂಡವರ ಹೊರೆಗೆ ॥ ೧೩

ಇದಿರುಗೊಂಡರು ಕಾಣಿಕೆಯನಿ
ಕ್ಕಿದರು ತೆಗೆದಪ್ಪಿದರು ಹಲಕಾ
ಲದಲಿ ಹೂಳಿದ ಹರುಷವನು ಕೈಗಾಗುಮಾಡಿದರು
ಮುದದಿನೆಲ್ಲರ ಕುಶಲವನು ಕೇ
ಳಿದನು ದುರ್ಯೋಧನಗೆ ಸಿಲುಕಿದ
ಹದನನೆಲ್ಲವ ಹೇಳಿದನು ನಿರ್ವಿಣ್ಣಮನನಾಗಿ ॥ ೧೪

ಆದಡೇನೆಲೆ ಕಂದ ತಪ್ಪದು
ಮೇದಿನಿಯ ಸಿರಿ ನಿಮಗೆ ಸತ್ಯವ
ಕಾದು ಹದಿಮೂಱಬುದ ಸನೆದಿರಿ ಮುಂದೆ ಲೇಸಹುದು

ಕಾದಿ ವೃತ್ರಾಸುರನ ಮುಱಿದಪ
ವಾದದಲಿ ಸಿರಿ ಹೋಗಿ ದುಃಖಿತ
ನಾದನಿಂದ್ರನು ಮತ್ತೆ ಬದುಕಿದ ಶಚಿಯು ದೆಸೆಯಿಂದ ॥ ೧೫

ಆದಡಾ ಕರ್ಣಂಗೆ ಸಾರಥಿ
ಯಾದಿರಾದಡೆ ಸಮರಮುಖದಲಿ
ವಾದತೇಜೋವಧೆಯ ಮಾಡುವುದವನನವಗಡಿಸಿ
ಕಾದುಕೊಡುವುದು ನಾವು ಗೆಲುವವೊ
ಲಾದರಿಸುವುದು ನಮ್ಮನೆಂದಾ
ಮೇದಿನೀಪತಿ ಶಲ್ಯನನು ಕಳುಹಿದನು ಸತ್ಕರಿಸಿ ॥ ೧೬

ಬೀಳುಕೊಂಡನು ಶಲ್ಯನಿತ್ತಲು
ಹೇಳುವರ ಮನ ಮುರಿಯೆ ನೋಟಕ
ರಾಲಿ ರೈೊಪ್ಪಿಡೆ ಕಾದುವರ ಮನ ಮೂಱು ಕವಲಾಗೆ
ಜಾಳಿಗೆಯ ಹೊಗರಲಗಿನುರಿಯು ಭ
ಡಾಳ ನಭದಲಿ ಝುಗಝುಗಿಸೆ ಹೇ
ರಾಳದಾಳ್ಕುದುರೆಯಲಿ ಬರುತಿರ್ದುದು ನೃಪಸ್ತೋಮ ॥ ೧೭

ದ್ರುಪದರಾಜಪುರೋಹಿತನು ಕುರು
ನೃಪನನಿತ್ತಲು ಬಂದು ಕಂಡನು
ವಿಪುಳಮತಿ ಮಾತಾಡಿದನು ನಿಜ ರಾಜಕಾರಿಯವ
ಕೃಪಣತನದಲಿ ಕೌರವನು ಗುರು
ಕೃಪರ ಭೀಷ್ಮರ ಮಾತನೊಲ್ಲದೆ
ಚಪಲ ಕರ್ಣನ ಕೂಡೆ ನಿಶ್ಚೈಸಿದನು ಕಾಳಗವ ॥ ೧೮

ಹರುಷದಲಿ ಸಂಜಯನನಾಗಳೆ
ಕರೆದು ಕುರುಪತಿ ಬುದ್ಧಿಗಲಿಸಿದ
ನರಿನೃಪನ ಪಾಳೆಯಕೆ ಹೋಹುದು ನುಡಿವುದವಗಡಿಸಿ
ಧರೆಯ ಬೇಡಿಸಿ ಕಳುಹಿದಿರಿ ಸಂ
ಗರದೊಳಸಿಧಾರೆಯಲಿ ಕೊಡುವೆವು
ಬಱಿದೆ ಕೊಟ್ಟಡಧರ್ಮವೆಂಬುದು ಧರ್ಮತನಯಂಗೆ ॥ ೧೯

ಬೀಳುಕೊಂಡನು ಮಂತ್ರಿ ಪಯಣದ
ಮೇಲೆ ಪಯಣದಲೈದಿ ಪಾಂಡುನೃ
ಪಾಲಕರ ಪಾಳೆಯಕೆ ಬಂದನು ರಾಯುಗಜಿಹಿದನು
ಕೇಳಿ ಬೀಡಾರವನು ಬೀಯವ
ಹೇಳಿಸಿದನಾ ಮಱುದಿವಸ ಒ
ಡ್ಡೋಲಗವ ರಚಿಸಿದನು ಕುಂತೀಸೂನು ಶೀವಿಯಲಿ || ೨೦

ಹರಿ ವಿರಾಟ ದ್ರುಪದ ಕೈಕಯ
ರಿರಲು ಬಲವಂಕದಲಿ ವಾಮದ
ಲಿರೆ ವೃಕೋದರ ಫಲುಗುಣಾದಿಗಳಖಿಳಮಂತ್ರಿಗಳು
ತರುಣಿಯರು ಪರಿಮಳದ ಜಂಗವು
ಭರಣಿಯರು ಮನ್ಮಥವಿರಂಚಿನ
ತರುಣಿಯರು ಕುಳಿರ್ದರರಸನ ಹಿಂದೆ ಸಂದಣಿಸಿ || ೨೧

ಸಾಲುಮುಕುಟದ ರತ್ನರಶ್ಮಿಯ
ದಾಳಿ ಗೆಲಿದುದು ತಮವನಿನ್ನೀ
ಮೇಲು ತೆಕ್ಕೆಯ ತರಣಿತೇಜದ ಪ್ರಭೆಯ ಹಂಗೇಕೆ
ಮೇಲೆ ಕೈದೀವಿಗೆಗಳಧಿಕ
ಜ್ವಾಲೆಯದು ಪುನರುಕ್ತವೆನೆ ಭೂ
ಪಾಲನೋಲಗವೆಸೆದುದಿಂದ್ರನ ಸಭೆಗೆ ವೆಗ್ಗಳಿಸಿ || ೨೨

ಕಳಕಳವೆ ಫಡ ಮಾಣು ಮಾಣೆಂ
ದುಲಿಯೆ ಕಂಚುಕಿನಿಕರವಂಗೈ
ತಳದ ಬಾಯಲಿ ರಾಯರಿದ್ದರು ಮಣಿದ ಮಕುಟದಲಿ
ನಳಿನನಾಭನು ನಗುತ ಪರಮಂ
ಡಲದ ಶಿಷ್ಟನು ಬರಲಿಯೆನೆ ಬಾ
ಗಿಲಲಿ ಕೈದುವ ಕೊಂಡು ಹೊಗಿಸಿದರಂದು ಸಂಜಯನ || ೨೩

ಬಂದು ಕಾಣಿಕೆಗೊಟ್ಟು ಹರುಷದ
ಲಂದು ನೈಯಿಕ್ಕಿದನು ಭಯದಲಿ
ನಿಂದು ನೋಡಿದನೆಡಬಲದ ಮಂಡಳಿಕ ಮನ್ನೆಯರ

ಸಂದ ಯಮನೋ ನಿರುತಿಯೋ ಪೌ
ರಂದರನೊ ಪಾವಕನೊ ವರುಣನೊ
ಮಂದಿಯಿದು ತಾ ಮರ್ತ್ಯರೇ ಹಾ ಎನುತ ಬೆರಗಾದ || ೨೪

ಹಳುವದಲಿ ಹನ್ನೆರಡು ವರುಷವು
ತೊಳಲಿದರು ಸಿರಿ ಹೋಗಿ ನಿಮಿಷಕೆ
ನೆಲನ ರಾಯರು ನೆರೆದು ಜೀಯೆನುತಿಪೆ ಮಹಾದೇವ
ನಳಿನನಾಭನ ಕರುಣದಳತೆಗೆ
ನಿಲುಕದಿಹುದೇನುಂಟು ಮುರರಿಪು
ಮುಳಿದಡಾವನ ಮುಱಿಯನೆಂದನು ತನ್ನ ಮನದೊಳಗೆ || ೨೫

ಇಳುಹಿದನು ಹೊರೆಯಲಿ ಮಹೀಪತಿ
ಕಳುಹಿದುಡುಗೊಱಿಗಳನು ಭೂಪತಿ
ತಿಲಕ ಧರ್ಮಜನೊಪ್ಪುಗೊಂಡನು ನೃಪನ ಪಾವುಡವ
ಒಲವು ಬೊಪ್ಪನಲುಂಟಲಾ ಮ
ಕ್ಕಳನು ಮಱಿಯನು ಲೇಸು ಸಂಜಯ
ತಿಳುಹು ತಾತನ ಕುಶಲವನು ಗಾಂಧಾರಿದೇವಿಯರ || ೨೬

ಗುರು ಪಿತಾಮಹ ಗೌತಮರ ಸ
ಚ್ಚರಣ ಕಮಲಂಗಳಿಗೆ ಕುಶಲವೆ
ಗುರುಸುತನು ಸುಕ್ಷೇಮಿಯೇ ಕುರುರಾಯನಿರವೆಂತು
ಕುರುಪತಿಯ ಸೋದರರು ಮಕ್ಕಳು
ಸರಸಿಜಾನನೆ ಭಾನುಮತಿ ಮಿ
ಕ್ಕರಸಿಯರು ಕರ್ಣಾದಿಗಳು ನಿರ್ವೃತರೆ ಹೇಳೆಂದ || ೨೭

ಸುಖಿಗಳನಿಬರು ಜೀಯ ನಿಮ್ಮಯ
ನಿಖಿಳ ಬಾಂಧವರನು ಸಹೋದರ
ಸಖ ಸುತಾದಿಗಳನು ಪುರೋಹಿತ ಪೌರ ಪರಿಜನನ
ಮುಖಸಮುದ್ಭವೆ ಮೊದಲು ಪಂಕಜ
ಮುಖಿಯರನು ಬೆಸಗೊಂಡು ಕಳುಹಿದ
ರಖಿಳ ಕುರುನಂದನರು ಭೀಷ್ಮ ದ್ರೋಣ ಗೌತಮರು || ೨೮

ಮುನ್ನ ಭೀಷ್ಮ ದ್ರೋಣ ಗೌತಮ
ರುನ್ನತದ ಕಾರುಣ್ಯದಲಿ ಸಂ
ಪನ್ನಸಾಹಸರಾದೆವಾಚರಿಸಿದೆವು ಧರ್ಮವನು
ಇನ್ನು ಧೃತರಾಷ್ಟ್ರಾವನೀಶನು
ತನ್ನ ಮಕ್ಕಳ ಬಾಂಧವ ಪ್ರತಿ
ಪನ್ನತೆಯ ನೆಱೆ ಕಾಂಬನೆಂದನು ಧರ್ಮಸುತ ನಗುತ ॥ ೯

ಏನು ಬಂದಿಹ ಹದನು ಕೌರವ
ನೇನನೆಂದನು ಅವನಿಪಾಲಕ
ನೇನನೆಕ್ಕಟಿಗರೆದು ಬುದ್ಧಿಯ ಕಲಿಸಿ ಕಳುಹಿದನು
ಏನುವನು ನೀನುಳುಹದಿರು ವಿನ
ಯಾನುಗತವಾಗಿರಲಿ ಪೇಣ್ ಶಾ
ರ್ಯಾನುಗತವಾಗಿರಲಿ ಬಿನ್ನವಿಸೆಂದನಸುರಾರಿ ॥ ೩೦

ನಾಡ ಬಯಸುವರೆನ್ನೊಡನೆ ಹೊಯಿ
ದಾಡುವುದು ಸಂಪ್ರತಿಗೆ ಚಿತ್ತವ
ಮಾಡಲಾಗದು ಸಂಧಿ ವೀರಕ್ಷತ್ರಿಯರ ಮತವೆ
ಬೇಡುವರೆ ಪಾರ್ಥಿವರು ನಾವದ
ನಾಡಬಾರದು ತಮ್ಮ ಜನನವ
ನೋಡಿ ನುಡಿಯರು ಪಾಂಡುಸುತರಲ್ಲೆಂದು ಹೇಳೆಂದ ॥ ೩೧

ಮೊದಲೊಳವುಳ ಬ್ರಹ್ಮಚರ್ಯವು
ಮದುವೆಯಾಯಿತು ಬಳಿಕ ವನವಾ
ಸದಲಿ ವಾನಪ್ರಸ್ಥವೆಂಬಾಶ್ರಮುವನಳವಡಿಸಿ
ತುದಿಗೆ ತಾ ಸಂನ್ಯಾಸವನು ಮಾ
ಡಿದನು ಮಗುಳಳುಪಿದರೆ ರಾಜ್ಯದ
ಪದವಿಗನುಚಿತವಾಯ್ತು ಯಮಜಂಗೆಂದು ಹೇಳೆಂದ ॥ ೩೨

ತಳಿತ ಜೌವನದುಬ್ಬುಗಳ ಕಳ
ವಳಿಗರರ್ಜುನಭೀಮರೆಂಬುವ
ರೊಳಗೆ ವೈರವ ಬಿತ್ತಿ ಬೆಳೆಸುವ ಕೃಷ್ಣ ಹಗೆ ತಮಗೆ

ಉಳಿದ ದ್ರುಪದ ವಿರಾಟರೆಂಬೀ
ಹುಳುಗಳೊಲಿದಂತೋರೆಗೆಡೆವರು
ತಿಳಿಯೆ ತಾನೇ ಕಡೆಗೆ ಕೆಡದಿರನೆಂದು ಹೇಳೆಂದ ॥ ೩೩

ಸಾಕು ಕೌರವನಾಯ ಮಾತನ
ದೇಕೆ ಚಿತ್ತೈಸುವಿರಿ ದೂತನ
ನೂಕು ನೂಕು ಕುಠಾರ ದುರ್ಯೋಧನನನೊಡೆಹೊಯ್ದು
ಶಾಕಿನಿಯರಿಗೆ ರಕುತವಾರಿಯೊ
ಳೋಕುಳಿಯನಾಡಿಸುವೆ ನಿಲು ತಡ
ವೇಕೆನುತ ಘುಡುಘುಡಿಸಿ ಕಿಡಿ ಕಿಡಿಯೋದನಾ ಭೀಮ ॥ ೩೪

ಬೆಸಸುವುದು ಹಿಂದಾದ ಜೂಜಿನೊ
ಳೆಸೆದ ಜಾಡ್ಯವೆ ಸಾಕು ಧರ್ಮದ
ದೆಸೆಗೆ ನೀವಿನ್ನುತ್ತರಾಯಿ ಸುಯೋಧನನ ಕಡಿದು
ದೆಸೆದೆಸೆಯ ದೈವಂಗಳಿಗೆ ಹಸ
ರಿಸುವೆವೆಮ್ಮನು ಕಳುಹೆನುತ ಗ
ರ್ಜಿಸಿದರಂದಭಿಮನ್ಯು ಸಾತ್ಯಕಿ ಭೀಮನಂದನರು ॥ ೩೫

ಕದಡಿತಾ ಆಸ್ಥಾನ ಕಲ್ಪಾಂ
ತದ ಮಹಾಸಿಡಿಲಂತೆ ವೀರರು
ಕೆದಱಿ ತಮತಮಗೆದ್ದು ನುಡಿದರು ಖಂಡೆಯವ ಜಡಿದು
ಉದಿರೆ ಹೊಯ್ವೆವು ಹಲ್ಲುಗಳ ಕಿ
ಬ್ಬದಿಯಲುಗಿವೆವು ಕರುಳನಹಿತರ
ತಿದಿಯ ಸುಲಿವೆವು ಬೆಸಸು ನೇಮವನೆಂದರತಿರಥರು ॥ ೩೬

ಈತನಿಂದೇನಹುದು ಲೇಸುಗ
ದಳಾತನಿಂದವೆ ಬರಲಿ ಘೋಲ್ಲೆಹ
ವಾತನಿಂದವೆ ಬರಲಿ ಹಿಂಪಣ ಕಾನನಾಲಯದ
ಯಾತನೆಯ ಸೈರಿಸಿದ ತಮಗಿಂ
ದಾತ ನುಡಿದಡೆ ಹಾನಿಯೇ ನಿಲಿ
ಕಾತರಿಸದಿರಿಯೆಂದು ಸಂತೈಸಿದನು ಯಮಸೂನು ॥ ೩೭

ಕಳುಹಿದನು ಬೀಡಾರಕವನಿಪ
ತಿಲಕನಾ ಸಂಜಯನನಲ್ಲಿಂ
ಬಳಿಕ ಮಱುದಿನ ಕೃಷ್ಣಪಾರ್ಥರು ಕರಸಿ ಸಂಜಯನ
ಬಲುಹು ಮೆಲುಹಿನ ನುಡಿಗಳಿಂದವೆ
ತಿಳುಹಿದರು ಮರುದಿವಸದೋಲಗ
ದೊಳಗೆ ದೂತನ ಕರಸಿ ಬೀಳ್ಕೊಟ್ಟನು ಯುಧಿಷ್ಠಿರನು ॥ ೩೮

ಹೊನ್ನಿನಲಿ ಮಧುರೋಕ್ತಿಯಲಿ ವಿವಿ
ಧಾನ್ನವುಡುಗೊಱೆಗಳಲಿ ಶಿಷ್ಟನ
ಮನ್ನಿಸಿದನವನೀಶನುಚಿತದಲವನ ಬೀಳ್ಕೊಟ್ಟ
ಪನ್ನಗನ ಸಿರಿಮಂಚದಾತನು
ಬೆನ್ನಲಿರುತಿರೆ ಪಾಂಡುತನಯರಿ
ಗಿನ್ನು ಮಂಗಳವೆನುತ ಸಂಜಯ ಬಂದನಿಭಪುರಿಗೆ ॥ ೩೯

೪. ತೊಡೆಗಳಿಗೆ ಸುಕ್ಷೇಮವೇ ?

ಬಂದು ವೈಯಿಕ್ಕಿದನು ಕುರುನೃಪ
ವೃಂದವನು ಪರಿವಾರವನು ಯಮ
ನಂದನನು ಬೆಸಗೊಂಡು ಕಳುಹಿದನುಚಿತವಚನದಲಿ
ಬಂದು ಬಳಿಕಿನ ರಾಜಕಾರ್ಯವ
ನಂದು ಬಿನ್ನೈಸಿದನು ಚಿತ್ತೈ
ಸೆಂದು ಧೃತರಾಷ್ಟ್ರಂಗೆ ದುರ್ಯೋಧನಗೆ ಕೈಮುಗಿದು ॥ ೧

ಜೀಯ ಬಿನ್ನಹವಿಂದು ಪಾಂಡವ
ರಾಯನೈಶ್ವರ್ಯವನು ಸಾವಿರ
ಬಾಯ ಶೇಷನು ಹೊಗಳಲಳವಲ್ಲೆನ್ನ ಪಾಡೇನು
ನಾಯಕರ ಕಡುಹುಗಳನವರವ
ರಾಯತವನನಿಬರಿಗೆ ಕಮಲದ
ಳಾಯತಾಕ್ಷನ ಕರುಣವಳತೆ ವಿಚಿತ್ರವಾಯ್ತೆಂದ ॥ ೨

ಓಲಗದೊಳುಬ್ಬೆದ್ದು ನುಡಿಯಲಿ
ಹೂಳಿ ತಮತಮಗೆನ್ನ ಜಱೆದರು
ಕಾಳಗಕೆ ಕೈಗಟ್ಟಿ ಹಿಂಡೆದ್ದೊದಱಿತವನಿಪರು
ಮೇಲೆ ಸಂತೈಸಿದನು ಧರ್ಮನೃ
ಪಾಲನಲ್ಲಿಂ ಬಳಿಕ ಮುರಹರ
ನಾಲಯಕೆ ಪರಿಮಿತದಲರ್ಜುನನೆನ್ನ ಕರಸಿದನು ॥ ೩

ದೇವನಿದ್ದನು ಸತ್ಯಭಾಮಾ
ದೇವಿಯರ ನಸುಮುಲಗಿಯರ್ಜುನ
ದೇವನಂಕದ ಮೇಲೆ ಸಿರಿಪದಕಮಲವನು ನೀಡಿ
ನಾವು ಬರಲೆಮಗುಚಿತದಲಿ ಸಂ
ಭಾವನೆಯ ಮಾಡಿಸಿದನೆಮಗಿ
ನ್ನಾವುದನು ನೇಮಿಸಿದಿರೆನಲಿಂತೆಂದನಸುರಾರಿ ॥ ೪

ಎಮಗೆ ಸರಿಯಿತ್ತಂಡದಲ್ಲಿಯು
ಮಮತೆ ಬೇಱೊಬ್ಬರಲಿ ಪಕ್ಷ
ಭ್ರಮೆಯ ಮಾಡೆವು ಹಿತನ ಬಯಸುವೆವೆರಡು ಸಂತತಿಗೆ
ಕಮಲಮುಖಿ ಸುಲಿವಡೆದು ಲಕ್ಷ್ಮೀ
ರಮಣ ಲಕ್ಷ್ಮೀರಮಣ ಲಕ್ಷ್ಮೀ
ರಮಣ ಎಂದೊಱಲಿದಡೆ ಸಂಜಯ ನೊಂದೆ ನಾನೆಂದ ॥ ೫

ಕಾವುದೈ ಗೋವಿಂದ ಸಲಹೈ
ದೇವಕೀಸುತ ಗಂಡರ್ಸೈವರ
ಭಾವ ಬೆಟ್ಟಿತು ನೀನಲ್ಲೈ ದೇಸಿಗರಿಗಧಿದೈವ
ದೇವ ಕೆಟ್ಟೆನು ಕೆಟ್ಟೆನೈ ಕರು
ಣಾವಲೋಕನದಿಂದ ಸಲಹೈ
ಜೀವನವನೆಂದೊಱಲೆ ಸಂಜಯ ನೊಂದೆ ನಾನೆಂದ ॥ ೬

ಬಂಟರಾವ್ ಭಕ್ತರಿಗೆ ನೆನೆನರು
ನೆಂಟರೆಮಗೊಲಿದಂತೆ ಹೊಗಳಿದ
ಡೆಂಟುಮುಡಿ ಮೆಚ್ಚುವೆವು ಮೆಚ್ಚೆವು ತರ್ಕಸಾಧಕರ

ಉಂಟು ಪಾಂಡವರೈವರೊಳು ಬಲು
ನಂಟುತನ ಮುಱಿಯೇಕೆ ಅವರಿಗೆ
ಕಂಟಕರು ನಮಗಾದ ಕಂಟಕರೆಂದನಸುರಾರಿ ॥ ೭

ನೆನೆವುದೆಂದನು ಪಾರ್ಥನಾ ಕಾ
ನನದೊಳಗೆ ಗಂಧರ್ವರಲಿ ಬಂ
ಧನವನೀ ಗೋಗ್ರಹಣದಲಿ ಮಾಡಿದ ಪಲಾಯನವ
ವನಜಮುಖಿಯನು ಬಯಸಿದಡೆ ಬಿ
ಲ್ಲಿನಲಿ ಬಡಿವಡೆದುದನು ಕೌರವ
ಜನಪ ಮಱಿದಿರಲಾಗದೆಂದರಸಂಗೆ ಹೇಳೆಂದ ॥ ೮

ವೀರಭೀಮನ ಗದೆಯ ಹೊಯ್ಲಿನ
ಭಾರಣೆಯ ನಮ್ಮತುಳಚಾಪದ
ಸಾರಶಸ್ತ್ರಾವಳಿಯ ಮಳೆಗಾಲದ ಮಹಾದ್ಭುತವ
ಧೀರ ನಕುಲನ ಸಾತ್ಯಕಿಯ ಬಲು
ಕೂರಸಿಯ ಸಹದೇವಮತ್ಸ್ಯರು
ದಾರತೆಯ ನಿಮ್ಮರಸನಱಿದಿಹುದೆಂದನಾ ಪಾರ್ಥ ॥ ೯

ಅಂದು ಜೂಜಿನ ಸಭೆಯೊಳಗೆ ನಾ
ವೆಂದ ಮಾತುಗಳುಂಟು ತಾವದ
ಮುಂದೆ ನೋಡಲಿ ಕರ್ಣ ಶಕುನಿ ಸುಯೋಧನಾದಿಗಳು
ಇಂದು ನೆನೆವುದು ದೇಶ ಕಾಲವ
ಹಿಂದುಗಳೆಯದೆ ಬೇಗ ಮಾಡುವೆ
ವೆಂದು ಬಿನ್ನಹ ಮಾಡಹೇಳಿದನರ್ಜುನನು ನಿಮಗೆ ॥ ೧೦

ತೊಡೆಗಳಿಗೆ ಸುಕ್ಷೇಮವೇ ನಿ
ನ್ನೊಡೆಯನವನೊಡವುಟ್ಟಿದನ ಮೈ
ಜಡಿದುದೇ ಪಾಲಿಸಿದಡಸಿಬರಿಗಹುದು ರುಧಿರಜಲ
ಒಡನೆ ಹುಟ್ಟಿದ ನೂಱುವರು ಮೈ
ಗೆಡರಲೇ ಬೆಸಗೊಂಬುದಂಜದೆ
ಯೊಡೆಯರಿಗೆ ಹೊಣೆಗೊಂಡೆ ಹೇಳೆಂದಟ್ಟಿದನು ಭೀಮ ॥ ೧೧

ಸಾಕು ಸಂಜಯ ಗಳಹದಿರು ಫಡ
ನೂಕಿವನನಾರಲ್ಲಿಗಟ್ಟಿದ
ರಾ ಕುಠಾರರ ಬಯಲ ಗೃಹಗರ್ಜನೆಯ ಗರ ಹೊಡೆದು
ತೇಕಿ ತಲೆಕೆಳಗಾದನಿವನವಿ
ವೇಕಸಾಗರನೆಲೆ ನೃಪತಿ ಜಗ
ದೇಕವೀರನು ಕರ್ಣ ತಾನಿರೆ ಸಂಧಿಯೇಕೆಂದ ॥ ೧೨

ಮಂದಿಯಲಿ ವೈಮಱದು ಬಾಹಿರ
ರೆಂದ ಮಾತನು ರಾಜಸಭೆಯಲಿ
ತಂದು ಹರಹುವನಿವನು ಶಿಷ್ಟನೆ ಜಗದ ಭಂಡನಲಾ
ಇಂದುಮೌಳಿಯನೊಂದು ಬಾರಿಗೆ
ಹಿಂದುಮುಂದನು ಮಾಡುವೆನು ತಾ
ಮಂದಿ ಕೌಂತಿಯ ಮಕ್ಕಳಿದಿರೇ ಎಂದನಾ ಕರ್ಣ ॥ ೧೩

ಭಂಡನೇ ಸಂಜಯನು ಲೋಕದ
ಭಂಡ ನೀನೆಲೆ ಕರ್ಣ ನಿನಗಾ
ಪಾಂಡವರ ಪರಿಯಂತವೇ ನಿನಗವರ ಸೇನೆಯಲಿ
ಗಂಡನೊಬ್ಬನೆ ಸಾಕು ಕೆದಱುವೆ
ಗಂಡಗರ್ವದ ಮಾತ ನಿನ್ನನು
ದಿಂಡುದಱಿವನು ಮುನಿದಡರ್ಜುನನೆಂದನಾ ಭೀಷ್ಮ ॥ ೧೪

ಖುಲ್ಲನಿವನೀ ಕರ್ಣನಿವ ದಿಟ
ಬಲ್ಲಿದನು ಬವರದಲಿಯೆಂದಿವ
ನಲ್ಲಿ ಸಂಬುಗೆಯುಂಟೆ ಮರುಳೇ ಹೇಳಿ ಫಲವೇನು
ಇಲ್ಲ ನೋಡರ್ಜುನಗೆ ಪಡಿ ನರ
ರಲ್ಲಿ ನಿರ್ಜರರಲ್ಲಿ ಪನ್ನಗ
ರಲ್ಲಿ ಕೈವಾರಿಗಳೆ ನಾವಿನ್ನೆಂದನಾ ಭೀಷ್ಮ ॥ ೧೫

ಮುರಿಯದಿರು ಗಾಂಗೇಯನೆಂದುದು
ಪರಮತತ್ವವು ಪಾರ್ಥನನು ಸಂ
ಗರದಲಾನುವರಿಲ್ಲ ಕೇಳಮರಾಸುರಾಳಿಯಲಿ

ದುರುಳರಾಡುವ ಹೊಳ್ಳು ನುಡಿಗಳು
ಹಿರಿಯರಭಿಮತವಲ್ಲ ಸಂಧಿಗೆ
ಕೊರಳುಗೊಳಿಸುವುದುಚಿತವೆಂದನು ದ್ರೋಣನರಸಂಗೆ ॥ ೧೬

ಹುರುಳುಗೆಡಿಸುವಿರಾವು ನುಡಿದಡೆ
ಕರಗಿ ಕುಂತಿಯು ಮಕ್ಕಳೆಂದಡೆ
ಹರಹಿಕೊಂಬಿರಿ ಡಿಂಬವೆಮ್ಮಲಿ ಜೀವವವರಲ್ಲಿ
ಭರತಸಂತತಿಗಳಲಿ ಕೆಲಬರು
ನರರೆ ಕೆಲಬರು ಸುರರೆ ಸಾಕಂ
ತಿರಲಿ ಸಮರದೊಳೆನ್ನ ನೋಡೆಂದನು ಸುಯೋಧನನು ॥ ೧೭

ಬೇಡ ಮಗನೇ ಕೃಷ್ಣರಾಯನು
ರೂಢಿಸಿದ ಕಟ್ಟಾಳು ಕೆಲಕೆಲ
ರಾಡುವರು ಸಾಕ್ಷಾತು ಲಕ್ಷ್ಮೀಕಾಂತ ಹರಿಯೆಂದು
ಕೂಡಿಕೊಂಡಿಹನವರನಾತನು
ಕೇಡನವರಿಗೆ ಮಾಡಲೀಯನು
ನಾಡನೊಪ್ಪಿಸು ಮಗನೆಯೆಂದನು ಬೆದಱಿ ಧೃತರಾಷ್ಟ್ರ ॥ ೧೮

ಮರುಳುಗಳಲಾ ಬೊಪ್ಪನವರೀ
ಮುರಹರನು ಹರಿಯೆಂದು ಮುನ್ನವೆ
ಯಱಿದಿಹೆನು ನೀವಂಜದಿರಿ ನಿಮಗಾಗದವಸಾನ
ಗುರು ನದೀಸುತ ಮುಖ್ಯರಿರಲೀ
ಕುರುಕುಲಕೆ ಕೇಡಹುದೆ ಕೊಲುವಡೆ
ಸುರಪತಿಯು ಸುತನಳವೆ ಎಂದನು ಕೌರವರ ರಾಯ ॥ ೧೯

ಭಾರ ಹೆಚ್ಚಿದಡೊಱಲಿ ಧರಣೀ
ನಾರಿ ಬಿನ್ನಹ ಮಾಡಿದಡೆ ದೈ
ತ್ಯಾರಿ ಬಿಱಯಂಗೈದನಿಲ್ಲಿಗೆ ಮನುಜವೇಷದಲಿ
ಭೂರಿದನುಜರನೊರಸಿದನು ಕೈ
ಯಾರೆ ಬಳಿಕರ್ಜುನನ ಶರದಲಿ
ಕೌರವರ ಕೊಲಿಸುವನು ನಾವಿನ್ನಂಜಲೇಕೆಂದ ॥ ೨೦

ಕಾವನಾತನೆ ಕೊಲುವನಾತನೆ
ಸಾವೆನಾತನ ಕೈಯ ಬಾಯಲಿ
ನೀವು ಪಾಂಡವರೊಡನೆ ಸುಖದಲಿ ರಾಜ್ಯವಾಡುವುದು
ಸಾವನರು ನಾವಂಜಿ ಬದುಕೆವು
ನೀವು ಚಿಂತಿಸಲೇಕೆ ನಿಮ್ಮನು
ಕಾವನೈ ಕರುಣದಲಿ ಗದುಗಿನ ವೀರನಾರಯಣ ॥ ೨೧

೫. ಕಾಳಗವನೇ ಬಲಿದು ಬಹೆನು

ಕೇಳು ಜನಮೇಜಯಧರಿತ್ರೀ
ಪಾಲ ಧರ್ಮಜನಹಿತಮಂತ್ರಿಯ
ಬೀಳುಕೊಟ್ಟನು ಬಂದನಸುರಾರಾತಿಯೋಲಗಕೆ
ಮೇಲಣನುವಿನ್ನೇನು ಲಕ್ಷ್ಮೀ
ಲೋಲ ಕರುಣಿಸು ಕೌರವಕ್ಷಿತಿ
ಪಾಲನಲಿ ನಮಗೇನು ಘಟಿಸುವುದೆಂದು ನೃಪ ನುಡಿದ ॥ ೧

ಏನು ನಿನ್ನಭಿಮತವು ವರಸಂ
ಧಾನವೋ ಸಂಗ್ರಾಮವೋ ನಯ
ವೇನು ಮನದೋವರಿಯೊಳಿರಿಸದೆ ಹೇಳು ನಿಶ್ಚಯವ
ನೀನೊಲಿದ ಹದನಾವುದದನೊಲಿ
ದಾನು ಘಟಿಸುವೆನೆಂದು ಕುಂತೀ
ಸೂನುವನು ಬೆಸಗೊಂಡನಸುರಾರಾತಿ ನಸುನಗುತ ॥ ೨

ಅಳಿವುವೊಡಲುಗಳವನಿಸಾಗರ
ವಳಿಯಲುಳಿವುದು ಕೀರ್ತಿ ಸೋದರ
ರೊಳಗೆ ನೆಱೆ ಕಡಿದಾಡಿ ಬದುಕಿದರೆಂಬ ದುರ್ಯಶದ
ಹಳಿವು ಹೋಗುವುದು ದೇವ ಸುಡಲೀ
ನೆಲನನಾ ಕೌರವನ ಕೈಯಲಿ
ಕೆಲವು ನಗರಂಗಳನು ಕೊಡಿಸಿಯೆ ಸಂತವಿಡಿ ಎಂದ ॥ ೩

ಅರಸನಭಿಮತವಿಂದು ಸಂಧಿಗೆ
ತಿರುಗಿತೆಲೆ ಪರಮಾನಸುತ ನಿ
ನ್ನಱಿತವಾವುದು ಮನವ ವಂಚಿಸಬೇಡ ಹೇಳೆನಲು
ಧರಣಿಪತಿ ತಪ್ಪುವನೆ ಕರ್ಕಶ
ತರದ ಕದನದಲೇನು ಫಲ ಸೋ
ದರರ ವಧೆಗೊಡಬಡುವನಲ್ಲಸುರಾರಿ ಕೇಳೆಂದ ॥ ೪

ಹಗೆಯೊಳೆಮ್ಮವರಲ್ಲಿಯೆದೆಗಿ
ಚ್ಚುಗಳ ಖುಲ್ಲ ಕುಠಾರರಪನಂ
ಬುಗೆಯ ಬಳಸಿದರದು ಪುರಾಕೃತ ಕರ್ಮದವಶೇಷ
ಬಗೆಯೆನಪಮಾನವನು ಕೌರವ
ರಗಡುಮಾಡಿದರೆಂಬ ಚಿತ್ತದ
ದುಗುಡವೆನ್ನೊಳಗಿಲ್ಲ ಸಂಧಿಯು ರಚಿಸಿ ಸಾಕೆಂದ ॥ ೫

ಎಲೆ ಮಹಾದೇವಾಯ್ತು ಹಾಲಾ
ಹಲ ಸುಧಾರಸವುಕ್ಕಿದುರಿಯು
ಗ್ಗಳದ ಶೀತಲವಾಯ್ತು ಸಿಡಿಲಾಟೋಪ ನಯವಾಯ್ತು
ಕೊಳುಗುಳಕೆ ಪವಮಾನನಂದನ
ನಳುಕಿದನು ಮಝು ಮಾಯೆ ಕುಂತೀ
ಲಲನೆ ಪಡೆದಳೊ ಮಗನನೆಂದನು ದಾನವಧ್ವಂಸಿ ॥ ೬

ಈತನಭಿಮತವಿದು ಜಗದ್ವಿ
ಖ್ಯಾತ ಸಾಹಸ ಪಾರ್ಥ ಹೇಳೈ
ನೂತನಾಳಾಪವನು ಕೇಳ್ವೆವು ಶ್ರುತಿರಸಾಯನವ
ಭೀತಿ ಬೇಡೆಂದೆನಲು ನಮಗಿ
ನ್ನೀತಱಭಿಮತವೇನ ಹೇಳಿದ
ದಾತುಕೊಂಬೆನು ಸಿರದೊಳೆಂದನು ಪಾರ್ಥ ಕೈಮುಗಿದು ॥ ೭

ನಕುಲ ಹೇಳೈ ಹದನ ನಿನ್ನಯ
ಯುಕುತಿ ಸಾಮವೊ ಮೇಣು ಸಮರವೊ
ಸುಕರಮಂತ್ರವನಱುಹು ನೀನೆಮಗಂಜಬೇಡೆನಲು

ಯುಕುತಿ ನನುಗಿನ್ನೇನುಭಯ ರಾ
ಜಕವ ಸಂತೈಸುವುದು ಬೇಜಿಕವು
ಗುಕುತಿಯೆಲ್ಲಿಯದೆಂದನಾ ಮಾದ್ರೇಯ ವಿನಯದಲಿ ॥ ೮

ಆವುದಭಿಮತವೇನು ಹದ ಸಹ
ದೇವ ನೀ ಹೇಳೆನಲು ಕೇಳಲೆ
ದೇವ ಸೇರದು ಸಂಧಿ ಸಂಗರವೆನಗೆ ಸಮ್ಮತವು
ಆವ ವಿಧದಲಿ ಸಮರವನೆ ಸಂ
ಭಾವಿಸುವುದೆನೆ ನಗುತ ವರರಾ
ಜೀವಲೋಚನನಟ್ಟಿದನು ದ್ರೌಪದಿಗೆ ಚರರುಗಳ ॥ ೯

ದೇವಿ ಚಿತ್ತೈಸುವುದು ವರ ವಸು
ದೇವನಂದನನಟ್ಟಿದನು ಸಂ
ಭಾವಿಸುವುದರಿರಾಯರಲಿ ಸಂಧಾನಸಂರಂಭ
ನೀವು ಬಿಜಯಂಗೈದು ಚಿತ್ತದ
ಲಾವ ಹದನಾ ಹದನನಾ ರಾ
ಜೀವನಾಭಾದಿಗಳಿಗಱುಹುವುದೆಂದರಾ ಚರರು ॥ ೧೦

ಏನು ಹದನೇನೇನು ವರಸಂ
ಧಾನವೆ ಕೌರವರೊಡನೆ ಸು
ಮ್ಮಾನವೇ ಪತಿಗಳಿಗೆ ಪಾಪಿಗಳಿಱುದರೋ ಸತಿಯ
ದಾನವಾಂತಕನೆಸಗುವನೆ ತ
ಪ್ಪೇನು ತಪ್ಪೇನೆನುತ ನಸುಮುಸು
ಕ್ಡಾನನಾಂಬುಜದಬಲೆ ಬಂದಳು ಕೃಷ್ಣನೋಲಗಕೆ ॥ ೧೧

ಭ್ರೂಲತೆಯ ಸುರಚಾಪದುರುಕೇ
ಶಾಳಿಗಳ ಕಾರ್ಮುಗಿಲಪಾಂಗದ
ಸಾಲ ಕುಡಿಮಿಂಚುಗಳ ನೂಪುರರವದ ಮೊಳಗುಗಳ
ಆ ಲತಾಂಗಿಯ ಗಮನವೇ ಮಳೆ
ಗಾಲದಂತಿರೆ ಧಾರ್ತರಾಷ್ಟ್ರಕು
ಲಾಳಿ ನಿಲುವುದೆ ಪವನಜನ ಸಂಪ್ರೀತಿಯ ಸೇರುವೆಗೆ ॥ ೧೨

ಕವಿದ ಚಿತ್ರಾವಳಿಯು ದಡ್ಡಿಯು
ವಿವಿಧ ಭಟರುಗ್ಗಡಣೆಯುಲಿ ವರ
ಯುವತಿ ಬಂದಳು ಸಖಿಯರೊಯ್ಯಾರದಲಿ ನೃಪಸಭೆಗೆ
ನವಬಳಾಹಕದೊಳಗೆ ಮಿಂಚಿನ
ಗವಿಸಹಿತ ಮಜಃಮೇಘವಾವಿ
ರ್ಭವಿಸಿತೆನೆ ದಂಡಿಗೆಯನಿಳಿದಳು ಹೊಕ್ಕಳೋಲಗವ ॥ ೧೩

ಎಲೆ ಸಮೀರಕುಮಾರ ಸಂಪ್ರತಿ
ಗೆಳಸಿದ್ಯೆ ಕಲಿತನವ ನೀರಲಿ
ಕಲಕಿದ್ಯೆ ಕೈವಾರವಾದುದೆ ಕೌರವೇಂದ್ರನಲಿ
ಕಲಿಸಿದ್ಯೆ ಕೃಷ್ಣಂಗೆ ನೀತಿಯ
ಬಳಸಿದ್ಯೆ ಬಹುಮತವ ನರಕದೊ
ಳಿಳುಹಿದ್ಯೆ ಶಶಿಕುಲವನೆಂದನಿಲಜನ ನೋಡಿದಳು ॥ ೧೪

ಬೇಡಲಟ್ಟುವನೇ ಮಹೀಪತಿ
ನಾಡೊಳೈದೂರುಗಳನವರಲಿ
ಮಾಡುವಾತನು ಕೃಷ್ಣನೇ ಸಂಧಾನವನು ನಿಮಗೆ
ಕೇಡಿಗರ ಕೌರವನೃಪಾಲರ
ಕೂಡಿ ಬದುಕುವ ಭೀಮಸೇನನೆ
ರೂಢಿಸಿತಲಾ ನಿಮ್ಮ ಸಿರಿ ಸೋದರರ ಸೇರುವೆಗೆ ॥ ೧೫

ಯತಿಗಳಾದಿರಿ ನೀವು ರೋಷ
ಚ್ಯುತರಲೇ ಬಳಿಕೇನು ಧರ್ಮ
ಜ್ಞತೆಯು ಸೆಲೆಗಳನಜಃದ ಮನಸೆಳಗುವುವೆ ರೌರವಕೆ
ಕ್ಷಿತಿಯ ಪಾಲಿಸುವುದು ವಿರೋಧ
ವ್ಯತಿಕರವ ಬಿಸುಡುವುದು ಕುಂತೀ
ಸುತರು ಕೌರವರೊಡನೆ ಸುಖದಲಿ ರಾಜ್ಯಮಾಡುವುದು ॥ ೧೬

ಭೀಮ ಬಲವದರಾತಿಸೇನಾ
ಭೀಮ ಕುರುಕುಲಕುಸುಮಮಾರ್ಗಣ
ಭೀಮ ಮಜಃಡ್ಯೆ ಮಾನಿನಿಯ ಘನಮಾನಹಾನಿಗಳ

ರಾಮನಬಲಿಗೆ ಕುದಿದ ಬಲುಸಂ
ಗ್ರಾಮವನು ನೀ ಕೇಳ್ದಱಿಯಲಾ
ಪ್ರೇಮದಲಿ ನೋಡೆನ್ನನೆಂದಳು ದ್ರೌಪದೀದೇವಿ ॥ ೧೭

ಧರೆಗೆ ಕಟ್ಟಭಿಮಾನ ಹೆಂಡಿರ
ಹರಿಬವಾ ಹರಿಬದಲಿ ಕೆಡಹುವ
ರರಿಯನವಗಡಿಸಿದರೆ ಸಾವರು ಪಂಥವುಳ್ಳವರು
ಸುರನರೋರಗರೊಳಗೆ ನಿಮ್ಮೈ
ವರಿಗೆ ಸರಿಯಿಲ್ಲೈವರಬಲೆಯು
ಹರಿಬದಲಿ ಹಂಗಾದರೆಂಬಪದೆಸೆಗೆ ನೋನುವರೆ ॥ ೧೮

ಸೋಲ ಗೆಲ್ಲವದೇಕೆ ಕುರುವಂ
ಶಾಳಿಯಲಿ ಸೋದರರು ನೀವ್ ಪಾಂ
ಚಾಲರಾವೇ ಹೊಱಗು ನಿಮ್ಮೊಳು ಸಲಿಗೆ ನಮಗೇಕೆ
ಮೇಳವೇ ಸಿರಿ ಗಳಿಸಲರಿದು ಜ
ನಾಳಿ ಹೆಂಡಿರಪೂರ್ವವೇ ಕ್ಷಿತಿ
ಪಾಲಕರು ನೀವಾಗಲೆಮಗದು ಪರಮಪರಿಣಾಮ ॥ ೧೯

ಮುಂದಲೆಯ ಹಿಡಿದೆಳೆದು ಸಭೆಯಲಿ
ತಂದು ಸೀರೆಯ ಸೆಳೆದರವದಿರ
ಮುಂದೆ ಮೌನದೊಳಿದ್ದರಲ್ಲದೆ ಪತಿಗಳುಸುರಿದರೆ
ಅಂದು ನೀ ಹಿಂದಿಕ್ಕಿಕೊಂಡುದ
ನಿಂದು ಮಱತಿಪ್ಪೈ ಸಂಧಿಗೋಸುಗ
ಮುಂದುವರಿವರೆ ಕೃಷ್ಣ ಎಂದಳು ದ್ರೌಪದೀದೇವಿ ॥ ೨೦

ತನಯರೈವರು ವೀರಸಹದೇ
ವನು ಘಟೋತ್ಕಚನೀ ಸುಭದ್ರಾ
ತನಯನೆಮ್ಮಯ ತಂದೆ ಮೂಱಕ್ಷೋಹಿಣೀ ಸೇನೆ
ಇನಿಬರೇ ಕಾದುವರು ದುಶ್ಶಾ
ಸನನ ರಕುತವ ಕುಡಿದು ಕುರುಕುಲ
ವನವ ಸುಡುವರು ನಿಮ್ಮ ಹಂಗೇಕೆಂದಳಿಂದುಮುಖಿ ॥ ೨೧

ವರಸತಿಯು ಬಿಸುಸುಯಿಲ ಗಾಳಿಯೊ
ಳುರಿ ಚಡಾಳಿಸೆ ರೋಷವುಯುದು
ಬ್ಬರದಲೌಡೊತ್ತಿದನು ಹಿಡಿದನು ಖತಿಯುನಹಿತರಲಿ
ತರುಣಿ ಸೈರಿಸು ಸೈರಿಸಿನ್ನೀ
ಸುರಿವ ಕಂಬನಿಗಳಿಗೆ ಶತಸಾ
ವಿರವುಡಿಯ ಕಂಬನಿಯು ಸುರಿಸುವೆ ಹಗೆಯ ಹೆಂಡಿರಲಿ ೨೨

ಉರಿಯೊಗುವ ಮೀಸೆಗಳ ಬೆರಳಲಿ
ಮುರಿದು ನೆಗಹಿದ ವಾಮಕರದಲಿ
ತರುಣಿಯನು ಸಂತೈಸಿ ಕಿಡಿಕಿಡಿಯಾಗಿ ಖಾತಿಯಲಿ
ನರಕಮರ್ದನ ಕೇಳು ಕೌರವ
ನರಿಗಳಿದಿರೇ ಕೀಳುವೆನು ಕುಲ
ಗಿರಿಗಳನು ತೊಡೆವೆನು ಕೃತಾಂತನ ಭಾಳದಕ್ಕರವ ॥ ೨೩

ಯಮಸುತನ ಬಗೆಯಂತುಟೆಂದಾ
ಕ್ರಮಕೆ ಮೊಗದಿರುಹಿದೆನು ದಿಟವೀ
ಕಮಲವದನೆಯ ಹರಿಬವೆನ್ನದು ಪತಿಗಳನಿಬರಲಿ
ಎಮಗೆ ಸಂಪ್ರತಿಗಿಲ್ಲ ಮನ ಘನ
ಸಮರವೇ ಸರ್ವಾರ್ಥ ಕೋಪ
ಶ್ರಮಕೆ ರಿಪುರುಧಿರಾಂಬುಪಾನವೆ ವಿಪುಳ ಫಲವೆಂದ ॥ ೨೪

ಕೆಡಹಿ ರಿಪುಗಳ ಕರುಳದಂಡೆಯ
ಮುಡಿಸುವೆನು ಮಾನಿನಿಗೆ ರಕುತವ
ಕುಡಿಯಲೆಱೆವೆನು ಶಾಕಿನಿಯರಿಗೆ ತತ್ಸಹೋದರರ
ನಡೆದು ಸಂಧಿಯ ಮಾಡಿ ಮುರರಿಪು
ಕೊಡಿಸು ನಾಲ್ಕೂರುಗಳನಿವರಿಗೆ
ತಡೆಯದೆರಡೂರುಗಳ ಕೊಂಬೆನು ಕೌರವೇಂದ್ರನಲಿ ॥ ೨೫

ಕೆಲರು ಸಂಪ್ರತಿಗೊಲಿವರಿದಱಹೊಳು
ಕೆಲರು ವಿಗ್ರಹಕೆಳಸುವರು ನಿ
ಮ್ಮೊಳಗೆ ನಿಶ್ಚಯವಿಲ್ಲದಿರೆ ನೃಪಕಾರ್ಯವೆಂತಹುದು

ತಿಳಿದು ಹೇಳವನೀಶ ಪರಮಂ
ಡಲಕೆ ಪಯಣವ ಮಾಡುವರೆ ನಾ
ವಳುಕಿದವರಲ್ಲೆನಲು ಕೃಷ್ಣಂಗರಸನಿಂತೆಂದ ॥ ೧೬

ವಿದಿತವೈದೂರುಗಳ ಕೊಟ್ಟರೆ
ಹದುಳವಿಡುವುದು ಮುನಿದರಾದಡೆ
ಕದನವನೆ ಜೋಡಿಸುವುದುಚಿತಾನುಚಿತದನುವಱಿದು
ಹದನ ನೀನೇ ಬಲ್ಲೆ ಸಾಕಿ
ನ್ನಿದು ನಿದಾನವು ಬಗೆಯಲೆಮ್ಮ
ಭ್ಯುದಯ ನಿನ್ನಾಧೀನವೆಂದನು ಧರ್ಮನಂದನನು ॥ ೧೭

ಪಯಣವನು ನಿಶ್ಚೈಸಿ ದನುಜಾ
ರಿಯನು ಬೀಳ್ಕೊಂಡವನಿಪತಿ ಪಾ
ಳೆಯದೊಳಗೆ ಸಾರಿಸಿದನಗ್ಗದ ಮಂಡಳೀಕರಿಗೆ
ನಯವಿದನು ಮಱುದಿವಸ ಮಂಗಳ
ಮಯಮುಹೂರ್ತದ ಜೋಯಿಸರ ಜೋ
ಕೆಯಲಿ ನಿರ್ಗಮನಿರತನಾದನು ಕೃಷ್ಣನೊಲವಿನಲಿ ॥ ೧೮

ಮೊರೆಯೆ ದುಂದುಭಿ ಶಂಖ ಕಹಳೆಗ
ಳುರು ಮೃದಂಗಾದಿಗಳು ಭೂಸುರ
ಸುರಭಿಗಳ ಬಲವಂದು ದಧಿದೂರ್ವಾಕ್ಷತಾದಿಗಳ
ಧರಿಸಿ ಧರಣೀದೇವರನು ಸ
ತ್ಕರಿಸಿ ಕರತಳದಿಂದ ನಾಸಿಕ
ದೆರಲ ಚಂದ್ರೋದಯವನೀಕ್ಷಿಸಿ ದೇವ ಹೊಱವಂಟ ॥ ೧೯

ಕಲಿತ ಸನ್ನಾಹದಲಿ ಸಾರಥಿ
ಸುಳಿಸಿದನು ಹೊಂದೇರನಭ್ರಕೆ
ತಳಿತವಮಲಚ್ಛತ್ರ ಚಾಮರ ಸಿತಪತಾಕೆಗಳು
ಅಳುಕೆ ನೆಲನಕ್ಷೋಣಿಬಲವಿ
ಟ್ಟಳಿಸಿ ನೆರೆದುದು ರಥಕೆ ದಾನವ
ಕುಲದಿಶಾಪಟ ಕೃಷ್ಣ ಬಿಜಯಂಗೈದನೊಲವಿನಲಿ ॥ ೨೦

ಕಳುಹುತ್ತೈತಂದಖಿಳಪಾಂಡವ
ಬಲಕೆ ನೇಮವ ಕೊಟ್ಟು ಧರ್ಮಜ
ಫಲುಗುಣರ ನಿಲಿಸಿದನು ವರ ಸಹದೇವ ನಕುಲರನು
ಕಳುಹಿದನು ನೀ ಮರಳೆನಲು ಬೆಂ
ಬಳಿಯಲನಿಲಜನ್ಯೆದಿ ಹಗೆಯಲಿ
ಕಲಹವನೆ ಮಸೆಯೆಂದು ನಂಬುಗೆಗೊಂಡು ಮರಳಿದನು ॥ ೩೧

ದೇವಿಯರು ನೀವ್ ಮರಳಿಯೆನೆ ರಾ
ಜೀವನಾಭನ ಹೊರೆಗೆ ದ್ರೌಪದಿ
ದೇವಿ ಬಂದಳು ಹಣೆಯ ಚಾಚಿದಳಂಘ್ರಿಕಮಲದಲಿ
ಸ್ಥಾವರಕೆ ಜಂಗಮಕೆ ನೀನೇ
ಜೀವಚೇಷ್ಟಕನವದಿರಂತ
ರ್ಭಾವವನು ನೀ ಬಲಿಯಲಾಗದು ಸಂಧಿಕಾರ್ಯದಲಿ ॥ ೩೨

ಖಳರು ತಮ್ಮುನ್ನತಿಯ ಕೀಲನು
ಕಳಚಿ ಕಳೆದರು ಮರಳಿ ಹೂಡುವ
ಡಳುಕಿದರು ನನ್ನವರು ಪತಿಗಳೆ ಪರಮವೈರಿಗಳು
ಹಳಿವ ನೀನೇ ಬಲ್ಲೆಯೆನ್ನಯ
ವುಳಿವ ನೀನೇ ಬಲ್ಲೆ ಹಿರಿದಾ
ಗಳಲಿದೆನು ಸಲಹೆನುತ ಕಂಬನಿದುಂಬಿದಳು ತರಳೆ ॥ ೩೩

ಏಳು ತಾಯೆ ಸರೋಜಮುಖಿ ವಿಪಿ
ನಾಲಯದೊಳತಿ ನವೆದೆ ನಿನ್ನವ
ರಾಳಿಗೊಂಡಂದವನು ಬಲ್ಲೆನು ನಿನ್ನ ಹರಿಬದಲಿ
ಕಾಳಗವನೇ ಬಲಿದು ಬಹೆನಿವ
ರೇಳಲವ ಮಾಡಿದರೆ ರಿಪುಗಳ
ಸೀಳಿ ಕರುಳನು ಮುಡಿಸದಿಹೆನೇ ನಿನ್ನ ಕಬರಿಯಲಿ ॥ ೩೪

ದೇವಕಿಯ ಮೇಲಾಣೆ ವರ ವಸು
ದೇವನಂಘ್ರಿಗಳಾಣೆ ಮನ್ಮಥ
ದೇವನಾಣೆ ನಿದಾನವನು ಕೇಳಬಲೆ ನಿನ್ನಾಣೆ

ನಾವು ಸಂಧಿಯ ನೆವದಲವದಿರ
ಭಾವವನು ಕಲಿಮಾಡಿ ಕೋಪವ
ತೀವಿ ಸಂಧಿಯ ಮುಱಿದು ಬಹೆವಿದ ನಂಬು ನೀನೆಂದ ॥ ೩೫

ಮರಳಿದಳು ತರಳಾಕ್ಷಿ ಮುರರಿಪು
ಬರುತ ಮುಂಬಟ್ಟೆಯಲಿ ಕಂಡನು
ವರ ಭರದ್ವಾಜಾಖ್ಯ ಗೌತಮ ಕಣ್ವ ಕೌಶಿಕರ
ಉರಗಮಾಲಿ ಮತಂಗ ಗಾರ್ಗ್ಯಾಂ
ಗಿರಸ ನಾರದ ಶುಕ ಪರಾಶರ
ಪರಶುರಾಮ ಶ್ವೇತಕೇತು ಪ್ರಮುಖ ಮುನಿವರರ ॥ ೩೬

ಮುನಿವರರನುಪಚರಿಸಿದನು ಹ
ಸ್ತಿನಪುರಿಗೆ ಸಂಘಾತದಲಿ ಬಹೆ
ವೆನಲು ಬರಹೇಳಿದನು ಸಕಲ ಮಹಾ ತಪೋಧನರ
ಘನಕುಶಸ್ಥಳಪುರದೊಳಿಡೆಗೈ
ದನು ಸುಯೋಧನನಲ್ಲಿಗಟ್ಟಿದ
ವಿನುತ ದೂತರು ಬಿನ್ನವಿಸಿದರು ಮುರಹರನ ಬರವ ॥ ೩೭

ಕೇಳಿದನು ಧೃತರಾಷ್ಟ್ರನಾ ಸಿರಿ
ಲೋಲನಾಗಮನವನು ಚಿತ್ತವ
ಹೂಳಿ ಹೆಚ್ಚಿದ ಹರುಷ ಮಿಗಲುಬ್ಬಿದ್ದನಡಿಗಡಿಗೆ
ಹೇಳಿದನು ವಿದುರಂಗೆ ಭಂಡಾ
ರಾಲಯದೊಳುಳ್ಳಮಲ ಮುತ್ತಿನ
ಜಾಳಿಗೆಯ ಪೆಟ್ಟಿಗೆಯಲಾಯ್ದರು ಸಾರವಸ್ತುಗಳ ॥ ೩೮

ಎಲೆ ವಿದುರ ಕೇಳ್ಳೆ ಸುಯೋಧನ
ನುಳಿಯಲಖಿಳ ಮಹಾ ಪ್ರಧಾನರು
ನಳಿನನಾಭನನಿದಿರುಗೊಳಲಿ ಕೃತಾರ್ಥರಾವವನು
ಹೊಳಲು ಗುಡಿ ತೋರಣದಲೆಸೆಯಲಿ
ಕಳಸ ಕನ್ನಡಿಸಹಿತ ನಡೆಯಲಿ
ನಳಿನವದನೆಯರೆಂದು ನೇಮಿಸಿದನು ಮಹೀಪಾಲ ॥ ೩೯

ತೆಗೆ ಸುವಸ್ತುವನೀಯದಿರು ಹರಿ
ಹಗೆ ಕಣಾ ಕುಂತೀಕುಮಾರರು
ಹಗೆಗಳೇ ಮನ್ನಿಸಿದರೆಂದುಳುಹುವನೆ ಮುರವೈರಿ
ನಗರಿಗಾತನು ಬರಲಿ ಯಾದವ
ನಗಡುತನಕೌಷಧವ ಬಲ್ಲೆನು
ಬಿಗಿದು ಕೆಡಹುವೆನೆಂದು ನುಡಿದನು ಕೌರವರ ರಾಯ || ೪೦

ಖಾತಿಗೊಂಡನು ಭೀಷ್ಮನೆಲೆ ಕಡು
ಪಾತಕಿಯೆ ನೀ ಕೃಷ್ಣನನು ಬಿಗಿ
ವಾತನೇ ಬಳಿಕೇನು ಬಲ್ಲೆನು ನಿನ್ನ ಸಾಹಸವ
ಈತನಾಡುವ ಮಾತ ಕೇಳಲು
ಪಾತಕವು ಬಹುದೆಂದು ಗಂಗಾ
ಜಾತನೋಲಗದಿಂದ ಸರಿದನು ತನ್ನ ಮಂದಿರಕೆ || ೪೧

ಪುರವ ರಚಿಸಿದರುದಯದಲಿ ವಿ
ಸ್ತರ ಮಿಗಲು ಗಾಂಗೇಯ ಗೌತಮ
ಗುರು ವಿದುರ ಶಲ್ಯಾದಿ ಸುಜನರು ಬಂದರಿದಿರಾಗಿ
ತರುಣಿಯರು ಕೆಂದಳಿರ ಕಲಶದ
ಕರತಳದ ಗರುವಾಯಿಯಲಿ ಪಂ
ಕರುಹನಾಭನನಿದಿರುಗೊಂಡರು ವಿತತವಿಭವದಲಿ || ೪೨

ಮಂದಿ ಮೈಯಿಕ್ಕಿತು ಮುರಾಂತಕ
ಗೆಂದು ಮನದೊಲವಿನಲಿ ಗಂಗಾ
ನಂದನ ದ್ರೋಣಾದಿಗಳನೆತ್ತಿದನು ಕರುಣದಲಿ
ಮಂದಿರದ ಸುಕ್ಷೇಮಕುಶಲವ
ನಂದು ಕೇಳುತ ವೀಳೆಯವನಾ
ಮಂದಿಗಿತ್ತನು ದೇವ ಬಂದನು ಹಸ್ತಿನಾಪುರಿಗೆ || ೪೩

ಗಿಳಿಯು ತುಂಬಿಯು ಹಂಸೆಗಳ ಕೋ
ಗಿಲೆಯ ಕೊಳರ್ವಕ್ಕಿಗಳ ಕೊಂಚೆಯು
ಕೊಳಲುವಕ್ಕಿಯ ಜಕ್ಕವಕ್ಕಿಯು ನವಿಲ ಪಾರಿವದ

ಕಳರವದ ಕರ್ಣಾಮೃತದ ತನಿ
ವಳೆಯ ಕಱಿಕಿದುದು ಯಾದವೇಂದ್ರನ
ಬಲದ ಕಿವಿಯೊಳಗಿಭಪುರಿಯ ಹೊಱವಳಯದುದ್ಯಾನ ॥ ೪೪

ಹೊಗಳುತೈತಂದಸುರರಿಪು ಗಜ
ನಗರಿಯನು ಹೊಕ್ಕನು ಸುಯೋಧನ
ನಗಣಿತೈಶ್ವರ್ಯಕೆ ಮಹಾದೇವೆನುತ ತಲೆದೂಗಿ
ಬಿಗಿದ ಬೀದಿಯ ನಯದ ನೆಲಗ
ಟ್ಟುಗಳ ರತ್ನದ ಹೇಮದುಪ್ಪರಿ
ಗೆಗಳ ಕೇರಿಗಳೊಳಗೆ ಬರುತಿರ್ದನು ಮುರಧ್ವಂಸಿ ॥ ೪೫

ಮಂದೆಯಲಿ ಸುಳಿವಾನೆ ಕುದುರೆಯ
ಸಂದಣಿಯ ಕೀಲಿಸಿದ ಭೂಮಿಪ
ರಂದಣದ ಸಾಲುಗಳ ತೆಕ್ಕೆಯ ಬಿರುದಿನಾಳುಗಳ
ಮಂದಿಯಲಿ ಹೊಗಲನಿಲಗುಬ್ಬಸ
ವೆಂದರುಳಿದರಿಗಳವೆಯೆನುತರ
ವಿಂದನಾಭನು ಬಂದನಾ ಧೃತರಾಷ್ಟ್ರನರಮನೆಗೆ ॥ ೪೬

ಇಂದಿರುವಂದನು ಕಾಣಿಕೆಯನಿ
ಕ್ಕಿದನು ಕುಶಲಕ್ಷೇಮವನು ಕೇ
ಳಿದನು ಭಕ್ತಿಯಲೆಱಗಿದನು ಚರಣದಲಿ ಧೃತರಾಷ್ಟ್ರ
ಸದನವನು ಹೊಕ್ಕಂತೆ ನಿಮಿಷಾ
ರ್ಧದಲಿ ಕುಳ್ಳಿರ್ದನಿಬರನು ಕಳು
ಹಿದನು ಕಾರುಣ್ಯದಲಿ ಗದುಗಿನ ವೀರನಾರಯಣ ॥ ೪೭

೬. ನಾಳೆ ಬರಹೇಳು

ಕೇಳು ಜನಮೇಜಯಧರಿತ್ರೀ
ಪಾಲ ಮುರರಿಪು ಗುರುನದೀಜರ
ಬೀಳುಕೊಟ್ಟನು ಕೃಪನ ಮನ್ನಿಸಿ ಮನೆಗೆ ಕಳುಹಿದನು

ಆಲಯಕೆ ವಿದುರಂಗೆ ಕೊಟ್ಟನು
ವೀಳಯವನೊಡನೈದಿ ಬಂದ ನೃ
ಪಾಲಕರ ಮೊಗಸನ್ನೆಯಲಿ ಕಳುಹಿದನು ಮನೆಗಳಿಗೆ॥ ೧

ಶೌರಿ ಕಾಣಿಸಿಕೊಂಡನಾ ಗಾಂ
ಧಾರಿಯನು ಸುಕ್ಷೇಮಕುಶಲವ
ನಾರಯಿದು ಕಾಣಿಕೆಯ ಕೊಂಡನು ಕೊಟ್ಟನುಡುಗೊಱೆಯ
ಕೌರವನು ತನ್ನರಮನೆಗೆ ಹರಿ
ಬಾರದಿರನೆಂದಖಿಲವಿಧದಲಿ
ಸಾರವಸ್ತುವ ತರಿಸಿಯಾರೋಗಣೆಗೆ ಮಾಡಿಸಿದ॥ ೨

ನಡುವೆ ಮಣಿಮಂಚದಲಿ ಮೆಲ್ವಾ
ಸಡಕಿಲನು ಹಚ್ಚಡಿಸಿದರು ಮೇ
ಲಡಸಿದರು ನವರತ್ನಖಚಿತದ ಮೇಲುಕಟ್ಟುಗಳ
ಉಡುಗೊಱೆಯ ತರಿಸಿದನು ರಾಯನ
ಮಡದಿಯರು ಹೊಂಗಳಸ ಜಲವನು
ಪಡಿಗವನು ಹಿಡಿದಸುರರಿಪುವಿನ ಬರವ ಹಾರಿದರು॥ ೩

ತವತವಗೆ ಗಾಂಗೇಯ ಗುರು ಕೃಪ
ರವಿಸುತಾದಿಗಳಸುರರಿಪು ನಿಜ
ಭವನಕೈತಹನೆಂದು ಸವೆದರು ಸಾರವಸ್ತುಗಳ
ಅವನಿಪನ ಬೀಳ್ಕೊಂಡು ಕೌರವ
ಭವನವನು ಹಿಂದಿಕ್ಕಿ ವರಭಾ
ಗವತಮಸ್ತಕರತುನ ವಿದುರನ ಮನೆಗೆ ನಡೆತಂದ॥ ೪

ಕರಣ ನಿರ್ಮಳವಾಯ್ತು ಮನವು
ಬ್ಬರಿಸಿತತಿಪರಿತೋಷ ಮಿಗೆ ತಾ
ಪರಮಸುಖದಲಿ ತನುವ ಮಱೆದನು ನಯನಜಲವುಗಲು
ಎರಡುದೋಱದ ಗಾಢಭಕ್ತಿಯ
ಭರದ ಲವಲವಿಕೆಯಲಿ ನಿಜಮಂ
ದಿರವ ಹೊರವಡುತತ್ತ ಕಂಡನು ವಿದುರನಚ್ಯುತನ॥ ೫

ಸಿರಿಮೊಗದ ಕಿಱುಬೆಮರ ತೇಜಿಯ
ಖುರಪುಟದ ಕೆಂದೂಳಿ ಸೋಂಕಿದ
ಸಿರಿಮುಡಿಯ ಕೊನೆಮೀಸೆಯಲಿ ಕೆಂಪಡರ್ದ ರೇಣುಗಳ
ಖರಮರೀಚಿಯ ಝಳಕೆ ಬಾಡಿದ
ತರುಣತುಳಸಿಯ ದಂಡೆಯೊಪ್ಪುವ
ಗರುವದೇವನ ಬರವ ಕಂಡನು ಬಾಗಿಲಲಿ ವಿದುರ ॥ ೬

ತನುವ ಮಱೆದನು ಪುಳಕಜಲದಲಿ
ನೆನೆದು ನಾರಾಯಣನ ಪದದ
ರ್ಶನದ ಹರ್ಷಾರಣ್ಯದಲಿ ಮನ ಹೊಲಬುದಪ್ಪಿದನು
ನೆನೆವ ಸನಕಾದಿಗಳಿಗೊಮ್ಮೆಯು
ಮನಗುಡದ ಮಹಿಮಾತಿರೇಕನು
ಮನೆಗೆ ಬಹ ಕರುಣಾಳುತನ ಹೊಸತೆನುತ ಹಿಗ್ಗಿದನು ॥ ೭

ನೋಡಿದನು ಮನದಣಿಯೆ ಮಿಗೆ ಕೊಂ
ಡಾಡಿದನು ಬೀದಿಯಲಿ ಹರಿದೆಡೆ
ಯಾಡಿದನು ಭ್ರಮೆಯಾಯ್ತು ವಿದುರಂಗೆಂಬ ಗಾವಳಿಯ
ಕೂಡಿ ಕುಣಿದನು ಮನೆಯ ಮುಂದೀ
ಡಾಡಿದನು ಮೈಮಱೆದು ಹರುಷದ
ಗಾಡಿಕೆಯಲಪ್ರತಿಮನೆಸೆದನು ಭಕ್ತಿಕೇಳಿಯಲಿ ॥ ೮

ಹಸಿದು ನಾವೈತಂದಡೀ ಪರಿ
ಮಸಗಿ ಕುಣಿದಾಡಿದರೆ ಮೇಣೀ
ವಸತಿಯನು ನೀ ಮುಂದು ಬಿಸುಟರೆ ನಮಗೆ ತಣಿವಹುದೆ
ವಸುಮತೀವಲ್ಲಭನವರು ಪ್ರಾ
ರ್ಥಿಸಿದರೊಲ್ಲದೆ ಬಂದೆವೈ ನಾ
ಚಿಸದಿರೈ ಬಾ ವಿದುರ ಎನುತೊಳಹೊಕ್ಕನಸುರಾರಿ ॥ ೯

ಒಲವರವು ಕೌತುಕವು ಪಾಲ್ಗಡ
ಲೊಳಗೆ ಮಲಗಿಹ ವಿಷ್ಣು ವಿದುರನ
ನಿಲಯದೊಳಗೊಕ್ಕುಡಿತೆ ಹಾಲಲಿ ಹಸಿವ ನೂಕಿದನು

ಹೊಲಬುಗೆಡಿಸಿದನಖಿಲ ನಿಗಮಂ
ಗಳನು ತನ್ನಱಿಕೆಯಲಿ ಭಜಕಂ
ಗೊಲಿದು ತಾನ್ಪೈತಹುದು ಕರುಣದ ಘನತೆಯೆನೆ ಲೋಕ || ೧೦

ಹರಿಯ ಪದಕಮಲಾಭಿಷೇಕದ
ವರಪಯೋಬಿಂದುಗಳು ಕೌರವ
ನರಮನೆಯನೊಳಗೊಂಬವೊಲು ಕಡಲಾಗಿ ಹರಿತರಲು
ಅರರೆ ಮುರಹರನೊಡನೆ ಹಾಲಿನ
ಶರಧಿ ಮೇರೆಯನೊಡೆದುದಿಳೆಗ
ಚ್ಚರಿಯೆನುತ ಭೀಷ್ಮಾದಿಗಳು ಹೊಗಳಿದರು ಹರುಷದಲಿ || ೧೧

ತೊಲಗಿದಸು ಬಂದಂತೆ ತರಣಿಯ
ಹೊಳಹು ಸೋಂಕಿದ ಜಕ್ಕವಕ್ಕಿಯ
ಬಳಗದಂತಿರೆ ಕೃಷ್ಣರಾಯನ ಬರವ ತಾ ಕೇಳ್ದು
ಪುಳಕ ಪಸರಿಸೆ ಪರಮಹರ್ಷವ
ತಳೆದು ದೇವನ ಕಾಣಿಕೆಯ ಕಂ
ಗಳಿಗೆ ಕಡುಲೋಲುಪತೆ ಮಿಗೆ ಹರಿತಂದಳಾ ಕುಂತಿ || ೧೨

ಬರವ ಕಂಡಸುರಾರಿ ಮಂಚದೊ
ಳಿರದೆ ದಿಮ್ಮನೆ ನಿಂದು ನರರಾ
ಚರಣೆಗಳ ನಾಟಕವ ತಾನೇ ನಟಿಸಿ ತೋಱಿದನು
ಹಿರಿಯರಿಗೆ ತಾ ಹಿರಿಯನೆಂಬೀ
ಗರುವತನವನು ಬಿಸುಟು ಕುಂತಿಗೆ
ಕರವ ಮುಗಿದನು ಸಕಲ ಸನಕಾದಿಗಳುಘೇಯೆನಲು || ೧೩

ಅಮಿತಕರುಣಾಸಿಂಧುವಿನ ಪದ
ಕಮಲದಲಿ ತಾನೆಱಗಿ ಪುಳಕೋ
ದ್ಗಮದ ಪಾವನತರದ ಸುಖಸಂರಂಭದಲಿ ಮುಳುಗಿ
ಗವಿಸಲಱಿಯವು ಗರುವ ವೇದ
ಪ್ರಮಿತಿಗಳು ನೀನೆಂತು ನಡೆತಂ
ದೆಮಗೆ ಗೋಚರವಾದೆಯೆನುತವೆ ಹೊಗಳಿದಳು ಕುಂತಿ || ೧೪

ದೇವಕಿಯ ವಸುದೇವನನು ಬಲ
ದೇವ ಸೌಭದ್ರಾದಿ ಯದುಭೂ
ಪಾವಳಿಯ ಸುಕ್ಷೇಮಕುಶಲವ ಕುಂತಿ ಬೆಸಗೊಳಲು
ದೇವ ನಗೆಮೊಗದಿಂದ ವರ ವಸು
ದೇವ ದೇವಕಿಯಾದಿ ಯಾದವ
ರಾ ವಿಳಾಸದ ಮಹಿಪರಿರವನು ಕುಂತಿಗಱುಹಿದನು ॥ ೧೫

ಯಮತನುಜನಧಿಕನು ಹಿಡಿಂಬಾ
ರಮಣನತಿ ಬಲ್ಲಿದನು ಪಾರ್ಥನ
ವಿಮಳವಿಗ್ರಹ ಲೇಸು ಸಕಲ ಮಹೀಶಪರಿವೃತರು
ಯಮಳರಿರವತಿ ಚೆಲುವು ನೇಹದ
ರಮಣಿಯಾಕೆಯ ಸುತರು ಸುಮಹೋ
ದ್ಯಮರು ಕೇಳೆಂದಸುರರಿಪು ಕುಂತಿಗೆ ನಿಯಾಮಿಸಿದ ॥ ೧೬

ಲೋಕಮೆಚ್ಚಲು ನಿನ್ನ ಸುತರು ದೃ
ಢೈಕ ಸತ್ಯರು ನುಡಿದ ಕಾಲವ
ನೂಕಿದರು ರಾಜ್ಯಾಭಿಲಾಷೆಗೆ ಬಲವ ನೆರಹಿದರು
ಆ ಕುಮಾರರಿಗರ್ಧರಾಜ್ಯವ
ನೀ ಕುಠಾರನೊಳೀಸಿಕೊಡುವವಿ
ವೇಕದಲಿ ತಾ ಬಂದೆನೆಂದನು ಕುಂತಿಗಸುರಾರಿ ॥ ೧೭

ಪರಮ ಪರಿತೋಷದಲಿ ಕೃಷ್ಣನ
ವರಸುಧಾಮಯವಚನವನು ಪಂ
ಕರುಹಮುಖಿ ಕೇಳುತ್ತ ನೆನೆದಳು ನಯನವಾರಿಯಲಿ
ಮುರಮಥನನಾ ಕುಂತಿಗೆಲ್ಲವ
ನೊರೆದು ವಿದುರನ ಕರೆದು ಕೌರವ
ನರಮನೆಯ ಸಮಯವನು ನೋಡಿದು ನಮಗೆ ಹೇಳೆಂದ ॥ ೧೮

ಹೋಗು ನೀನಾತಂಗೆ ಪಾಂಡವ
ರಾಗಸಮುದಯ ಬಂದನೆಂಬುದ
ನೀಗಲಱುಹುವುದಾತ ಮಾಡುವ ನಯದ ಬಳವಿಗೆಯ

ತಾಗುಬಾಗಿನ ಹವಣನಾತನ
ಲಾಗ ನೋಡುವೆನೆನಲು ಕುರುಕುಲ
ಸಾಗರಾಗ್ನಿಯು ಮನೆಗೆ ಬಂದನು ವಿದುರ ಹರಿ ಬೆಸನೆ ॥ ೧೯

ಓಲಗದೊಳಿರ್ದಖಿಳ ಮೂರ್ಖರ
ಮೌಳಿಯನು ಕಂಡವಧರಿಸು ಸಿರಿ
ಲೋಲ ಬಿಜಯಂಗೈಯಲವಸರವುಂಟೆ ಹೇಳೆನಲು
ನಾಳೆ ಕಾಣಿಸಿಕೊಂಬೆವಿನ್ನೇ
ನಾಳಿಕಾಜಿನ ಬರವು ಹಗೆಗಳ
ಪಾಲಿಸುವ ಭರ ಸಂಧಿಕಾರ್ಯಕೆ ಬಾರದಿರನೆಂದ ॥ ೨೦

ನೋಡಿರೈ ಪಾಂಡವರು ಪಾತಕ
ರಾಡುವಾಟವನಾಡಿದಡವೀ
ನಾಡಿನೊಳಗಿದು ಸಲುವುದವನಿಯೊಳಧಿಕ ಲೇಸೆನಿಸಿ
ರೂಢಿಯೊಳಗಾಚಾರವಡಗಿತು
ಜೋಡೆಯಲಿ ಜನಿಸಿದರನೀ ಕೇ
ಡಾಡಿ ಕೂಡಿದನೆಂದು ಹೊಯ್ದನು ರವಿಸುತನ ಕರವ ॥ ೨೧

ನಾಳೆ ಬರಹೇಳೆಂದು ವಿದುರನ
ಬೀಳುಕೊಟ್ಟನು ಬೇಹ ಭಟರಿಗೆ
ವೀಳಯವ ನೀಡಿದನು ಹರಿದುದು ನೃಪತಿಯಾಸ್ಥಾನ
ಚಾಳಿಸಿತು ತಮ ಮೂಡಣದ್ರಿಯ
ಮೇಲೆ ತಲೆದೋಱಿದನು ರವಿ ಭೂ
ಪಾಲ ಕೌರವನಂದಿನೊಡ್ಡೋಲಗವ ರಚಿಸಿದನು ॥ ೨೨

ಕರಸಿದನು ಮಣಿಮುಕುಟಕಿರಣದ
ಗರುವರನು ಗಾಢಪ್ರತಾಪರ
ಬರಸಿದನು ತೂಕದ ಮಹಾಮಂಡಳಿಕ ಮನ್ನೆಯರ
ಧುರವಿಜಯಸಿದ್ಧರನು ಚಾಮೀ
ಕರದ ಗದ್ದುಗೆಯಖಿಳಸಾವಂ
ತರನು ಪೃಥ್ವೀಪಾಲರನು ನೆರಹಿದನು ಕುರುರಾಯ ॥ ೨೩

ಬಲದ ಗದ್ದುಗೆಗಳಲಿ ಭಟರ
ಗ್ಗಳಿಯು ರವಿಸುತ ನದಿಯು ಮಗ ನೃಪ
ತಿಲಕ ದುಶ್ಶ್ಯಾಸನ ಕೃಪ ದ್ರೋಣಾದಿನಾಯಕರು
ಹೊಳೆವ ರತುನದ ಸಾಲ ಮಕುಟದ
ಚೆಲುವಿಕೆಯ ಸಂರಂಭದಲಿ ಗಜ
ಗಲಿಸಿದರು ಮಾಣಿಕ್ಯಮಯ ಭೂಷಣ ವಿಲಾಸದಲಿ ॥ ೧೪

ಸತಿಸಹಿತ ಧೃತರಾಷ್ಟ್ರಭೂಪತಿ
ಸುತನ ಬಲವಂಕದಲಿ ಕನಕೋ
ಚಿತದ ಪೀಠದಲೆಸೆದನಾತನ ಬಲದ ಭಾಗದಲಿ
ಚತುರ ಚತುರಾನನರು ತರ್ಕ
ಶ್ರುತಿ ಸಮಸ್ತ ಕಳಾಸ್ವತಂತ್ರರು
ನುತಗುಣರು ನೃಪಸಭೆಯಲೆಸೆದುದು ಸೂರಿಸಂದೋಹ ॥ ೧೫

ತರುಣ ಶೃಂಗಾರದ ಸಭಾಬಂ
ಧುರರು ನೂರ್ವರು ಕೌರವೇಂದ್ರನ
ವರ ಕುಮಾರರು ಮುಂದೆ ಮೆರೆದರು ಲಕ್ಷಣಾದಿಗಳು
ವರಕಿರೀಟದ ಕಾಲ ತೊಡರಿನ
ಕೊರಳ ಪದಕದ ಕೈಯ ಸುರಗಿಯ
ಲರಸನನುಜರು ನೂರ್ವರೆಡವಂಕದಲಿ ಮೋಹಿದರು ॥ ೧೬

ಮಿಸುಪ ತಮ್ಮ ಮುಖೇಂದುವನು ಸೈ
ರಿಸದೆ ಚಂದ್ರನ ಕಿತ್ತು ಸಭೆದಲಿ
ಬಿಸುಟು ಬೇರ್ಗಳ ಹಿಡಿದರೋ ಹೇಳೆನಲು ಸಭೆಯೊಳಗೆ
ಶಶಿವದನೆಯರ ಕೈಯ ಸೀಗುರಿ
ಎಸೆದವಿಕ್ಕೆಲದಲಿ ಸುಯೋಧನ
ವಸುಮತೀಶನ ವೈಭವದಲಾಸ್ಥಾನ ಚೆಲುವಾಯ್ತು ॥ ೧೭

ಮುರಿದು ನೋಡಿದಡಖಿಳ ರಾಯರು
ಸಿರವ ಬಾಗಲು ಲಾಳ ಮಾಳವ
ತುರುಕ ಕೊಂಕಣ ಗೌಳ ಗುಜ್ಜರ ವಂಗ ಹಮ್ಮಿರ

ವರಕಳಿಂಗಾದಿಗಳು ಬೆಸಸೆನು
ತಿರಲು ಕೋಮಲಿಕೆಯರು ಸಿತಚಾ
ಮರವ ಚಿಮ್ಮಲು ಮಹಿಪ ಮೆಱೆದನು ಸಿಂಹಪೀಠದಲಿ ‖ ೨೮

ಆವ ರೀತಿಯದಾವ ವಿಸ್ತರ
ವಾವ ದೇಶದ ಸಿರಿಯ ಸಡಗರ
ವಾವ ಪರಿಯ ವಿಲಾಸವಾವ ವಿಡಾಯಿ ತಾನೆನಲು
ಹಾವು ಹಳವಿಗೆಯಾದ ರಾಯನು
ರಾವಣಾರಿಯ ಕಾಣಿಕೆಗೆ ಬಲು
ಠೀವಿಯನು ತೋಱಿದನು ಸಾಱುವ ಭಟ್ಟರೋಳಿಯಲಿ ‖ ೨೯

ಬರಲಿ ಕರೆ ಕೈತವದ ಶಿಕ್ಷಾ
ಗುರುವನೆಂದವನೀಶ ದೂತರ
ಹರಿಯ ಬಿಟ್ಟನು ಹರಿಯ ನಿಳಯಕೆ ಹರಿಯ ವೇಗದಲಿ
ಚರರು ಹರಿತಂದಸುರರಿಪುವಿನ
ಚರಣದಲಿ ಪೈಯಿಕ್ಕಿ ನೊಸಲಲಿ
ಕರಪುಟಾಂಜಲಿ ಮೆಱೆವುತಿರೆ ಬಿನ್ನಹವ ಮಾಡಿದರು ‖ ೩೦

ದೇವ ದೇವರ ಸಮಯವೆನೆ ರಾ
ಜೀವನಾಭನು ಮುಗುಳುನಗೆಯಲಿ
ಭಾವನವರಟ್ಟಿದರೆ ಹರಹರ ಬಹೆವು ನಾವೆನುತ
ರಾವಣನ ಪರಿ ನೆಲಸಿತಿವನಲಿ
ಸಾವಿಗಂಜುವನಲ್ಲ ಖಳ ಮಾ
ಯಾವಿದನು ನಮ್ಮುಕುತಿ ಕೊಳ್ಳದು ವಿದುರ ಕೇಳೆಂದ ‖ ೩೧

ಎನುತ ಮಂಚವನಿಳಿದು ವರಕಾಂ
ಚನ ವರೂಥಕೆ ಕೈಗೊಡುವ ಯದು
ಜನಪರುಗ್ಘಡಣೆಯಲಿ ಬಿಜಯಂಗೈದನಸುರಾರಿ
ಮುನಿನಿಕರ ಸಂದಣಿಸಿತಭ್ರದೊ
ಳನಿಮಿಷಾವಳಿ ನೆರೆದುದಿಭಪುರಿ
ಜನವೊಡನೆ ನಡೆತರಲು ಹರಿ ಬರುತಿರ್ದನೋಲಗಕೆ ‖ ೩೨

ಕಲಿಮುಲದಿ ಹೊಲೆಗಲಸಿದಿಭಪುರಿ
ಯೊಳಗು ನಿರ್ಮಳವಾಯ್ತು ಕೃಷ್ಣನ
ಸುಲಭ ದರ್ಶನದಿಂದ ಬೆಂದವು ಜನರ ಭವಬೀಜ
ಲಲನೆಯರು ತಂತಮ್ಮ ನಯನಂ
ಗಳಿಗೆ ದೇವನ ತಂದು ಸಮ್ಮದ
ಪುಳಕಿತಾಂಗಿಯರಾದರೆಲೆ ಜನಮೇಜಯ ಕ್ಷಿತಿಪ ॥ ೩೩

ಕಂಜಸಂಭವ ಪಿತನು ಬಂದನು
ನಂಜಿನಲಿ ಪವಡಿಸುವ ಬಂದನು
ಕುಂಜರನ ಮೊರೆಗೇಳಿ ಸಲಹಿದ ದೇವ ತಾ ಬಂದ
ಅಂಜಿದಸುರನ ಕಾಯ್ದು ಬಂದನು
ಭಂಜನೆಗೆ ಬಲು ದೈವ ಬಂದ ಧ
ನಂಜಯಾದ್ಯರ ಭಾವ ಬಂದನು ನೃಪತಿಯೋಲಗಕೆ ॥ ೩೪

ದೇವಬಂದನು ತನ್ನ ನೆನೆವರ
ಕಾವ ಬಂದನು ದೈತ್ಯಕುಲವನ
ದಾವ ಬಂದನು ಭಾಗವತಜನಲೋಲುಪನು ಬಂದ
ಭಾವಿಸುವಡಘಹಾರಿ ಬಂದನು
ಓವಿ ಭಜಿಸಲು ತನ್ನ ಬೀಱುವ
ದೇವ ಗದುಗಿನ ವೀರನರಯಣ ಬಂದನೋಲಗಕೆ ॥ ೩೫

ಕ್ಷೀರವಾರಿಧಿಶಯನ ಬಂದನು
ವಾರಿಜೋದರ ಕೃಷ್ಣ ಬಂದನು
ಧಾರಿಣಿಯ ಹೊಱೆಗಳೆಯಲೋಸುಗ ಮನುಜವೇಷದಲಿ
ಭೂರಿದೈತ್ಯರನೊರಸಿ ಕೌರವ
ವಾರಿಧಿಯ ಮುಕ್ಕುಳಿಸಲೆಂದೇ
ಘೋರನೈತರುತಿರ್ದನಂದು ನೃಪಾಲನೋಲಗಕೆ ॥ ೩೬

ಬರಲು ಮುರಹರನಿದಿರುವಂದುದು
ಸುರನದೀಜ ದ್ರೋಣ ಗೌತಮ
ಗುರುಸುತಾದಿ ಸಮಸ್ತ ಭೂಪ ಚಮೂಪ ಸಂದೋಹ

ಚರಣದಲಿ ಚಾಚಿದರು ಭೂಮೀ
ಶ್ವರರು ಮಕುಟವನಂತ ತಾರಾ
ಪರಿವೃತೇಂದುವಿನಂತೆ ಮೆಱೆದುದು ಹರಿಯ ಪದನಖವು ॥ ೩೭

ಅರಿದಲೈ ಮುರವೈರಿ ಸನಕಾ
ದ್ಯರ ಸಮಾಧಿಗೆ ಸುಳಿಯದಂಘ್ರಿಯು
ದರುಶನದ ಫಲಭೋಗ ಸಾರಿದುದಸ್ಮದಾದ್ಯರಿಗೆ
ಸುರನರೋಗರೊಳು ಕೃತಾರ್ಥರು
ನಿರುತ ನಾವಲ್ಲದಡೆ ನಿಮ್ಮಯ
ಸರಸಿಜಾಂಘ್ರಿಯ ಸೇವೆ ದೊರಕುವುದಾವ ಮುನಿಗಳಿಗೆ ॥ ೩೮

ಎಂದು ಗಂಗಾನಂದನನು ನಲ
ವಿಂದ ಕೈಗೊಡೆ ಸುರಗಿರಿಯ ತುದಿ
ಯಿಂದ ಮುರಿವಿಂಚುಗಳ ಮುಗಿಲಿಳಿವಂತೆ ಭೂತಳಕೆ
ಅಂದು ನೀಲಾಚಲನಿಕಾಯದ
ಸೌಂದರಾಂಗದ ಕೌಸ್ತುಭಪ್ರಭೆ
ಯಿಂದ ಕಾಂಚನರಥವನಿಳಿದನು ದಾನವಧ್ವಂಸಿ ॥ ೩೯

ಸಮರಸರ್ವಜ್ಞರುಗಳಂಘ್ರಿಗೆ
ನಮಿಸಿದರು ಬಹಳೋಲಗದ ಸಂ
ಭ್ರಮದ ಸಿರಿ ತಲೆವಾಗುತಿರ್ದುದು ನೊಸಲ ಕೈಗಳಲಿ
ಕಮಲಗಣ್ಣಿನ ದೇವನೇ ಸಾ
ಕೆಮಗೆ ಮಾಡುವುದೇನೆನುತ ತ
ತ್ಕುಸುತಿ ಕೌರವನಿಳಿಯದಿರ್ದನು ಸಿಂಹವಿಷ್ಟರವ ॥ ೪೦

ಸೆಣಸು ಸೇರದ ದೇವನಿದಿರಲಿ
ಮಣಿಯದಾತನ ಕಾಣುತವೆ ಧಾ
ರಿಣಿಯನೊತ್ತಿದನುಂಗುಟದ ತುದಿಯಿಂದ ನಸುನಗುತ
ಮಣಿಖಚಿತ ಕಾಂಚನದ ಪೀಠದ
ಗೊಣಸು ಮುಱಿದುದು ನಭದಿ ಸುರಸಂ
ದಣಿಗಳಾ ಎನೆ ಕೆಡೆದು ಬಿದ್ದನು ಹರಿಯ ಚರಣದಲಿ ॥ ೪೧

ಧರಣಿಪತಿ ಸಿಂಹಾಸನದ ಮೇ
ಲಿರದೆ ಬಹರೇ ನಾವು ಬಂದೇ
ಹರಸುವೆವು ತಪ್ಪಾವುದೆನುತೆತ್ತಿದನು ಮಸ್ತಕವ
ಸುರನದೀಸುತ ಕೈಗೊಡಲು ಕೇ
ಸರಿಯ ಪೀಠಕೆ ದೇವ ಬಂದನು
ಕುರುಕುಲಾಗ್ರಣಿಗಳ ಸುಸನ್ಮಾನವನು ಕೈಗೊಳುತ ॥ ೪೨

ಕುಶಲವೇ ಕುರುರಾಯ ಬಾರೈ
ಮುಸುಡ ದುಗುಡವಿದೇನು ಬಾ ಎಂ
ದಸುರರಿಪು ಕೌರವನ ಕರೆದನು ತನ್ನ ಸಮ್ಮುಖಕೆ
ಉಸುರಲಮ್ಮೆನು ಭಾವತನದೊಂ
ದೆಸೆವ ಸಲುಗೆಗೆ ನೇಮವಾದರೆ
ಬಿಸಜಲೋಚನ ಬಿನ್ನಹವನವಧರಿಸಬೇಕೆಂದ ॥ ೪೩

ನೀವು ಬಿಜಯಂಗೈವಿರೆಂದು ಮ
ಹಾವಿಲಾಸದೊಳಳವಡಿಸಿ ನಾ
ನಾವಿಧದ ಷಡುರಸವ ತರುಣಿಯರಿಂದ ಸವೆಸಿದೆನು
ದೇವ ನಮ್ಮರಮನೆಗೆ ಬಾರದೆ
ನೀವು ವಿದುರನ ಮನೆಯೊಳುಂಡಿರಿ
ಗೋವಳಿಗತನ ನಿಮ್ಮ ನೈಸಿರಿ ತಪ್ಪದಾಯ್ತೆಂದ ॥ ೪೪

ಈ ಕೃಪನ ಈ ದ್ರೋಣನೀ ಗಂ
ಗಾಕುಮಾರನ ಮನೆಯ ಹೊಗದವಿ
ವೇಕಿ ತೊತ್ತಿನ ಮಗನ ಮನೆಯಲಿ ಹಸಿವ ನೂಕಿದಿರಿ
ಸಾಕಿದಾತನು ನಂದಗೋಪನು
ಕಾಕ ಬಳಸಲು ಸಲ್ಲದೇ ನಿಮ
ಗೇಕೆ ರಾಯರ ಠೀವಿಯೆಂದನು ನಗುತ ಕುರುರಾಯ ॥ ೪೫

ಕುರುಪತಿಯ ಬಿಱುನುಡಿಯ ಕೇಳಿದು
ಕರಣದಲಿ ಕೋಪಾಗ್ನಿಯುಕ್ಕಲು
ಕೆರಳಿ ನಿರ್ಭೀತಿಯಲಿ ನುಡಿದನು ವಿದುರನರಸಂಗೆ

ದುರುಳ ನೀ ನಿಂದಿಸಿದ ನುಡಿಗು
ತ್ತರವನೀಯಲದೇಕೆ ನಿಮ್ಮಯ
ಪರಜನನಿಗಾದಿಪುಲಿ ಗಂಡನದಾರು ಹೇಳೆಂದ || ೪೬

ಕಡುಮುಳಿದು ಕಲಿಭೀಮ ನಿನ್ನಯ
ತೊಡೆಗಳನು ಮುರಿವಾ ಸಮಯದಲಿ
ಬಿಡದೆ ನಿನ್ನನು ಕಾಯಬೇಕೆಂದುಳುಹಿದೆನು ಧನುವ
ಕೆಡೆ ನುಡಿಸಿಕೊಂಡಿನ್ನು ಕಾವೆನೆ
ಪೊಡವಿಪತಿ ಕೇಳೆಂದು ವಿದುರನು
ಹಿಡಿದ ಬಿಲ್ಲನು ಮುರಿದನಾ ಕುರುಸೇನೆ ಕಳವಳಿಸೆ || ೪೭

ಧನು ಮುರಿಯೆ ಗಾಂಧಾರಿ ಗತಲೋ
ಚನರು ಮಮ್ಮಲ ಮರುಗಿದರು ಭೂ
ಪನ ದುಗುಡ ಮಿಗಿಲಾಯ್ತು ಭೀಷ್ಮದ್ರೋಣರಳಲಿದರು
ಮನದ ಹರುಷದಲಂದು ಮಧುಸೂ
ದನನು ವಿದುರನ ತಿಳುಹಿ ಕೇಳಲೆ
ಜನಪ ಕೌರವರಾಯ ನಮ್ಮಯ ಶೀಲ ಬೇಱಿತೆಂದ || ೪೮

ಹಗೆಯನುಣಿಸುವುದಾಗದೈ ವೈ
ರಿಗಳ ಮನೆಯೊಳಗನ್ನಪಾನಾ
ದಿಗಳ ಕೊಳಲಾಗದು ನಿದಾನಿಸೆ ರಾಜನೀತಿಯಿದು
ಬಗೆಯೆ ನೀ ಪಾಂಡವರಿಗಹಿತನು
ವಿಗಡ ಪಾಂಡವರೆನ್ನ ಜೀವನ
ಹಗೆಯ ನಂಬುವೆನೆಂತು ಹೇಳೈ ಕೌರವರರಾಯ || ೪೯

ಸೇರುವನು ಸಕಳಂಕಚಂದ್ರನು
ವಾರಿಧಿಗೆ ನೀನಖಿಳಗೋಪೀ
ಜಾರ ಜಾರೆಯ ಮಕ್ಕಳಿಗೆ ನೀ ಜೀವ ತಪ್ಪೇನು
ಆರು ತಮ್ಮಂದದ ಮಹಾತ್ಮರ
ಸೇರುವರಲ್ಲೈ ಪಾಂಡುಪುತ್ರರ
ಕೂರುಮೆಗೆ ನಾನಂಜೆ ನೀ ಬಂದನುವ ಹೇಳೆಂದ || ೫೦

ಕುಲದವನ ಹೃದಯಾಂಧಕಾರವ
ಕಳಚಲೆಂದು ಹಿಮಾಂಶು ಹರಹಿದ
ನೆಳೆಯ ಬೆಳುದಿಂಗಳನೆನಲು ಸುರರಿಪುಕುಲಾಂತಕನು
ತೊಳಪ ದಶನಮಯೂಖತತಿ ಹೊಳೆ
ಹೊಳೆಯೆ ನುಡಿದನು ತತ್ಸಭಾ ಮಂ
ಡಲ ಮಹಾಂಬುಧಿ ನುಡಿದೆರೆಯ ತನಿಗಡಣವಡಗಿರಲು ॥ ೫೧

೭. ಕೇಡಿಗರ ಮಾತಿಂಗೊಡಬಡದಿರು

ಅವಧಿ ಸವೆದುದು ಪಾಂಡವರು ನಿ
ನ್ನವರು ವನವಾಸ ಪ್ರಯಾಸದಿ
ನವೆದರವರನು ಕೂಡಿ ಬದುಕುವುದಧಿಕಗುಣ ನಿನಗೆ
ಅವನಿಯರ್ಧವನೀವುದೀಯ
ಧ್ರುವದ ಬಾಳಿಕೆಯೊಳಗೆ ಪುರುಷಾ
ರ್ಥವನು ಸಂಚಿಸೆ ಕಲಿಯಬೇಹುದು ನೃಪತಿ ಕೇಳೆಂದ ॥ ೧

ಕೋಶ ಬಲ ತಳತಂತ್ರ ಹೆಚ್ಚಿದ
ದೇಶ ದುರ್ಗವಮಾತ್ಯ ಮಿತ್ರಮ
ಹೀಶಜನವೆಂಬಿದುವೆ ಕೇಳ್ ಸಪ್ತಾಂಗ ಸನ್ನಾಹ
ಈಸು ನಿನಗುಂಟೆಲ್ಲ ಮಿತ್ರಮ
ಹೀಶರೆಂಬುದು ಕೊಱತೆ ಪಾಂಡವ
ರಾ ಸಹಾಯವು ಬರಲು ಬಳಿಕಿದಿರಿಲ್ಲ ನಿನಗೆಂದ ॥ ೨

ಸಾಮವೆಂಬುದು ರಾಜನೀತಿಗೆ
ತಾ ಮನೋಹರರೂಪು ಬದುಕುವ
ಭೂಮಿಪಾಲರ ವಿನುತ ವಿಭವಕೆ ಮೂಲಬೀಜವಿದು
ಸಾಮತಪ್ಪಿದ ಬಳಿಕ ನೀತಿ ವಿ
ರಾಮವಾಗದೆ ಬಿಡದು ದಂಡದ
ಸೀಮೆಯೆಂಬುದುಪಾಯದಲಿ ಸಾಮಾನ್ಯತರವೆಂದ ॥ ೩

ಮಾಡಿದಪಕಾರಂಗಳನು ಮಱತಿ
ದಾಡರವರತಿ ಮೋಹದಲಿ ನೀ
ಗೂಡಿ ಬದುಕುವ ನುಡಿಯು ನುಡಿವರು ನಮ್ಮ ಮನವೆಚ್ಚಿ
ಕಾಡಿನೊಳಗಾಡಿದರು ದುಃಖವ
ತೋಡಿದರು ನೀನವರಿಗುಚಿತವ
ಮಾಡಿ ನಾಡನು ಕೊಡುವುದೆಂದನು ದಾನವಧ್ವಂಸಿ ॥ ೪

ಬೆರಳ ಮೀಸೆಯಲಿಡುತ ಕಿಱುನಗೆ
ವೆರಸಿ ಕರ್ಣಾದಿಗಳ ವದನವ
ತಿರುಗಿ ನೋಡುತ ಹರಿಯ ನುಡಿಗಳ ಕಿವುಡುಗೇಳುತ್ತ
ಮರುಳುತನದಾಳಾಪವೇತಕೆ
ಮುರಮಥನ ಪಾಂಡವರ ಕಥನವ
ನೊರೆಯದಿರು ಕರ್ಣಕ್ಕೆ ಶೂಲವಿದೆಂದನಾ ಭೂಪ ॥ ೫

ಮಾವ ಮೊದಲು ಸಹಾಯ ಮಧ್ಯದ
ಲಾ ವಿರಾಟನ ಸಖ್ಯ ಕಡೆಯಲಿ
ನೀವು ಮಮ ಜೀವಾಹಿ ಎಂಬಿರಿ ನಿಮ್ಮ ಪಾಂಡವರ
ನಾವು ಕಡೆಯಲಿ ಹೊಱಗು ನಮಗಿ
ನ್ನಾವ ಭೂಪರ ಸಖ್ಯವಿದ್ದುದು
ದೇವ ನಾಚಿಸಬೇಡ ಸಂಧಿಯ ಮಾತ ಮಱತಿಯೆಂದ ॥ ೬

ಮಾಡು ಸಂಧಿಯ ನಮ್ಮ ವಚನವ
ಕೋಡದಿರು ಸವಿಮಾತುಗಳ ನಿನ
ಗಾಡುವವರಿಗೆ ಚಿತ್ತಗೊಡದಿರು ಹಿಸುಣ ಹೊಗಿಸದಿರು
ನಾಡ ನಾಲಗೆಗೆಳೆಯರೆಂಬುದ
ಮಾಡದಿರು ಪಾಂಡವ ನೃಪಾಲರ
ಕೂಡಿ ಬಾಳ್ವುದು ಪಥ್ಯ ನಿನಗೆಂದಸುರರಿಪು ನುಡಿದ ॥ ೭

ಅವರಿಗಿಂದ್ರಪ್ರಸ್ಥದಲಿ ರಾ
ಜ್ಯವನು ಕುಳಸಹಿತಿತ್ತು ನೀ ಪಾಂ
ಡವಪ್ರತಿಷ್ಠಾಚಾರ್ಯನೆಂಬೀ ಬಿರುದ ಧರಿಸಿದರೆ

ಅವನಿಯಲಿ ನಿನ್ನೊಡನೆ ತಲೆದೋ
ರುವ ನೃಪಾಲಕರಿಲ್ಲ ನುಡಿಗಳು
ಕಿವಿಗೆ ಕರ್ಕಶವೀಗಳಾದರೆ ತುದಿಗೆ ಲೇಸೆಂದ ॥ ೮

ನೀತಿಗಾಲಯ ನಿಮ್ಮ ಸಿರಿ ವಿ
ಖ್ಯಾತಿಗಿದು ನೆಲೆ ಸಕಲ ಸೌಖ್ಯ
ವ್ರಾತಕಿದು ಸದ್ಬೀಜವೆನಿಸಿತು ಕೌರವಾನ್ವಯವು
ಭೂತಳದ ಲೋಲುಪತೆಯಲಿ ಕುಲ
ಘಾತುಕರು ತಾವೆಂಬಕೀರ್ತಿಗೆ
ಯೋತು ನೀ ನೆಲೆಯಾಗದಿರು ಕೇಳೆಂದನಸುರಾರಿ ॥ ೯

ಧರೆಯ ನೃಪರಿಗೆ ಹಸ್ತಿನಾಪುರ
ದರಮನೆಯ ಬಾಗಿಲಲಿ ಸಮಯವು
ದೊರಕಲಂತದು ಪುಣ್ಯವೆಂಬೀ ಸಾರ್ವಭೌಮತೆಯ
ಸಿರಿಗೆ ಪಾಂಡವರನ್ಯರಾದರೆ
ಮೆಱೆಯಬಲ್ಲುದೆ ನಿನ್ನ ಸಿರಿ ಕಾ
ತರಿಗತನವನು ಮಾಣು ಕೇಳೆಂದಸುರರಿಪು ನುಡಿದ ॥ ೧೦

ಯಮಜ ನಿನಗೊಳ್ಳಿದನು ಪಾರ್ಥನ
ಮಮತೆ ನಿನ್ನಲಿ ಹಿರಿದು ಭೀಮನ
ತಮದ ನುಡಿ ಹಿಂಗಿದೆದು ನಕುಲನು ನಿನ್ನೊಳೆರಡಱಿಯ
ತಮತಮಗೆ ತಮ್ಮೈವರುಱೆ ನಿ
ನ್ನಮಲ ವಚನವ ಹಾರುತಿಹರಾ
ಭ್ರಮಿತನವ ಮಾಡದಿರು ನೀ ಸೋದರರ ಸಲಹೆಂದ ॥ ೧೧

ಧರ್ಮಜನ ಕಡುಮೋಹವೆಂಬುದು
ನಿಮ್ಮ ಚರಣದೊಳಿರಲಿ ಭೀಮನ
ಹಮ್ಮು ತಮ್ಮೊಳಗಿರಲಿ ಫಲುಗುಣನೊಲುಮೆಯುಂತಿರಲಿ
ಎಮ್ಮ ಭೂಮಿಯೊಳರೆಯ ಬೇಡುವ
ರೆಮ್ಮ ಬಂಧುಗಳಲ್ಲ ಸಂಧಿಗೆ
ತಮ್ಮನೊಡಬಡನೆಂದು ದುಶ್ಯಾಸನನ ನೋಡಿದನು ॥ ೧೨

ಬಂಧುಕೃತ್ಯದ ಮಾತು ಸೂರ್ಯ್ಗಂ
ಗಂಧಕಾರವು ಸೇರುವುದೆ ನಿ
ರ್ಬಂಧದಲಿ ನೀವೇಕೆ ನುಡಿವಿರಿ ರಾಜಕಾರಿಯವ
ಸಂಧಿಯಾಗದು ಪಾಂಡವರ ಸಂ
ಬಂಧ ನಮಗೇಕೆಂದು ಕರುಣಾ
ಸಿಂಧುವಿನ ಮೊಗ ನೋಡಿ ದುಶ್ಯಾಸನನು ಗರ್ಜಿಸಿದ ॥ ೧೩

ಈ ಹರಿಯು ನುಡಿಗೇಳು ದೈವದ
ಮೋಹ ತಪ್ಪಿದ ಬಳಿಕ ಸುಭಟರ
ಸಾಹಸದೆ ಹುರುಳಿಲ್ಲ ನಂಬದಿರೆಮ್ಮ ಬಲುಹುಗಳ
ಐಹಿಕವನೀಡಾಡದಿರು ವೈ
ದೇಹಿಯನು ಸೆಱಗೆಯ್ದ ಸ್ವಾಮಿ
ದ್ರೋಹಿಯನು ಹೋಲದಿರು ಕೌರವ ಎಂದನಾ ಭೀಷ್ಮ ॥ ೧೪

ನೆಲನ ಬೇಡುವ ಪಾಂಡವರ ಭುಜ
ಬಲದೊಳಗೆ ಕುಂದಿಲ್ಲ ನೀತಿಯು
ತಿಳುಹಲೈತಂದಸುರರಿಪು ಸಾಮಾನ್ಯಬಲನಲ್ಲ
ಇಳೆಯೊಳರ್ಧವನೊಪ್ಪಿಗೊಡು ಯದು
ಕುಲಲಲಾಮನ ನೇಮವನು ನೀ
ಸಲಿಸು ಕೆಡಿಸದಿರೀ ವಿಲಾಸವನೆಂದನಾ ದ್ರೋಣ ॥ ೧೫

ಹಲವು ಹೊಲ್ಲೆಹಗಳನು ಪಾಂಡವ
ರೊಳಗೆ ನೆನೆದೆನು ಮುಚ್ಚುಮಱೆಯೇ
ಕಿಳೆಯ ಲೋಭದಲವರ ಕೆಡಿಸುವ ಹದನ ನೆಗಳಿದೆನು
ನೆಲನ ಕೊಂಡೆನು ಜೂಜುಗಾಱರ
ವಿಲಗದಲಿ ಪಾಂಡವರ್ಗೆ ಪುನರಪಿ
ಹಳುವವೇ ಶರಣಲ್ಲದುಂಟೇ ಕೃಷ್ಣ ಕೇಳೆಂದ ॥ ೧೬

ತಾಗುವಪಕೀರಿತಿಗೆ ಹೇಸುವ
ರಾಗಿ ಸತ್ಯವ ಕಾದು ಹಳುವವ
ಭೋಗಿಸಿದಡದು ಕುಲಕೆ ಕುಂದೇ ಪಾಂಡುತನಯರಿಗೆ

ನೀಗಿದರು ವನವಾಸವನು ಸರಿ
ಭಾಗದವನಿಯ ಕೊಂಬ ಚಲವನು
ಹೋಗಬಿಡುವನೆ ಭೀಮಯೆಂದನು ನಗುತ ಮುರವೈರಿ ॥ ೧೭

ಕೊಡು ಕುಶಸ್ಥಳವನು ವೃಕಸ್ಥಳ
ಪುರವ ವಾಸಂತಿಯನು ಕುಳವನು
ಕೊಡಿಸಿ ಕಳೆ ಸಿರಿಕರಣದವರಲಿ ವಾರಣಾವತವ
ಕೊಡು ನಿನಗೆ ಮನ ಬಂದುದೊಂದನು
ನಡಸಿ ಕೊಡುವೆನು ಪಾಂಡವರಲವ
ಗಡೆಯತನವಂತಿರಲಿ ನೃಪ ಕೇಳೆಂದನಸುರಾರಿ ॥ ೧೮

ಬೇಡಿದೊಂದೊಂದೂರು ನಮ್ಮಯ
ನಾಡ ತಲೆಮಂಡೆಗಳು ರಾಜ್ಯದ
ರೂಢಿಯೈದೂರುಗಳ ಬೆಳವಿಗೆ ಹಸ್ತಿನಾನಗರ
ಬೇಡಲರ್ಜುನನು ಮೂನ ನಿನಗುಂ
ಟಾಡಲೇತಕೆ ನೆಲನನೀರಡಿ
ಮಾಡಿಕೊಂಡ ಮಹಾತ್ಮ ನಿನಗಾನಂಜಿದಪೆನೆಂದ ॥ ೧೯

ಕರೆದು ಮೂರಡಿ ನೆಲನ ಧಾರೆಯ
ನೆರೆದ ಬಲಿ ತಳಕಿಳಿದನೆನ್ನೀ
ಧರೆಯಲೈದೂರುಗಳನಿತ್ತೆನಗಾವ ವಿಧಿಯಹುದೋ
ಪರಮಪುರುಷನು ನೀನು ನಿನಗಾಂ
ಶರಣುವೊಕ್ಕೆನು ಬಂದ ಪಥದಲಿ
ಮರಳಿ ಬಿಜಯಂಗೈವುದೆಂದನು ನಗುತ ಕುರುರಾಯ ॥ ೨೦

ಸಲಲಿ ನೀ ಪಾಂಡವರೊಳಿತ್ತಿದ
ಚಲದ ಬೆಳವಿಗೆಯಕಟ ನಿನ್ನೀ
ಬಳಗ ಬದುಕಲಿ ಮತ್ತೆ ನವೆಯಲಿ ಪಾಂಡುನಂದನರು
ಜಲಧಿ ಮೇರೆಯ ಮಹಿಯಲೊಂದೇ
ಸ್ಥಳವನೈವರಿಗೀವುದೆನೆ ಕಳ
ವಳಿಗನವಗಡಿಸಿದನು ಜರಿದನು ಜಗದ ಪಾಲಕನ ॥ ೨೧

ನೆಲದೊಳರ್ಧವನೀವುದಿಲ್ಲಾ
ಸ್ಥಳವನೈದನು ಮುನ್ನ ಕೊಡೆನೆ
ನ್ನಿಳೆಯ ಭಾಗವಸೇಸ ಕೊಟ್ಟಡೆ ನಿನ್ನ ಮೇಲಾಣೆ
ನೆಲನ ಕಡೆಯಲಿ ಮುಳ್ಳ ಮೊನೆಯು
ಚ್ಚಳಿಪ ಧರಣಿಯನಿತ್ತೆನಾದರೆ
ಬಳಿಕ ನೀ ನಗು ಹೋಗು ಕದನವ ಕೊಂಡು ಬಾ ಎಂದ ॥ ೨೨

ದನವ ಕಾವುದು ತೀರಿತೇ ಬನ
ಬನದ ತೊಳಲಿಕೆ ಕಡೆಯನೈದಿತೆ
ಮುನಿವರರ ಬೋಳೆಗಳನೆಱಗಿಸಿಕೊಂಬುದನೆ ಬಿಸುಟು
ವನನಿಧಿಯನೆಡೆಗೊಂಡು ನಡು ಹಾ
ವಿನಲಿ ಹಕ್ಕೆಯಲುಡುಗಿ ನಮ್ಮೊಳು
ಮನಕತವ ನೀ ತಿದ್ದಲೋಸುಗ ಬಂದೆ ಹೋಗೆಂದ ॥ ೨೩

ಹಗೆಯ ಸಂಧಿಯ ನೆವದೊಳೆಮ್ಮಯ
ಬಗೆಯನಱಿಯಲು ಬಂದೆ ಯಾದವ
ರಗಡುತನ ನಮ್ಮಲ್ಲಿ ಸಲ್ಲದು ಸಾಕು ನುಡಿಯದಿರು
ಹಗೆಯನಾದಡೆ ಕೊಂಡು ಬಾ ನಡೆ
ಮಗುಳ್ದೊಡಱಿಯಲುಬಹುದು ನೀ ಹಱಿ
ಹುಗಿಲು ಮಾಡುವ ಮಂತ್ರ ಸಾಕಿನ್ನೆಂದನವನೀಶ ॥ ೨೪

ಖತಿವಿಡಿದು ಮನದೊಳಗೆ ಮಣಿಯದ
ಮತಗುಡದ ಫಣಿಕೇತನನ ಕಂ
ಡತುಳಬಲ ಗುರು ಸಿಂಧುತನಯಾದಿಗಳ ಮೊಗ ನೋಡಿ
ವೆತಿತರವನಿಯ ಬಯಸಿ ಕದನವ
ನತಿಮಥನದಲಿ ಬಗೆದಡೀತನ
ಸತಿಯ ಕಿವಿಯೋಲೆಗಳು ತಿರವಲ್ಲೆಂದನಸುರಾರಿ ॥ ೨೫

ತುಱುಗಿ ಕಬ್ಬಕ್ಕಿಗಳು ಗೂಡಿನೊ
ಳೆಱಗುವಂತಿರೆ ಪಾರ್ಥನಂಬುಗ
ಳುಱುಬಿ ನಿನ್ನಯ ದೇಹದೊಳು ಮುಱಿವಾಗ ಸೈರಿಸದೆ

ಒಱಲಿ ನೀ ಕೆಡೆವಾಗ ಸಂಧಿಯು
ಮುಱಿದ ವಿಧಿಯನು ಬಳಿಕ ಜೈದರೆ
ಬಱಿದೆ ತೀರುವುದಿಲ್ಲ ಖಳ ಕೇಳೆಂದನಸುರಾರಿ ‖ ೧೬

ಕಿವಿಗೆ ಕಠಿಣವು ನಮ್ಮ ನುಡಿಯೆಂ
ದವನಿಪತಿ ಮುಖದಿರುಹದಿರು ರೌ
ರವದ ಸಂಗ್ರಾಮದಲಿ ಕಡುಗಿದ ಪವನನಂದನನ
ತಿವಿದ ಕಿವಿಗಳ ಗದೆಯು ಹೊಯ್ಲಿನ
ಕವಳವನು ದಿಟವೆಂತು ಸೈರಿಸ
ದವಮತಿಗೆ ನೀ ಗಂಡನಹೆ ಮರುಳರಸ ಕೇಳೆಂದ ‖ ೧೭

ಲೀಲೆಯಲಿ ನೀನಖಿಳ ಭೂಪರ
ನೋಲಗಿಸಿಕೊಳಲಲಸಿ ಕಾಲನ
ಕಾಲ ಕೆಳಗೋಲೈಸಿದರೆ ಕುಂದಲ್ಲವೇ ನಿನಗೆ
ಸೋಲು ತಪ್ಪದು ಭೀಮ ಪಾರ್ಥರ
ಕೋಲು ಕೊಂಕುವುವಲ್ಲ ಧರಣಿಯ
ಲೋಲುಪತೆಯಿಂದಳಿಯಬೇಡೆಂದಸುರರಿಪು ನುಡಿದ ‖ ೧೮

ಕಡೆಗೆ ಧೃತರಾಷ್ಟ್ರಾವನೀಶನು
ಮಡದಿಸಹಿತಲನಾಥನಾಗಿಯೆ
ಕೆಡುವನೆಂಬುದ ಬಲ್ಲೆನಾ ಪಾಂಡವರ ಬಾಗಿಲಲಿ
ಪಡಿಗೆ ಪವಮಾನಜನ ಸಮಯವ
ಪಡೆಯದಿಹ ತಱವಾಯ ನಮಗದು
ನಡಸಿಕೊಡುವುದು ತಪ್ಪದಕಟಕಟೆಂದನಸುರಾರಿ ‖ ೧೯

ಮನದ ಸಂಕೇತದಲಿ ದುರ್ಯೋ
ಧನನ ಕಟ್ಟಲು ವಿದುರ ಗಂಗಾ
ತನಯ ಧೃತರಾಷ್ಟ್ರಾವನಿಪರಾಲೋಚಿಸಿದ ಹದನ
ಮನದಲಱಿದನು ಬಳಿಕ ದುಶ್ಶಾ
ಸನನು ದುರ್ಯೋಧನಗೆ ಇನಿಬರ
ನೆನಹ ಬಿನ್ನಹ ಮಾಡಿದನು ಖಾತಿಯಲಿ ಕಳವಳಿಸೆ ‖ ೨೦

ಹೆತ್ತವರು ಮರುಳಹರೆ ನಾವಿ
ನ್ನೆತ್ತ ತೊಲಗುವೆವಣ್ಣ ದೇವರೆ
ಚಿತ್ತವಿಸಿವರೆ ರಾಜಕಾರ್ಯದ ಹದ ವಿಸಂಚಿಸಿತು
ಮುತ್ತಯನ ಕಿರಿಯಯ್ಯನಯ್ಯನ
ಚಿತ್ತ ಕೊಂಕಿತು ಸಾಕು ನಿಂದಿರೆ
ನುತ್ತಲಗ್ರಜಸಹಿತ ಓಲಗದಿಂದ ಹೊಱವಂಟ ॥ ೩೧

ಮುನಿದು ದುರ್ಯೋಧನನು ದುಶ್ಶಾ
ಸನನು ಕೆಲದರಮನೆಯೊಳಾಲೋ
ಚನೆಯ ಮಾಡಿದರಂದು ಸೌಬಲ ಕರ್ಣರೊಡಗೂಡಿ
ದನುಜವೈರಿ ಕುಮಂತ್ರದಲಿ ಬೊ
ಪ್ಪನಲಿ ಖಾತಿಯನಿಕ್ಕಿದನು ಕೈ
ಮನದ ಕಲಿಗಳು ಕಟ್ಟ ಕೃಷ್ಣನನೆಂದನಾ ಭೂಪ ॥ ೩೨

ಎರಡು ಬಲವನು ಮುಸೆದು ಕೊಲಿಸುವ
ಭರವು ಯಾದವನದು ನಿದಾನಿಸ
ಲರಿ ನಮಗೆ ಮುರವೈರಿಯಲ್ಲದೆ ಪಾಂಡುನಂದನರೆ
ತರಿಸಿ ಹುರಿ ನೇಣುಗಳಲೀತನ
ಕರವೆರಡನೊಡೆಬಿಗಿದಡವದಿರು
ಕೆರಳಿ ಮಾಡುವುದಾವುದೆಂದನು ಕೌರವರ ರಾಯ ॥ ೩೩

ಗಾಳಿಯುಪಶಮಿಸಿದರೆ ವಹ್ನಿ
ಜ್ವಾಲೆ ತಾನೇ ನಿಲುವುದೀತನ
ತೋಳ ಬಿಗಿದಡೆ ಬಳಿಕ ಮುನಗುಂದುವರು ಪಾಂಡವರು
ಮೇಳವಿಸಿ ನೇಣುಗಳನೆನುತ ನೃ
ಪಾಲಕನು ಕಳವಳಿಸಿ ನುಡಿವುದ
ನಾಲಿಸುತ ಸಾತ್ಯಕಿ ಕರೆದು ಕೃತವರ್ಮಗಿಂತೆಂದ ॥ ೩೪

ಆಳು ಕುದುರೆಯು ಬಾಗಿಲಿಗೆ ಬರ
ಹೇಳು ಕೈದುವ ಕೊಂಡು ವೀರಭ
ಟಾಳಿ ಹತ್ತಿರ ನಿಲಲಿ ಕೈವೀಸಿದಡೆ ಕವಿಕವಿಸು

ಬೀಳ ಹೊಯ್ವುದು ಹೊಕ್ಕು ಗಂಡಿನ
ಮೇಲೆ ಗಂಡನು ಕಡಿದು ಕುರುಭೂ
ಪಾಲಕನ ನೊರೆನೆತ್ತರಲಿ ನಾದುವುದು ಮೇದಿನಿಯ ॥ ೩

ಎಂದು ಸುಭಟರಿಗಱುಹಿ ಸಾತ್ಯಕಿ
ಬಂದು ಕೃಷ್ಣನ ಕಿವಿಯ ಹತ್ತಿರ
ನಿಂದು ವದನವ ಚಾಚಿ ಬಿನ್ನಹ ಮಾಡಿದನು ಹದನ
ಮಂದಮತಿಗಳು ತಪ್ಪಿದರು ಮನ
ಗುಂದಲಾಗದು ದೇವ ಚಿತ್ತೈ
ಸೆಂದಡಸುರಾರಾತಿ ನಗುತಾ ಭೀಷ್ಮಗಿಂತೆಂದ ॥ ೩

ಪರಿಣತಪ್ರೌಢಿಗಳಿಗಂತಃ
ಕರಣ ನೆನೆವುದು ಸುಜನರಿಗೆ ನಿ
ಷ್ಠುರತೆಗಲ್ಲದೆ ಮನವನೀಯರು ಮಹಿಯ ಮೂಢಜನ
ಕರಗುವುದು ಶಶಿಕಾಂತ ಚಂದ್ರನ
ಕಿರಣ ತಾಗಲು ವಜ್ರಹತಿಯನು
ಧರಿಸಿದಲ್ಲದೆ ಗಿರಿಗಳಳುಕವು ಭೀಷ್ಮ ಕೇಳೆಂದ ॥ ೩

ದೂತರನು ಕಟ್ಟುವುದು ರಾಯರಿ
ಗೇತಱುಚಿತವು ನಮ್ಮ ಬಿಗಿಯಲು
ಕಾತರಿಸುತಿದೆ ನಿನ್ನ ಮೊಮ್ಮಂದಿರನು ನೀ ಕರಸಿ
ಮಾತನಾಡಿಸಿ ನೋಡು ನಮಗಾ
ಭೀತಿ ತಾನಿಲ್ಲೆನಲು ಗಂಗಾ
ಜಾತ ಧೃತರಾಷ್ಟ್ರಂಗೆ ನುಡಿದನು ಕೌರವನ ಹದನ ॥ ೩

ಅವನಿಪತಿ ಕೇಳಿದನು ಕನಲಿದು
ಶಿವಶಿವೆಂದನು ವಿದುರ ಕರೆ ಕೌ
ರವನು ಮಗನೇ ಮೃತ್ಯುವಲ್ಲಾ ಭರತಸಂತತಿಗೆ
ಅವಳ ಬರಹೇಳಿತ್ತ ಮಗನಾ
ಟವನ ನೋಡಲಿ ಹೆತ್ತ ಮೋಹದ
ಹವಣುಗಳ ಬೆಸಗೊಂಬ ಗಾಂಧಾರಿಯನು ಕರೆಯೆಂದ ॥ ೩

ಜನಪನಾಜ್ಞೆಯ ಮೇಲೆ ದುರ್ಯೋ
ಧನನ ತಂದರು ಸಭೆಗೆ ಬಳಿಕಾ
ವನಜಮುಖಿಗೀ ಹದನನಱುಹಿದರಾಗಳೈತಂದು
ದನುಜರಿಪುವನು ಕಟ್ಟುವೈ ಕೃ
ಷ್ಣನನು ಬಿಗಿವೈ ದಿಟ ಮಗನೆ ಹೆ
ತ್ತಿನಗೆ ಹರುಷವ ತಂದೆಯೆಂದಳು ಮುಳಿದು ಗಾಂಧಾರಿ ॥ ೪೦

ನೆಟ್ಟನೆಲೆ ಧೃತರಾಷ್ಟ್ರನೃಪ ನೀ
ನಿಟ್ಟ ಕಿಚ್ಚಿದು ಪಾಪಿ ಮಗನನು
ಹುಟ್ಟಿದಾಗಳೆ ಬಿಸುಟಹೇಳರೆ ಬಾಳುಗೆಡೆದವನ
ಕಟ್ಟುವನು ಗಡ ಕೃಷ್ಣನನು ವೈ
ಮುಟ್ಟುವನು ಗಡ ಗಗನವನು ಬಲು
ದಿಟ್ಟತನಕಿನ್ನೇನನೆಂದಪೆಯೆಂದಳಿಂದುಮುಖಿ ॥ ೪೧

ಮರುಳು ಮಗನೇ ಕೃಷ್ಣರಾಯನ
ಕೆರಳಿಚುವರೇ ಯಾದವರು ನಮ
ಗೆರವಿಗರೆ ವಸುದೇವಗೆಮ್ಮಲಿ ಭೇದವೇ ನಿನಗೆ
ತರಳತನವಿದು ಬೇಡ ಖುಲ್ಲರ
ನೆರವಿಯೊಡನಾಡಿದರೆ ತಪ್ಪದು
ನರಕವೆಂದನು ಕುರುಪತಿಗೆ ಧೃತರಾಷ್ಟ್ರ ಭೂಪಾಲ ॥ ೪೨

ನೊರಜು ಹೊಕ್ಕಡೆ ಕದಡುವುದೆ ಸಾ
ಗರದ ಜಲ ನೊಣವೆಱಗಿದರೆ ಕುಲ
ಗಿರಿಗಳಲ್ಲಾಡುವವೆ ಕೇಳ್ ಧೃತರಾಷ್ಟ್ರಭೂಪಾಲ
ತೆರಳಲಱುವನೆ ಕೊಬ್ಬಿದೊಳ್ಳೆಯ
ಮಱಿಗೆ ಗರುಡನು ನಿನ್ನ ಮಕ್ಕಳ
ದುರುಳತನಕಂಜುವನೆ ಮುರರಿಪುಯೆಂದನಾ ವಿದುರ ॥ ೪೩

ವಿದುರನಿಂತೆಂದೆನಲು ಮಿಂಚಿನ
ಹೊದಱು ಹುರಿಗೊಂಡಂತೆ ರವಿಶತ
ವುದುರಿದವು ಮೈಮುರಿದು ನಿಂದಡೆ ದೇವನಂಗದಲಿ

ಸದೆದುದಾಸ್ಥಾನವನು ಘನ ತೇ
ಜದಲಿ ಹರಿ ತಾ ಲೀಲೆ ಮಿಗೆ ತೋ
ಱದನು ನಿರುಪಮ ವಿಶ್ವರೂಪವನಾ ಮಹಾಸಭೆಗೆ || ೪೪

ಚರಣದುಂಗುಟದಲ್ಲಿ ದೇವರು
ತುಱುಗಿದರು ನೊಸಲಿನಲಿ ಕಮಲಜ
ನುರದಲಗ್ಗದ ರುದ್ರನಾಸ್ಯದೊಳಗ್ನಿ ವಾಯುಗಳು
ಬೆರಳಲಿಂದ್ರಾದಿಗಳು ನಯನಾಂ
ಬುರುಹದಲಿ ರವಿ ನಾಭಿಯಲಿ ನಭ
ವರಭುಜಾಗ್ರದಲಖಿಳ ದಿಗುಪಾಲಕರು ರಂಜಿಸಿತು || ೪೫

ಬಲದ ಭುಜದಲಿ ಪಾರ್ಥನೆಡದಲಿ
ಹಲಧರನು ಚರಣದಲಿ ಧರ್ಮಜ
ಕಲಿ ವೃಕೋದರ ನಕುಲ ಸಹದೇವಾದಿ ಯಾದವರು
ಲಲಿತಕಾಂತಿಯೊಳಖಿಳ ತಾರಾ
ವಳಿಗಳನುಳಗ್ರಹವಿರಲು ತೊಳ
ತೊಳಗಿ ಮೆಱೆದನು ವಿಶ್ವರೂಪವಿಹಾರಿ ಮುರವೈರಿ || ೪೬

ಅರಲ ಮಳೆ ಸೂಸಿದವು ದುಂದುಭಿ
ಮೊರೆದುದಾಕಾಶದಲಿ ಮುದದಲಿ
ಧರಣಿ ಬಿದಿರಿತು ತನುವ ನೂಕಿತು ಜಲಧಿ ದೆಸೆದೆಸೆಗೆ
ಕರಿಕಮಠರುಬ್ಬಾಳುತನ ಮಿ
ಕ್ಕಿರೆ ಮಹಾದ್ಭುತವಾಯ್ತು ಕಂಡುದು
ಹರಿಯ ರೂಪವನೊಬ್ಬ ಕೌರವನಲ್ಲದುಳಿದವರು || ೪೭

ಒಳಗೆ ಹೊಳೆದನು ಬಾಹ್ಯದಲಿ ಪ್ರ
ಜ್ವಲಿಸಿದನು ತಾನಲ್ಲದನ್ಯರ
ಬಳಕೆ ಬೇಱೊಂದಿಲ್ಲದಂತಿರೆ ಕೊಡೆ ತೋಱದನು
ಒಳಗೆ ಬಿಗಿವೆವೊ ಹೊಱಗೆ ಕೃಷ್ಣನ
ಸಿಲುಕಿಸುವೆವೊ ತಿಳಿಯೆ ಕೃಷ್ಣರು
ಹಲಬರಾಗಿಹರಾರ ಕಟ್ಟುವೆವೆಂದರಾ ಖಳರು || ೪೮

ಕಂಗಳನು ಕರುಣಿಸಿದನಂಧನೃ
ಪಂಗೆ ಬಳಿಕೀ ಕೃಷ್ಣರಾಯನ
ಮಂಗಳ ಶ್ರೀ ಮೂರ್ತಿಯನು ಮನದಣಿಯೆ ನೋಡಿದನು
ಕಂಗಳಡಗಲಿ ದೇವ ನಿಮ್ಮಾ
ಯಂಗವಟ್ಟವ ಕಂಡು ಮಗುಳೀ
ಕಂಗಳಿತರವ ಕಾಣಲಾಗದು ಕೃಪೆಯ ಮಾಡೆಂದ ॥ ೪೯

ಅಮಿತಕರುಣಾಸಿಂಧು ನೀನನು
ಪಮಚರಿತ್ರನು ನಿಮ್ಮಡಿಯ ಪದ
ಕಮಲ ದರುಶನದಿಂದ ಹಿಂಗಿದವಘದ ರಾಶಿಗಳು
ಸಮತೆಯಲಿ ನೀ ನೋಡು ಶರಣರ
ಮಮತೆ ಬೇಹುದು ಜೀಯ ಲಕ್ಷ್ಮೀ
ರಮಣ ಕೃಪೆಮಾಡೆಂದು ಪೈಯ್ಯಿಕ್ಕಿದಳು ಗಾಂಧಾರಿ ॥ ೫೦

ತಾತ ಬೆದಱದಿರೀ ಮುಕುಂದನ
ಕೈತವಕೆ ಬೆಚ್ಚದಿರು ಸಂಧಿಯ
ಮಾತು ತಾ ನಿಚ್ಚಯವೆ ನೀವ್ ಬೆಸಗೊಳ್ಳಿ ಮುರಹರನ
ಈತನಂತರ್ಯಾಮಿ ಜೀವ
ವ್ರಾತದಲಿ ಜನಜನಿತ ಜಗವೆ
ಲ್ಲೀತನಾಜ್ಞೆಯೊಳಲೆವುದೆಂದನು ಕೌರವರ ರಾಯ ॥ ೫೧

ಎನ್ನ ಹೃದಯದಲಿರ್ದು ಮುಱುವನು
ಗನ್ನದಲಿ ಸಂಧಿಯನು ರಿಪುಗಳ
ಲಿನ್ನು ನಿನ್ನೊಳಗಿವರೊಳಿದ್ದಾ ಹದನ ತಾನಱುಪಿ
ಭಿನ್ನನಂತಿರೆ ತೋಱು ಭಿನ್ನಾ
ಭಿನ್ನನೆನಿಸಿಯೆ ಮೊಱವ ತಿಳಿಯಲ
ಭಿನ್ನನೀ ಮುರವೈರಿ ನಾವಿನ್ನಂಜಲೇಕೆಂದ ॥ ೫೨

ನಾವು ಸಂಧಿಯನೊಲಿವೆವೆಮ್ಮಯ
ಭಾವದಲಿ ಹುಳುಕಿಲ್ಲ ಸಂಪ್ರತಿ
ದೇವನಭಿಮತವಲ್ಲ ಬಲ್ಲೆನು ಮುರಹರನ ಮನವ

ನೀವು ಮೇಗರೆಯಜುತದವರೀ
ರಾವಣಾರಿಯು ಬಗೆಯುನಜುಯುರಿ
ಸಾವೆನೀತನ ಕೈಯ ಬಾಯಲಿ ಭೀತಿ ಬೇಡೆಂದ ॥ ೫೩

ಮಣಿದು ಬದುಕುವನಲ್ಲ ಹಗೆಯಲಿ
ಸೆಣಸಿ ಬಿಡುವವನಲ್ಲ ದಿಟ ಧಾ
ರಿಣಿಯ ಸಿರಿಗೆಳಸುವವನಲ್ಲಳುಕಿಲ್ಲ ಕಾಯದಲಿ
ರಣಮಹೋತ್ಸವವೆನ್ನ ಮತ ಕೈ
ದಣಿಯೆ ಹೊಯ್ದಾಡುವೆನು ಕೃಷ್ಣನ
ಕೆಣಕಿದಲ್ಲದೆ ವಹಿಲದಲಿ ಕೈವಲ್ಯವಿಲ್ಲೆಂದ ॥ ೫೪

ಮನದೊಳಗೆ ನಸುನಗುತ ಮುನ್ನಿನ
ಮನುಜಸಾಕಾರವನು ತಾ ಮಗು
ಳನುಕರಿಸಿ ಧೃತರಾಷ್ಟ್ರ ಭೀಷ್ಮರಿಗೆಂದನೀ ಹದನ
ಜನಪ ಕೌರವ ಪಾಂಡುನಂದನ
ರೆನಗೆ ಸರಿ ಈ ಚಿಂತೆ ನಮಗೇ
ಕೆನುತ ರಾಜಾಲಯುವನಸುರಧ್ವಂಸಿ ಹೊಜವಂಟ ॥ ೫೫

ಬಂದು ವಿದುರನ ಮನೆಗೆ ದೇವ ಮು
ಕುಂದ ಕುಂತಿಯು ಕರೆದು ನಿನ್ನಯ
ಕಂದರೈವರ ಮೇಲೆ ಕೌರವ ನೃಪನ ಖತಿ ಹಿರಿದು
ಇಂದು ಮುಜುದುದು ಸಂಧಿ ನಿನ್ನಯ
ಕಂದ ಕರ್ಣನ ಬೇಡಿಕೊಳು ನೀ
ನೆಂದು ಸೂಚಿಸಿ ಮರಳಿದನು ಮುರವೈರಿ ಹರುಷದಲಿ ॥ ೫೬

ವಿದುರ ಭಾರದ್ವಾಜ ಗೌತಮ
ನದಿಯುಮಗ ಧೃತರಾಷ್ಟ್ರನಾತನ
ಸುದತಿ ಕರ್ಣ ವಿಕರ್ಣ ಶಲ್ಯ ಸುಬಾಹು ಗುರುಸುತರು
ವದನದುತ್ಸವವಡಗಿ ಕೃಷ್ಣನ
ಪದವನೋಲಗಿಸುತ್ತ ಬರೆ ಕರು
ಣದಲಿ ಕಮಲಾಕಾಂತನುಚಿತದಲವರ ಬೀಳ್ಕೊಟ್ಟ ॥ ೫೭

ನಯದೊಳೇಕಾಂತದಲಿ ಸಲೆ ಕಾ
ರಿಯವ ನುಡಿದವನಾಸೆವಾಸಿಯು
ಬಯಸಲಾಗದು ಹಿತವನೇ ಬಯಸುವುದು ಕುರುಕುಲಕೆ
ನಿಯುತವಿದು ಪಾಂಡವರೊಡನೆ ಸಂ
ಧಿಯೆ ಸರಸ ಸಮರಾಂಗವೀಯ
ನ್ವಯಕೆ ನಿರ್ಣಯವೆಂದು ನೀವಾತಂಗೆ ಸಾಱುವುದು || ೫೮

ಎಂದು ಗಾಂಗೇಯಾದಿಗಳನರ
ವಿಂದನಾಭನು ಬೀಳುಕೊಟ್ಟನು
ನಿಂದು ತಾ ರವಿಸುತನ ಕರೆದನು ರಥದ ಹೊರೆಗಾಗಿ
ಬಂದು ಕಿಱಿದೆಡೆಗಾಗಿ ಕಳುಹುವೆ
ದೆಂದು ನೇಮಿಸಿ ಬಳಿಕ ತಾಪಸ
ವೃಂದವನು ಕಳುಹಿದನು ಗದುಗಿನ ವೀರನಾರಯಣ || ೫೯

೮. ಒಲಿದವರನುಜ್ಜೀವಿಸುವ ಬಗೆ

ಇನತನೂಜನ ಕೂಡೆ ಮೈದುನ
ತನದ ಸರಸವನೆಸಗಿ ರಥದಲಿ
ದನುಜರಿಪು ಬರಸೆಳೆದು ಕುಳ್ಳಿರಿಸಿದನು ಪೀಠದಲಿ
ಎನಗೆ ನಿಮ್ಮಡಿಗಳಲಿ ಸಮಸೇ
ವನೆಯೆ ದೇವ ಮುರಾರಿಯಂಜುವೆ
ನೆನಲು ತೊಡೆಸೋಂಕಿನಲಿ ಸಾರಿದು ಶೌರಿಯಿಂತೆಂದ || ೧

ಭೇಧವಿಲ್ಲೆಲೆ ಕರ್ಣ ನಿಮ್ಮೊಳು
ಯಾದವರು ಕೌರವರೊಳಗೆ ಸಂ
ವಾದಿಸುವಡನ್ವಯಕೆ ಮೊದಲೆರಡಿಲ್ಲ ನಿನ್ನಾಣೆ
ಮೇದಿನೀಪತಿ ನೀನು ಚಿತ್ತದೊ
ಳಾದುದಿಲ್ಲಱುವೆನುತ ದಾನವ
ಸೂದನನು ರವಿಸುತನ ಕಿವಿಯಲಿ ಬಿತ್ತಿದನು ಭಯವ || ೨

ದಾನವಾಂತಕ ಬೆಸಸು ವಂಶವಿ
ಹೀನನನು ನಿಮ್ಮಡಿಗಳೊಡನೆ ಸ
ಮಾನಿಸುವರೇ ಸಾಕೆನುತ ತಲೆವಾಗಿ ಕೈಮುಗಿಯೆ
ಮಾನನಿಧಿಯೆನ್ನಾಣೆ ಬಾರೈ
ನೀನು ನಮ್ಮೆಲ್ಲರ ಹವಣೆ ವರ
ಭಾನುವಂಶಲಲಾಮ ನೀ ರಾಮಂಗೆ ಸರಿಯೆಂದ ॥ ೩

ಕಳೆದುಕೊಂಡನು ವೀಳಯವನಂ
ಜುಳಿಯಲಾತಂಗಿತ್ತು ಕರ್ಣನ
ಕೆಲಕೆ ಬರಸೆಳೆದವನ ಕರದಲಿ ಕರತಳವನಿಕ್ಕಿ
ಎಲೆ ದಿವಾಕರತನಯ ನಿನ್ನಯ
ಕುಲವನಱಿಯೆಯಲಾ ಸುಯೋಧನ
ನಲಿ ವೃಥಾ ಸೇವಕತನದಲಿಹುದುಚಿತವಲ್ಲೆಂದ ॥ ೪

ಲಲನೆ ಪಡೆದಾ ಐದು ಮಂತ್ರಂ
ಗಳಲಿ ಮೊದಲಿಗ ನೀನು ನಿನ್ನಯ
ಬಳಿ ಯುಧಿಷ್ಠಿರದೇವ ಮೂಱನೆಯಾತ ಕಲಿ ಭೀಮ
ಫಲುಗುಣನು ನಾಲ್ಕನೆಯೊಳೈದನೆ
ಯಲಿ ನಕುಲಸಹದೇವರಾದರು
ಬಳಿಕ ಮಾದ್ರೀದೇವಿಯಲ್ಲಿಯದೊಂದು ಮಂತ್ರದಲಿ ॥ ೫

ಆದಱಿಂ ನೀ ಪಾಂಡವರಲೈವರ
ಮೊದಲಿಗನು ನೀನಿರಲು ಧರಣಿಯ
ಕದನವಿತ್ತಂಡಕ್ಕೆ ಕಾಮಿತವಲ್ಲ ಭಾವಿಸಲು
ಇದು ನಿದಾನವು ಕರ್ಣ ನಿನ್ನ
ಭ್ಯುದಯವನೆ ಬಯಸುವೆನು ನಿನ್ನಯ
ಪದಕೆ ಕೆಡಹುವೆನೈವರನು ಬಹುದೆನ್ನ ಸಂಗಾತ ॥ ೬

ನಿನಗೆ ಹಸ್ತಿನಪುರದ ರಾಜ್ಯದ
ಘನತೆಯನು ಮಾಡುವೆನು ಕೌರವ
ಜನಪ ಪಾಂಡವಜನಪರೊಲೈಸುವರು ಗದ್ದುಗೆಯ

ನಿನಗೆ ಕಿಂಕರರೆರಡು ಸಂತತಿ
ಯೆನಿಸಲೊಲ್ಲದೆ ನೀನು ದುರ್ಯೋ
ಧನನ ಬಾಯ್ದಂಬುಲಕೆ ಕೈಯಾನುವರೆ ಹೇಳೆಂದ ॥ ೭

ಎಡದ ವೈಯ್ಯಲಿ ಕೌರವೇಂದ್ರನ
ಗಡಣ ಬಲದಲಿ ಪಾಂಡುಪುತ್ರರ
ಗಡಣವಿದಿರಲಿ ಮಾದ್ರ ಮಾಗಧ ಯಾದವಾದಿಗಳು
ನಡುವೆ ನೀನೋಲಗದೊಳೊಪ್ಪುವ
ಕಡುವಿಲಾಸವ ಬಿಸುಟು ಕುರುಪತಿ
ನುಡಿಸೆ ಜೀಯ ಹಸಾದವೆಂಬುದು ಕಷ್ಟ ನಿನಗೆಂದ ॥ ೮

ಶೌರಿಯದಲಿದಿರಿಲ್ಲ ಕುಲದಲಿ
ಸೂರಿಯನ ಸುತನೊಡನೆ ಹುಟ್ಟಿದ
ವೀರರಗ್ಗದ ಪಾಂಡುತನಯರು ನಿನ್ನ ವೈಭವಕೆ
ಆರು ಸರಿಯೈ ಕರ್ಣ ನಡೆ ನಡೆ
ಧಾರಿಣೀಪತಿಯಾಗಿ ನೀನಿರೆ
ವೈರವಿತ್ತಂಡಕ್ಕೆ ಬಳಿಕಿಲ್ಲೆಂದನಸುರಾರಿ ॥ ೯

ಕೊರಳ ಸೆರೆ ಹಿಗ್ಗಿದವು ದೃಗುಜಲ
ವುರವಣಿಸಿ ಕಡುನೊಂದನಕಟಾ
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ
ಹರಿಯ ಹಗೆ ಹೊಗೆದೋಱದುರುಹದೆ
ಬಱದೆ ಹೋಹುದೆ ತನ್ನ ಜನನವ
ನಱುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ ॥ ೧೦

ಕಾದಿ ಕೊಲುವಡೆ ಪಾಂಡುಸುತರು ಸ
ಹೋದರರು ಕೊಲಲಿಲ್ಲ ಕೊಲ್ಲದೆ
ಕಾದೆನಾದಡೆ ಕೌರವಂಗವನಿಯಲಿ ಹೊಗಲಿಲ್ಲ
ಭೇದದಲಿ ಹೊಕ್ಕಿಱಿದನೋ ಮಧು
ಸೂದನನು ತಾನಕಟಿನುತ ಚಿಂ
ತೋದಧಿಯಲದ್ದಂತೆ ಮೌನದೊಳಿದ್ದನಾ ಕರ್ಣ ॥ ೧೧

ಏನು ಹೇಳ್ವೈ ಕರ್ಣ ಚಿತ್ತ
ಗ್ಲಾನಿಯಾವುದು ನಿನಗೆ ಕುಂತೀ
ಸೂನುಗಳ ಬೆಸಗೈಸಿಕೊಂಬುದು ಸೇರದೇ ಮನಕೆ
ಹಾನಿಯಿಲ್ಲೆನ್ನಾಣೆ ನುಡಿ ದು
ಮ್ಮಾನವೇತಕೆ ಮರುಳುತನ ಬೇ
ಡಾನು ನಿನ್ನಪದೆಸೆಯ ಬಯಸುವನಲ್ಲ ಕೇಳೆಂದ ॥ ೧೨

ಮರುಳು ಮಾಧವ ಸಕಲ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸಗೈವಲ್ಲಿ ಮನವಿಲ್ಲ
ಹೊರೆದ ದಾತಾರಂಗೆ ಹಗೆಗಳ
ಶಿರವನರಿದೊಪ್ಪಿಸುವೆನೆಂಬೀ
ಭರದೊಳಿದ್ದೆನು ಕೌರವೇಂದ್ರನ ಕೊಂದೆ ನೀನೆಂದ ॥ ೧೩

ಒಡನೆ ಹುಟ್ಟಿದರೆಂಬ ಕಥನವ
ನೆಡೆಗೊಡದೆ ಬಣ್ಣಿಸಿದೆ ಪಾಂಡವ
ರಡಗು ಬಾಣಕೆ ಬಲಿಯೆನಿಪ್ಪೀ ಛಲವ ಮಾಣಿಸಿದೆ
ನುಡಿದು ಫಲವೇನಿನ್ನು ಕೌರವ
ರೊಡೆಯನಾದಂತಹೆನು ಬಾರೆನು
ಪೊಡವಿಯಲಿ ನೀ ಹರಹಿಕೊಳು ನಿನ್ನವರ ನಿಲಿಸೆಂದ ॥ ೧೪

ಹಲವು ಮಾತೇನಖಿಳಜನಕೆ
ನ್ನಳಿವು ಸೊಗಸದು ಕೌರವೇಶ್ವರ
ನೊಲವು ತಪ್ಪಿಸೆ ಭುವನದೊಳಗೆನಗಾಪ್ತಜನವಿಲ್ಲ
ಸಲಹಿದನು ಮನ್ನಣೆಯಲೆನಗ
ಗ್ಗಳಿಕೆಯಲ್ಲದೆ ಹೀನವೃತ್ತಿಯ
ಬಳಸಿ ನಡಸನು ಕೌರವೇಂದ್ರನನೆಂತು ಮಱೆದಪೆನು ॥ ೧೫

ನೋಡಿ ದಣಿಯನು ನಿಚ್ಚಲುಚಿತವ
ಮಾಡಿ ದಣಿಯನು ಬಿರುದ ಹೊಗಳಿಸಿ
ಹಾಡಿ ದಣಿಯನು ಮಾನನಿಧಿಯನದೆಂತು ಮಱೆದಪೆನು

ಕಾಡಲಾಗದು ಕೃಷ್ಣ ಖ್ಯಾತಿಯ
ಮಾಡಲಾಗದು ಬಂದೆನಾದಡೆ
ರೂಢಿ ಮೆಚ್ಚದು ಕೌರವನ ಹಗೆ ಹರಿಬ ತನಗೆಂದ ॥ ೧೬

ವೀರ ಕೌರವರಾಯನೇ ದಾ
ತಾರನಾತನ ಹಗೆಯೆ ಹಗೆ ಕೈ
ವಾರವೇ ಕೈವಾರವಾದಂತಹೆನು ಕುರುನೃಪತಿ
ಶೌರಿ ಕೇಳ್ಳೆ ನಾಳೆ ಸಮರದ
ಭಾರದಲಿ ತೋಱುವೆನು ನಿಜಭುಜ
ಶೌರಿಯದ ಸಂಪನ್ನತನವನು ಪಾಂಡುತನಯರಲಿ ॥ ೧೭

ಅರುಣಜಲದಾಜ್ಯದಲಿ ಬಂಬಲು
ಗರುಳ ಚರುವಿಸಲೆಲುವಿನೊಟ್ಟಿಲ
ಬೆರಳ ಸಮಿಧೆಯೊಡಗಿನಖಿಳಾಹುತಿಯ ರಚನೆಯಲಿ
ನರಕಪಾಲದ ಪಾತ್ರೆಯಲಿ ನಿಡು
ದೆರಳೆಗಳ ಕೇಶದ ಸುದರ್ಭಾಂ
ಕುರದಲಾಹವಯಜ್ಞದೀಕ್ಷಿತನಹೆನು ತಾನೆಂದ ॥ ೧೮

ಮಾರಿಗೌತಣವಾಯ್ತು ನಾಳಿನ
ಭಾರತವು ಬಹುಜೀವ ಹರೆಯಲು
ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ಧೀರರೈವರ ನೋಯಿಸೆನು ರಾಜೀವಸಖನಾಣೆ ॥ ೧೯

ಎನಲು ಕರ್ಣನ ದೃಢವ ಕಂಡನು
ಮನದೊಳುತ್ಸಾಹಿಸಿದನಾದಡೆ
ಯನುಜರೈವರ ಹದನು ನಿನ್ನದು ಬಲುಹ ಮಾಡುವರೆ
ಮನಕೆ ಖತಿಯಹುದಱುಹದಿರ್ದಡೆ
ತನಗೆ ಗುಣವಲ್ಲೆಂಬ ಕಾರಣ
ಯಿನಿಸನೊಡ್ಡಯಿಸಿದೆನು ನೀ ಸುಖಿಯಾಗು ಹೋಗೆಂದ ॥ ೨೦

ಬಂದರೊಳ್ಳಿತು ಬಾರದಿದ್ದಡೆ
ಕಂದ ಕೇಳೈ ಮಧುರ ವಚನದಿ
ಮಂದಮತಿಯನು ತಿಳುಹಿ ತಮ್ಮಂದಿರಿಗೆ ರಾಜ್ಯವನು
ಇಂದು ಕೊಡಿಸುವುದುಚಿತ ಸಂಪ್ರತಿ
ಗಿಂದು ಸೇರಿಸು ನಿನ್ನ ಮಾತನು
ಹಿಂದುಗಳೆಯನು ಕೌರವೇಶ್ವರನೆಂದನಸುರಾರಿ ॥ ೨೧

ಮಸೆದುದಿತ್ತಂಡಕ್ಕೆ ಮತ್ಸರ
ವಸಮಸಂಗರರೀಗ ಸಂಧಿಯ
ನುಸಿರಿದಡೆ ಮನಗಾಣನೇ ಕೌರವಮಹೀಶ್ವರನು
ವಿಸಸನದ ಕಟ್ಟಾಳು ಮಂತ್ರವ
ನೆಸಗಲಾಗದು ತನ್ನ ವೀರಕೆ
ಮಸುಳಹುದು ಮುರವೈರಿ ಸಂಧಿಯನಱಿಯೆ ನಾನೆಂದ ॥ ೨೨

ಕಳುಹಬೇಹುದು ದೇವ ದಿನಪತಿ
ಯಿಳಿದನಪರಾಂಬುಧಿಗೆ ಸಂಪ್ರತಿ
ಯಳಿದ ಹೊತ್ತಿಂದೀಗ ನೆಟ್ಟಗೆ ನೀವು ಪಾಂಡವರು
ಹುಲುಸರವಿ ಹಾವಹುದು ಹುತ್ತಿನ
ಬಳಿಯಲಿರಲಜ್ಞರಿಗೆ ಹಿಸುಣರ
ಬಳಕೆ ಹೊಗುವುದು ಕಳುಹಬೇಕೆಂದಂಘ್ರಿಗೆಱಗಿದನು ॥ ೨೩

ಬೀಳುಕೊಂಡನು ಮನೆಗೆ ಬಂದು ವಿ
ಶಾಲಮತಿ ಚಿಂತಿಸಿದನಾ ಸಿರಿ
ಲೋಲ ಮಾಡಿದ ಮಂತ್ರ ಮನದಲಿ ನೆಟ್ಟು ಬೇರ್ವರಿಯೆ
ಕಾಳುಮಾಡಿದನಕಟ ಕುರುಪತಿ
ಬಾಳಲಱಿಯದೆ ಕೆಟ್ಟನೀ ಗೋ
ಪಾಲ ಬಱಿದೇ ಬಿಡನು ಜೀವವ ಕೊಳ್ಳದಿರನೆಂದ ॥ ೨೪

ವೀರ ರವಿಸುತನೊಂದು ದಿನ ರವಿ
ವಾರದಲಿ ಪರಿತೋಷಮಿಗೆ ಭಾ
ಗೀರಥಿಯ ತೀರದಲಿ ತಾತಂಗರ್ಘ್ಯವನು ಕೊಟ್ಟು

ಸೌರಮಂತ್ರವ ಜಪಿಸುತಿರಲಾ
ದಾರಿಯುದ ಸುರತರುವ ಕುಂತೀ
ನಾರಿ ಕಾಣಲು ಬಂದಳಾತ್ಮಜನಿದ್ದ ನದಿಗಾಗಿ ॥ ೨೫

ಬರಲು ತಾಯ್ಗಿದಿರಾಗಿ ರವಿಸುತ
ನಿರದೆ ಬಂದನು ದಂಡದಂತಿರೆ
ಚರಣದಲಿ ವೈಯಿಕ್ಕಲಾತನ ನೊಸಲ ನೆಗಹಿದಳು
ಬರಸೆಳೆದು ಬಿಗಿಯಪ್ಪಿದಳು ನೀ
ರುರವಣಿಸಿದುದು ನಯನದಲಿ ಸೆರೆ
ಕೊರಳಿಗೌಕಿದುದಳಲಿನಬುಧಿಯೊಳದ್ದಳಾ ಕುಂತಿ ॥ ೨೬

ಆ ಸಮಯದಲಿ ಗಂಗೆ ನಾರೀ
ವೇಷದಲಿ ನಡೆತಂದಳೆಲೆ ಕುಂ
ತೀಸತಿಯೆ ಕೈಯೆಡೆಯ ಕಂದನನೊಪ್ಪುಗೊಳು ನೀನು
ಈಸುದಿನವಿವನಾಗುಹೋಗಿನ
ಗಾಸಿಯನು ಸಲೆ ಕಾಯ್ದೆನೆನ್ನಯ
ಭಾಷೆ ಸಂದುದೆನುತ್ತ ತಾಯಿಗೆ ಕೊಟ್ಟಳಾತ್ಮಜನ ॥ ೨೭

ಇರಲಿರಲು ರವಿ ಬಂದನೆಕ್ಕಟಿ
ಕರೆದನೀತನ ಕಿವಿಯೊಳೆಲ್ಲವ
ನೊರೆದ ನಿನಗೆಲೆ ಮಗನೆ ಕುಂತೀದೇವಿ ತಾಯಹುದು
ಮುರಹರನ ಮತದಿಂದ ನಿನ್ನಯ
ಸರಳ ಬೇಡಲು ಬಂದಳಿಂದಾ
ಹರಿಗೆ ಕವಚವನಿತ್ತವೊಲು ಮರುಳಾಗಬೇಡೆಂದ ॥ ೨೮

ಬೆಸಸಿತಕ್ಕೆ ಹಸಾದವೆಂದನು
ಬಿಸಜಬಂಧುವ ಕಳುಹಿದನು ಮ
ನ್ನಿಸಿದನಿತ್ತಲು ಮಾತೆಯುಸು ಭಯಭರಿತ ಭಕ್ತಿಯಲಿ
ಒಸೆದು ಬಿಜಯಂಗೈದ ಹದನೇ
ನುಸಿರಬೇಹುದು ತಾಯೆಯೆನೆ ಶೋ
ಕಿಸುತ ನುಡಿದಳು ಕುಂತಿ ಕರ್ಣನ ಸೆಳೆದು ಬಿಗಿಯಪ್ಪಿ ॥ ೨೯

ಮಗನೆ ತಮ್ಮಂದಿರನು ಪಾಲಿಸು
ವಿಗಡತನವನು ಮಾಣು ಪರರೋ
ಲಗವ ನೀ ಮಾಡುವರೆ ನಿನಗಿತ್ತಂಡವನುಜರಲೆ
ಸೊಗಸು ನಾನೆಂದುದನು ಹಿಸುಣರ
ಹಗೆನುಡಿಯ ಕೇಳದಿರು ಪಟ್ಟವ
ಬಿಗಿಸಿಕೊಳು ಸಲಿಸೆನ್ನವಚನವನೆಂದಳಾ ಕುಂತಿ ॥ ೩೦

ತಾಯಹುದು ನಾ ಬಲ್ಲೆನಿದನಾ
ಕಾಯಜನ ಪಿತನಱುಹೆ ತಿಳಿದೆನು
ರಾಯರಿತ್ತಂಡಕ್ಕೆ ಪಟ್ಟದ ಹಿರಿಯ ತಾನಹುದು
ರಾಯನೆನ್ನನು ನಚ್ಚಿ ಹೊರೆದನು
ಸಾಯಲಳುಕುವೆನೇ ಸುಡೇತಱಿ
ದೀ ಇಳೆಯ ಬಾಳಿಕೆ ಕೃತಘ್ನರಿಗಿಲ್ಲ ಗತಿಯೆಂದ ॥ ೩೧

ಮಕ್ಕಳೈವರಿಗಾನು ಹಿರಿಯನು
ತಕ್ಕ ಮಾತೆಲೆ ತಾಯೆ ಸಂದೇ
ಹಕ್ಕೆ ನೆಲೆಯಿಲ್ಲದು ನಿಲಲಿ ಧಾರಿಣಿಯ ಬಯಸುವಡೆ
ತಕ್ಕುದೇ ದಾತಾರನರಸಿಯೊ
ಳೊಕ್ಕತನವಿರಲಾರು ಮೆಚ್ಚುವ
ರಕ್ಕ ಹೇಳೌ ಹೇಸಳೇ ಜಯಲಕ್ಷ್ಮಿ ತನಗೆಂದ ॥ ೩೨

ಇಂದು ನೀವಱುಹಿದ ಬಳಿಕ ರವಿ
ನಂದನನು ಎಂದಱಿದೆನಲ್ಲದೆ
ಹಿಂದೆ ದುರ್ಯೋಧನನದಾವುದ ನೋಡಿ ಸಲಹಿದನು
ಬಂದು ಪಾಂಡವರೊಡನೆ ಕೂಡಿದ
ಡಿಂದು ಬಹುದಪಕೀರ್ತಿ ನಿಮ್ಮಡಿ
ಬಂದ ಕಾರ್ಯವ ಬೆಸಸಿ ಬೇಗಮೊಳೆಂದನಾ ಕರ್ಣ ॥ ೩೩

ಆದೊಡೈವರು ಮಕ್ಕಳನು ತಲೆ
ಗಾದು ತೋಱಿಸು ಕಂದ ನಿನಗಿ
ನ್ನೀ ದುರಾಗ್ರಹ ಒಪ್ಪುವುದೆ ಕೌರವನ ಸೇವೆಯಲಿ

ಹೋದ ಬಾಣವ ಮರಳಿ ತೊಡದಿರು
ಮಾದು ಕಳೆ ವೈರವನೆನಲ್ಕೆ ಹ
ಸಾದವೆಂದನು ಬೀಳುಕೊಂಡನು ಬಂದನರಮನೆಗೆ ॥ ೩೪

೯. ಕೌಂತೇಯರ ಸಮಗ್ರದ ಬೀಡು ಕುರುಭೂಮಿಯಲಿ

ಕೇಳು ಜನಮೇಜಯ ಧರಿತ್ರೀ
ಪಾಲ ಸಂಧಿಯ ಮುಱಿದು ಲಕ್ಷ್ಮೀ
ಲೋಲನೈತರುತಿವರ ಹೊರೆಗಟ್ಟಿದನು ಸಾತ್ಯಕಿಯ
ಕೇಳಿದರು ಮುರಹರನ ಬರವನು
ಮೌಳಿಮಸ್ತಕದಖಿಳ ಧರಣೀ
ಪಾಲರಂದಿದಿರಾಗಿ ಬಂದರು ಸಕಲ ದಳಸಹಿತ ॥ ೧

ದೂರದಲಿ ದುಮ್ಮಾನಿಸಿದ ವದ
ನಾರವಿಂದವ ಕಂಡು ಸಂಧಿಗೆ
ಸೇರರವದಿರು ಬಲಿದುದಾಹವವೀತನಿರವಿನಲಿ
ಶೌರಿಗಾಯ್ತುಪಮಾನವಿದಲೇ
ಮಾರಿಗುತ್ಸವವೆನುತ ಬಂದನು
ಮಾರುತನ ಮಗನಸುರಮರ್ದನನಿಂಗಿತವನಱಿದು ॥ ೨

ದರುಶನವ ನೀಡಿದನು ಕೃಷ್ಣನ
ಚರಣದಲಿ ಮೈಯಿಕ್ಕಿದನು ಮಿ
ಕ್ಕರಸುಗಳು ದ್ರುಪದಾದಿನಾಯಕರೆಱಗಿದರು ಪದಕೆ
ಪರಮಬಾಂಧವರೆಲ್ಲ ಜೀವಂ
ತರೆ ನದೀಸುತ ವಿದುರ ಗುರು ಕೃಪ
ಗುರುತನುಜ ಧೃತರಾಷ್ಟ್ರರೆಂದನು ಧರ್ಮನಂದನನು ॥ ೩

ಭೂಮಿಪತಿ ನಿಜಬಾಂಧವರು ಸು
ಕ್ಷೇಮಿಗಳು ತಾವೆಲ್ಲ ನಿಮ್ಮಯ
ಕ್ಷೇಮ ಕುಶಲವ ಕೇಳಿದರು ಕಳುಹಿದರು ಹರಕೆಗಳ

ಆ ಮಹಾಸಂಗ್ರಾಮಮುಖದಲಿ
ತೋಮರದ ಕಾಣಿಕೆಗಳಲಿ
ಸುಪ್ರೇಮವನು ಬಳಸುವುದು ದುರ್ಯೋಧನನ ಮತವೆಂದ ॥ ೪

ಭೂಮಿಯೊಳಗರ್ಧವನು ಬೇಡಿದ
ಡಾ ಮಹಿಪ ನಿಮ್ಮೈವರಿಗೆ ಸಂ
ಗ್ರಾಮಭೂಮಿಯನೈದೆಕೊಟ್ಟನು ನಿಮ್ಮೊಳಪ್ರಿಯನೆ
ಸಾಮದಲಿ ಸೊಗಸಿಲ್ಲ ನೀವ್ ನಿ
ಸ್ಸೀಮರಾದಡೆ ಹರಿವುದಿಂದು
ದ್ದಾಮ ಕುರುಭೂಮಿಯಲಿ ಬಲಸಹಿತವರ ಪತಿಕರಿಸಿ ॥ ೫

ಮುನಿದಡೆಯು ನಿಮ್ಮೊಳಗೆ ನೀವೇ
ಮನಕತವ ಮಾಡುವಿರಿ ಅಗ್ರಜ
ರನುಜರಲಿ ಕದಡಾದಡುಪಶಮಿಸುವುದು ನಿಮ್ಮೊಳಗೆ
ಎನಗೆ ನಿಮ್ಮಯ ದೂಸಱಿಂದಾ
ಯ್ತಿನಿತು ಸಭೆಯಲಿ ಮಾನಹಾನಿಗ
ಳೆನಲು ನೊಂದನು ಧರ್ಮಸುತ ತಾ ನಗುತಲಿಂತೆಂದ ॥ ೬

ಮುಳಿದು ಸುರಗಿಯನುಗಿದು ಗಗನವ
ನಿಲುಕಿ ಮಾಡುವುದೇನು ನಿಮ್ಮಡಿ
ಗಳಿಗೆ ತಪ್ಪಿದ ತರಳರಖಿಳವ್ಯಾಪ್ತಿಯೇಗುವುದು
ಖಳರು ಮಾಡಿದ ಖತಿಯನೆನ್ನಲಿ
ತಿಳಿದು ಮಱೆಯಲು ಬೇಕು ಕರುಣಾ
ಜಲದಿ ನೀವೆಂದಂಘ್ರಿಗಳ ಹಿಡಿದನು ಯುಧಿಷ್ಠಿರನು ॥ ೭

ಬಱಿದೆ ಕಾಡದಿರೇಳು ಮನದಲಿ
ಮಱೆದೆವಾಗಳೆ ಕೌರವರು ಮುಂ
ದಱಿಯದವಗಡಿಸಿದರು ಹೋಗಲಿಯೆಮ್ಮ ದೂಱೇಕೆ
ನೆಱೆವಣಿಗೆಯುಂಟಾದಡಿಂದಿನ
ಮಱುದಿವಸ ಸಂಗ್ರಾಮ ಸ್ಥಿರಿಸ
ಲಱೆಯರವದಿರು ನಡೆ ಕುರುಕ್ಷೇತ್ರಕ್ಕೆ ನೀನೆಂದ ॥ ೮

ಹಾನಿಯನು ತಾ ಹೊತ್ತು ಭೃತ್ಯರ
ಮಾನವನು ಪತಿಕರಿಸಬೇಹುದು
ತಾನೊಡೆಯನಾದಂಗೆ ಗುಣವೆನ್ನೊಡೆಯ ನೀನಾಗಿ
ಮಾನಭಂಗವ ಧರಿಸಿಯೆಮ್ಮಭಿ
ಮಾನವನು ನೀ ನಿಲಿಸಿದೈ ಸಂ
ಧಾನವನು ಸೇರಿಸದೆ ಸಲಹಿದೆಯೆಂದನಾ ಭೀಮ ॥ ೯

ಮಾರಿಯಱಕೆಗಳಡಗದಂತಕ
ನೂರು ತುಂಬಡೆ ಶಾಕಿನಿಯರೊಡ
ಲೋರೆ ನೆನೆಯದೆ ಡಾಕಿನಿಯರಿಗೆ ಡೊಳ್ಳು ಸಾಲಿಡದೆ
ಕೌರವನ ತನಿಗರುಳ ದಂಡೆಯ
ತೋರಣದ ಬಾಗಿಲಲಿ ವಿಭವದಿ
ವಾರಣಾಹ್ವಯ ನಗರಿಯನು ಹೊಗದಿಹೆನೆ ನೋಡೆಂದ ॥ ೧೦

ತೋಱು ನಡೆ ಗಜಬಜಿಸಬೇಡಿ
ನ್ನಾಱು ತಿಂಗಳೆ ನಾಳೆ ಪಯಣಕೆ
ಸಾಱಿಸೇಳೆಂದೆನುತುಪಪ್ಲವ್ಯಕ್ಕೆ ನಡೆತಂದು
ಬೇಱೆಬೇಱವನೀಶರಿಗೆ ಮಣಿ
ಹಾಱರನು ಕಳುಹಿದನು ಕೃಷ್ಣನ
ದೂಱು ಬರಲಳವಡಿಸಿದರು ಸಂಗ್ರಾಮ ಸಾಧನವ ॥ ೧೧

ಜೋಳಿ ಹರಿದುದು ದೆಸೆದೆಸೆಯ ಭೂ
ಪಾಲರಿಗೆ ರಾಯಸದ ಹದನನು
ಕೇಳಿದಾಗಲೆ ಕವಿದು ಬಂದರು ತಮ್ಮ ದಳಸಹಿತ
ಸೂಳವಿಸಿದವು ಸನ್ನೆಯಲಿ ನಿ
ಸ್ಸಾಳಸಂದಿನ ಮಱುದಿವಸ ವೈ
ಹಾಳಿಯಲಿ ಹೊಱವಂಟರನಿಬರು ದೈತ್ಯರಿಪುಸಹಿತ ॥ ೧೨

ವೀರ ಪಾರ್ಥಂಗಿರುಳು ಸೋತಂ
ಗಾರವರ್ಣನು ಗಗನಚರಪರಿ
ವಾರ ಬಹುಳದಿ ಬಂದು ಕಂಡನು ಕಲಿಯುಧಿಷ್ಠಿರನ

ಕೌರವೇಂದ್ರನನೊಯ್ದ ಸಮರಸು
ಧೀರ ಸಾಹಸಿ ಚಿತ್ರಸೇನನು
ದಾರಬಲದಲಿ ಬಂದು ಕಂಡನು ಮಿತ್ರಭಾವದಲಿ ॥ ೧೩

ಕಾರಿರುಳು ಪಟ್ಟಣಕೆ ಚಂದ್ರನ
ತೋರಣವ ಬಿಗಿದಂತೆ ದಾಡೆಗ
ಳೋರಣದ ಹೊಳಹುಗಳ ಹೊಗರಿಡುವೊಡಲ ಕಪ್ಪುಗಳ
ಭಾರಿದೇಹನು ಭಟಭಯಂಕರ
ತೋರಹತ್ತನು ದೈತ್ಯಮಯಪರಿ
ವಾರಬಹುಳದಿ ಬಂದು ಕಂಡನು ಕಲಿ ಘಟೋತ್ಕಚನು ॥ ೧೪

ಬಲದ ಡೆಖ್ಖಾಳವನು ನೋಡಿದ
ರೊಲವಿನಲಿ ನಿಜಸೇನೆಸಹಿತತಿ
ಬಲರುಪಪ್ಲವ್ಯಕ್ಕೆ ಬಂದರು ಹೊಕ್ಕರಾಲಯವ
ಬಳಿಕ ಸುಮುಹೂರ್ತದಲಿ ಹೊಱಗುಡಿ
ಗಳನು ಹೊಯಿಸಿದರಂದು ಯದುಕುಲ
ತಿಲಕ ಗದುಗಿನ ವೀರನಾರಾಯಣನ ನೇಮದಲಿ ॥ ೧೫

ಪರಿಮಿತಕೆ ತನ್ನಾಪ್ತ ಸಚಿವರ
ಕರಸಿಕೊಂಡನು ಕೃಷ್ಣರಾಯಂ
ಗರಸ ಬಿನ್ನಹ ಮಾಡಿದನು ನೃಪಕಾರ್ಯ ಸಂಗತಿಯ
ಧುರಕೆ ಸೇನಾನಾಥನಿಲ್ಲದೆ
ನೆರೆದ ಬಲ ಸಾಲಿಱಿಹೆ ಮುಱಿದಡೆ
ಹರೆವವೊಲು ಹುರುಳಿಲ್ಲ ದಳಪತಿಯಾವನಹನೆಂದ ॥ ೧೬

ದ್ರುಪದನಾಗಲಿಯೆಂದು ಕೆಲಬರು
ವಿಪುಳಬಲದ ವಿರಾಟನಾಗಲಿ
ನೃಪ ಶಿಖಂಡಿಯೆ ಎಂದು ಕೆಲಬರು ಭೀಮಸುತನೆಂದು
ಅಪರಿಮಿತ ಮತವಾಗೆ ಸಮರ
ವ್ಯಪಗತಾರಿ ಸುರೇಂದ್ರಸುತನೀ
ದ್ರುಪದಸುತ ಸೇನಾಧಿಪತಿಯಹುದೆಮ್ಮ ಮತವೆಂದ ॥ ೧೭

ಬಿಂಬವನು ಬೇಱಿರಿಸಿ ಬಹುಮತ
ವೆಂಬ ಬಿಸಿಲಲಿ ರಾಜನಯವೆಂ
ದೆಂಬ ಸ್ವೇದಿಲು ನಲವುಗೆಟ್ಟಿದೆ ಕೃಷ್ಣ ಹೇಳೆನಲು
ಎಂಬುದೇನಿನ್ನಿಲ್ಲಿ ಸುಭಟಕ
ದಂಬಕಧಿಪತಿತನಕೆ ಫಲುಗುಣ
ನೆಂಬ ಮಾತಿನ್ನಭಿಮತವು ಭೂಪಾಲ ಕೇಳೆಂದ ॥ ೧೮

ಕರಸಿ ಧೃಷ್ಟದ್ಯುಮ್ನನನು ಸಂ
ಗರಕೆ ಸೇನಾಪಟ್ಟವನು ವಿ
ಸ್ತರದಲಳವಡಿಸಿದರು ಸುಮುಹೂರ್ತದಿ ಸರಾಗದಲಿ
ಪುರದೊಳಗೆ ಗುಡಿ ನೆಗಹಿದವು ಭೂ
ಸುರರ ವಿಮಳಾಮ್ನಾಯರವ ವಿ
ಸ್ತರಿಸಲಳವಡಿಸಿದರು ಮಂಗಳ ವಿಹಿತ ವಸ್ತುಗಳ ॥ ೧೯

ಸೂಳವಿಸಿದವು ಕಟಕದಲಿ ನಿ
ಸ್ಸಾಳಕೋಟಿಗಳಳ್ಳಿಱಿಯೆ ಹೆ
ಗ್ಗಾಳೆಗಳು ಸಾಱಿದವು ಭಟರುಬ್ಬಟೆಯ ಬಿರುದುಗಳ
ಬಾಲಕಿಯರಾರತಿಯ ತಳಿಗೆಗ
ಳೋಳಿ ಸಂದಣಿಸಿದವು ವರ ಪಾಂ
ಚಾಲತನುಜಂಗೆಸಗಿದರು ಮೂರ್ಧಾಭಿಷೇಚನವ ॥ ೨೦

ದರುಶನವನಿತ್ತಖಿಳ ಧರಣೀ
ಶ್ವರರು ಕಂಡರು ಸೂತ ಮಾಗಧ
ವರ ವಿಬುಧ ವೈತಾಳಿಕರ ಕಾರ್ಪಣ್ಯವಡಗಿದವು
ಧುರಕೆ ಧೃಷ್ಟದ್ಯುಮ್ನನಾಜ್ಞೆಯ
ಲಿರವು ನಿಮಗೆಂದೆನುತ ಭೂಪಾ
ಲರ ನಿವಾಸದೊಳಂದು ಮಿಗೆ ಹೊಯಿಸಿದರು ಡಂಗುರವ ॥ ೨೧

ರೂಢಿಸಿದ ಸುಮುಹೂರ್ತದಲಿ ಹೊಱ
ಬೀಡ ಬಿಟ್ಟರು ರಣಕೆ ಪಯಣವ
ಮಾಡಲೋಸುಗ ಸಾಱಿದರು ನೃಪಪಾಳಯಂಗಳಲಿ

ಕೂಡಿತಾಹವ ಸೈನ್ಯಸಾಗರ
ನೀಡಿಜಿಂದು ನಡೆಗೊಂಡುದುದಧಿಯ
ನೇಡಿಸುವ ಜೋಡಿಸಿದ ಜೋಕೆಯ ಘನರವಂಗಳಲಿ ॥ ೨೨

ಹರಿಯಚರಣಕ್ಕೆರಗಿ ವಿಜಯದ
ಹರಕೆಗಳ ಕೈಕೊಂಡು ರಥವನು
ತುರಗ ಗಜವನು ಗಡಣ ವಿಗಲೇಱಿದರು ಪಾಂಡವರು
ಗರುಡಸಿಂಧವನೆತ್ತಿ ದಾರುಕ
ನಿರದೆ ರಥವನು ಸುಳಿಸೆ ಯದುವೀ
ಹರದ ಮಧ್ಯದಲಸುರಧೂಳೀಪಟ್ಟ ಹೊರವಂಟ ॥ ೨೩

ಮುಂದೆ ಹರಿರಥ ಹರಿವರೂಥದ
ಹಿಂದೆ ಧರ್ಮಜನೆಡಬಲದಲಾ
ನಂದನರು ಬೆಂಭಾಗದಲಿ ಭೀಮಾರ್ಜುನರು ಬರಲು
ಸಂದಣಿಸಿದುದು ಸೇನೆ ಸೈರಿಸೆ
ನಿಂದನಾದರೆ ಫಣಿಗೆ ಸರಿಯಿ
ಲ್ಲೆಂದು ಸುರಕುಲವುಲಿಯೆ ನಡೆದರು ಪಾಂಡುನಂದನರು ॥ ೨೪

ಅರರೆ ನಡೆದುದು ರಾಯಕಟಕದ
ತೆರಳಿಕೆಯ ಸಂರಂಭವಿಳೆಗ
ಚ್ಚರಿಯ ಬೀಱಿತು ವರಕುರುಕ್ಷೇತ್ರಕ್ಕೆ ಗಮಿಸಿದರು
ಅರಿವಿಜಯಿಗಳು ನೆಲನ ಗೆಲಿದರು
ಹರಿಯ ನೇಮದಲೆಡೆಯಱಿದು ಬಲ
ಶರಧಿ ಬಿಟ್ಟುದು ಕಳನ ಪಶ್ಚಿಮದೆಸೆಯ ಪಸರದಲಿ ॥ ೨೫

ಸೂಳವಿಸಿದವು ಸನ್ನೆಯಲಿ ನಿ
ಸ್ಸಾಳ ಕೋಟಿಗಳೊಜಲಿದವು ಕಿಱು
ಗಾಳೆ ಸಂಚವಲೂದಿದವು ಮಾಣಿಸಿದವಬ್ಬರವ
ಕೇಳು ಜನಮೇಜಯಧರಿತ್ರೀ
ಪಾಲ ಮಾರ್ಗಶ್ರಮದೆ ಸೇನಾ
ಜಾಲ ಸೈವೆಱಗಾಗಿ ನಿಂದುದು ಸಮರಭೂಮಿಯಲಿ ॥ ೨೬

ಮೇಲು ಗುಡಿಗಳ ಭದ್ರದುಪ್ಪರ
ಸಾಲೆಗಳ ಮಂಡವಿಗೆಗಳ ಬ
ಲ್ಲಾಳದಟ್ಟಿಯ ಚಂಪೆಯದ ಗೂಡಾರದೋವರಿಯ
ಸಾಲಕಳಶದ ಪಟ್ಟವಸ್ತ್ರದ
ಮೇಲು ಗಟ್ಟಿನ ರಚನೆಯಲಿ ರಾ
ಜಾಲಯಂಗಳ ರಚಿಸಿದರು ಕುಂತೀಕುಮಾರರಿಗೆ ॥ ೨೭

ಅರಮನೆಯ ಬಲದಲಿ ಮುರಾಂತಕ
ನರಮನೆಯದಱ ಕೆಲದಲರ್ಜುನ
ನಿರವು ಹಿಂದಣ ಭಾಗದಲಿ ನಕುಲಂಗೆ ಬೀಡಾರ
ಅರಿಭಯಂಕರ ಭೀಮಸೇನನ
ನಿರುಪಮಾಲಯವೆಡದ ದೆಸೆಯಲಿ
ಸರಿಸದಲಿ ಸೂತ್ರಿಸಿತು ಸಹದೇವಂಗೆ ನೃಪಭವನ ॥ ೨೮

ಎರಡು ಬಾಗಿಲ ಸೂತ್ರದಲಿ ವಿ
ಸ್ತರಿಸಿದಂಗಡಿ ಸೋಮವೀಧಿಯ
ತರಣಿವೀಧಿಯನವರವರ ಪಾಳಯಕೆ ಮುರಿವುಗಳ
ಸುರರು ಸೃಷ್ಟಿಸಬಾರದಿನ್ನುಳಿ
ದರಿಗೆ ಗೋಚರವಹುದೆ ಕೌಂತೇ
ಯರ ಸಮಗ್ರದ ಬೀಡು ಕುರುಭೂಮಿಯಲಿ ರಂಜಿಸಿತು ॥ ೨೯

ಬಲದ ಮುಂಗುಡಿ ಭೀಮನದು ಪಿಂ
ತಿಳಿಯೊಳಾತನ ಕಾಹು ಬೀಡಿನ
ವಳಯದಾರೈಕೆಗಳು ಸಾತ್ಯಕಿ ಪಾರ್ಥ ನಕುಲರಿಗೆ
ಬಲಮಹಾಂಬುಧಿಯೊಳಗಿರುಳು ಮೇ
ಲ್ವಳವರನು ಹೈಡಿಂಬಿ ಪಾಂಡವ
ರುಳಿವು ಗದುಗಿನ ವೀರನಾರಾಯಣನ ಸುಯಿಧಾನ ॥ ೩೦

ಶ್ರೀಮದಚಿಂತ್ಯ ಗದುಗಿನ ವೀರನಾರಾಯಣ ಚರಣಾರವಿಂದ ಮಕರಂದ ಮಧುಪಾನ
ಪರಿಪುಷ್ಪವಚಷ್ಪಟ್ಪದೀನಿಕಾಯ ಶ್ರೀಮತ್ಕುಮಾರವ್ಯಾಸಯೋಗೀಂದ್ರ
ವಿರಚಿತಮಪ್ಪ ಕರ್ಣಾಟಕಭಾರತಕಥಾಮಂಜರಿಯೋಳ್

ಉದ್ಯೋಗಪರ್ವ ಸಂಗ್ರಹಂ

ಸಮಾಪ್ತಂ

ಪೂರ್ವ ಕಥೆಗಳು

೧

'ವೈರೋಚನಿಯ ಪಡಿಹಾಱಿಕೆ'—೨-೩೪.
'ಕರೆದು ಮೂಱಡಿ ನೆಲನ ಧಾರೆಯ
ನೆಱೆದ ಬಲಿ ತಳಕಿಳಿದನು'—೭-೨೦.

ಪ್ರಹ್ಲಾದನ ಮೊಮ್ಮಗ ಬಲಿಚಕ್ರವರ್ತಿ. ಇವನು ವಿಶ್ವಜಿತ್ತೆಂಬ ಯಾಗಮಾಡಿ ಅಗ್ನಿಯಿಂದ ರಥ ಕುದುರೆ ಧ್ವಜಗಳನ್ನು, ತನ್ನ ಅಜ್ಜನಾದ ಪ್ರಹ್ಲಾದನಿಂದ ದಿವ್ಯವಾದ ಧನಸ್ಸು ಅಕ್ಷಯತೂಣೀರ (ಬತ್ತಳಿಕೆ)ಗಳನ್ನು ಪಡೆದುಕೊಂಡು ಇಂದ್ರನನ್ನು ಸೋಲಿಸಿ ಸ್ವರ್ಗವನ್ನು ವಶಪಡಿಸಿಕೊಂಡನು. ಇತ್ತ ದೇವತೆಗಳ ಮೊರೆಯನ್ನು ಕೇಳಿ ವಿಷ್ಣು ವಾಮನರೂಪದಿಂದ ಅದಿತಿಯಲ್ಲಿ ಅವತರಿಸಿ, ಉಪನಯನವಾದನಂತರ ನರ್ಮದಾ ತೀರದಲ್ಲಿ ಅಶ್ವಮೇಧಯಾಗವನ್ನು ಮಾಡುತ್ತಿದ್ದ ಬಲಿಯ ಬಳಿಗೆ ಬಂದು ಮೂರಡಿ ಭೂಮಿಯನ್ನು ಬೇಡಿದನು. ವಾಮನನ ರೂಪದಿಂದ ಮೋಹಿತನಾದ ಬಲಿ ಶುಕ್ರಾಚಾರ್ಯರು ಅಡ್ಡಿಪಡಿಸಿದರೂ ಅವನ ಬೇಡಿಕೆಗೆ ಮನ್ನಣೆ ಕೊಟ್ಟನು. ಆಗ ವಾಮನನು ತ್ರಿವಿಕ್ರಮನಾಗಿ ಬೆಳೆದು ಎರಡು ಅಡಿಗಳಿಂದ ಭೂಮಿ ಆಕಾಶಗಳನ್ನು ಅಳೆದು ಮೂರನೆಯ ಅಡಿಯನ್ನು ಬಲಿಯ ತಲೆಯ ಮೇಲಿಟ್ಟು ಅವನನ್ನು ಪಾತಾಳಕ್ಕೆ ಮೆಟ್ಟಿದನು. ಆ ಸಮಯದಲ್ಲಿ ತಾನು ಬಲಿಯ ಮನೆಯ ಬಾಗಿಲನ್ನು ಕಾಯುತ್ತಿದ್ದು ಪ್ರತಿದಿನವೂ ಆತನಿಗೆ ದರ್ಶನವನ್ನು ಕೊಡುವೆನೆಂದು ವಿಷ್ಣು ವರವಿತ್ತನು.

೨

'ಕಾದಿ ವೃತ್ರಾಸುರನ ಮುಱಿದಪ
ವಾದದಲಿ ಸಿರಿ ಹೋಗಿ ದುಃಖಿತ
ನಾದನಿಂದ್ರನು ಮತ್ತೆ ಬದುಕಿದ ಶಚಿಯ ದೆಸೆಯಿಂದ'—೩-೧೫.

'ಹಿಂದೆ ತ್ವಷ್ಟೃಪ್ರಜಾಪತಿಯು ಇಂದ್ರನಲ್ಲಿ ದ್ರೋಹ ಬುದ್ಧಿಯಿಂದ ತ್ರಿಶಿರಸನೆಂಬ ಮಗನನ್ನು ಪಡೆದನು. ಅವನು ತಪಸ್ಸಿನಿಂದ ಇಂದ್ರನ ಸ್ಥಾನವನ್ನು ಆಕ್ರಮಿಸಿಕೊಳ್ಳಬೇಕೆಂದು ಯತ್ನಿಸಿದನು. ಅಪ್ಸರೆಯರ ಮೂಲಕ ಅವನ ತಪಸ್ಸನ್ನು ಕೆಡಿಸುವುದು ಅಸಾಧ್ಯವಾಗಲು ಇಂದ್ರನು ಅವನನ್ನು ಕೊಂದನು. ಆಗ ತ್ವಷ್ಟೃವು ಇನ್ನೂ ಪ್ರಬಲನಾದ ವೃತ್ರನೆಂಬ ಮಗನನ್ನು ಪಡೆದನು. ಅವನ ಮುಂದೆ ಇಂದ್ರನು ನಿಲ್ಲಲಾರದೆ ಓಡಿ ಹೋಗಬೇಕಾಯಿತು. ಆಗ ದೇವತೆಗಳು ಅವನಿಗೂ ಇಂದ್ರನಿಗೂ ಸಂಧಿಮಾಡಿಸಿದರು. ಆದರೂ ಇಂದ್ರನು ಸಮಯ ಕಾಯುತ್ತಿದ್ದು ವೃತ್ರನು ಸಮುದ್ರದ ತೀರದಲ್ಲಿದ್ದಾಗ ಅದರ ನೊರೆಯಿಂದಲೇ ವೃತ್ರನನ್ನು ಕೊಂದುಬಿಟ್ಟನು.

ಇವರಿಬ್ಬರನ್ನೂ ಕೊಂದದ್ದರಿಂದ ಇಂದ್ರನನ್ನು ಬ್ರಹ್ಮಹತ್ಯೆಯು ಮುಟ್ಟಿಕೊಂಡಿತು. ಅವನು ನಾಚಿ ಮುಖ ತೋರಿಸಲಾರದೆ ತಲೆತಪ್ಪಿಸಿಕೊಂಡು ಹೋದನು.

ಆಗ ದೇವರ್ಷಿಗಳೂ ದೇವತೆಗಳೂ ಆಲೋಚಿಸಿ ನಹುಷನನ್ನು ತಮ್ಮ ಪಾಲಕನನ್ನಾಗಿ ಇಂದ್ರಪದವಿಯಲ್ಲಿ ನೇಮಿಸಿಕೊಂಡರು. ಕಾಲಕ್ರಮದಲ್ಲಿ ಅವನ ಬುದ್ಧಿಯು ಧರ್ಮದಿಂದ ಕಾಮಕ್ಕೆ ತಿರುಗಿತು. ಅಪ್ಸರ ಸ್ತ್ರೀಯರು ಸಾಲದೆ ಶಚೀದೇವಿಯ ಮೇಲೆ ಮನಸ್ಸು ಹೋಯಿತು. ಅವಳು ನಹುಷನನ್ನು ಕಂಡು ಸ್ವಲ್ಪ ಕಾಲಾವಕಾಶವನ್ನು ಕೇಳಿದಳು. ಈ ಮಧ್ಯೆ ದೇವತೆಗಳೆಲ್ಲರೂ ಇಂದ್ರನಿದ್ದ ಸ್ಥಳವನ್ನು ಕಂಡು ಹಿಡಿದು ಅವನಿಂದ ಅಶ್ವಮೇಧಯಾಗ ಮಾಡಿಸಲು ಅವನಿಗೆ ಹಿಡಿದಿದ್ದ ಬ್ರಹ್ಮೇತಿ ಹೋಯಿತು. ಆಗ ಶಚಿಯು ನಹುಷನನ್ನು ಕಂಡು ಅವನು ಸಪ್ತರ್ಷಿಗಳು ಹೊತ್ತ ಪಲ್ಲಕ್ಕಿಯಲ್ಲಿ ಬಂದರೆ ಅವನ ವಶಳಾಗುವೆನೆಂದು ಹೇಳಿದಳು. ಕಾಮಮೋಹಿತನಾದ ಅವನು ಅದೂ ಒಂದು ವೈಭವವೆಂದು ತಿಳಿದು ಹಾಗೆಯೇ ಮಾಡಿದನು. ಪಲ್ಲಕ್ಕಿಯಲ್ಲಿ ಕೂತು ಬರುತ್ತಿದ್ದಾಗ ಅವನ ಕಾಲು ಪಲ್ಲಕ್ಕಿಯನ್ನು ಹೊತ್ತಿದ್ದ ಅಗಸ್ತ್ಯನಿಗೆ ತಗಲಲು ಆ ಋಷಿಯು ನಹುಷನ ಪುಣ್ಯವೆಲ್ಲಾ ನಷ್ಟವಾಗಿ ಸ್ವರ್ಗದಿಂದ ಅವನು ಸರ್ಪವಾಗಿ ಬಿದ್ದುಹೋಗಲಿ ಎಂದು ಶಪಿಸಿದನು. ಕೂಡಲೇ, ಒಂದು ತಾವರೆ ದಂಟಿನಲ್ಲಿ ಅನುರೂಪನಾಗಿ ಅಡಗಿಕೊಂಡಿದ್ದ ದೇವೇಂದ್ರನನ್ನು ದೇವತೆಗಳು ಹುಡುಕಿ ಕರೆದುಕೊಂಡು ಬಂದು ಅವನ ಸ್ಥಾನದಲ್ಲಿ ನಿಲ್ಲಿಸಿದರು. ಆಮೇಲೆ ಅವನು ಶಚೀದೇವಿಯೊಡಗೂಡಿ ಮೊದಲಿನಂತೆ ಸಂತೋಷದಿಂದ ರಾಜ್ಯವನ್ನು ಪಾಲಿಸುತ್ತಿದ್ದನು.

—ವಚನಭಾರತ, ಉದ್ಯೋಗಪರ್ವ ೨೩೧-೨.

೩

'ಆ ಕಾ
ನನದೊಳಗೆ ಗಂಧರ್ವರಲಿ ಬಂ
ಧನವನು'—೪-೮.
'ಕೌರವೇಂದ್ರನನುಯ್ದ ಸಮರಸು
ಧೀರ ಸಾಹಸಿ ಚಿತ್ರಸೇನ' ೬—೧೩.

ಪಾಂಡವರು ದ್ವೈತವನದಲ್ಲಿ ವಾಸಮಾಡುತ್ತಿದ್ದಾಗ ತನ್ನ ವೈಭವವನ್ನು ಪಾಂಡವರಿಗೆ ತೋರಿಸಿ ಅವರ ಹೊಟ್ಟೆಯನ್ನು ಉರಿಸುವ ನೆಪದಿಂದ ದುರ್ಯೋಧನನು ಕರ್ಣ ಶಕುನಿಗಳೊಡನೆ ಘೋಷಯಾತ್ರೆಗೆ ಹೊರಟನು. ಆ ವನದಲ್ಲಿ ಬೀಡುಬಿಟ್ಟು ಕ್ರೀಡಿಸುತ್ತಿರುವಾಗ ಇವರಿಂದ ಅಲ್ಲಿದ್ದ ಗಂಧರ್ವರಿಗೆ ತುಂಬ ತೊಂದರೆಯುಂಟಾಯಿತು. ಆಗ ಕೌರವರಿಗೂ ಗಂಧರ್ವರಿಗೂ ನಡೆದ ಯುದ್ಧದಲ್ಲಿ ಚಿತ್ರಸೇನನು—ಅವನು ಇಂದ್ರನ ಅಪ್ಪಣೆಯಂತೆ ಅಲ್ಲಿಗೆ ಬಂದಿದ್ದನು—ದುರ್ಯೋಧನಾದಿಗಳನ್ನು ಹಿಂಗಟ್ಟು ಮುಂಗಟ್ಟುಗಳನ್ನು ಕಟ್ಟಿ ತೆಗೆದುಕೊಂಡು ಹೋದನು. ಆಗ ಭಾನುಮತಿ ಧರ್ಮರಾಜನಲ್ಲಿಗೆ ಬಂದು ಪತಿಭಿಕ್ಷೆಯನ್ನು ಬೇಡಲು, ಧರ್ಮರಾಜನು ಕೌರವನನ್ನು ಬಿಡಿಸಿಕೊಂಡು ಬರುವಂತೆ ಭೀಮನಿಗೆ ಅಪ್ಪಣೆ ಮಾಡಿದನು. ಭೀಮನು 'ನಾವು

ಮಾಡಬೇಕಾದ ಕೆಲಸವನ್ನು ಗಂಧರ್ವರು ಮಾಡಿದ ಹಾಗಾಯಿತು' ಎಂದು ಈ ಕಾರ್ಯಕ್ಕೆ ಒಪ್ಪಲಿಲ್ಲ. ಆಗ ಅರ್ಜುನನು ಗಂಧರ್ವರನ್ನು ಬೆನ್ನಟ್ಟಿ ಯುದ್ಧದಲ್ಲಿ ಅವರನ್ನು ಸೋಲಿಸಿ, ಚಿತ್ರಸೇನನಿಂದ ಕೌರವನನ್ನು ಬಿಡಿಸಿ ತಂದನು.

೪

'ಈ ಗೋಗ್ರಹಣದಲಿ ಮಾಡಿದ ಪಲಾಯನ'—೪-೮.

ಪಾಂಡವರು ವಿರಾಟನಗರದಲ್ಲಿದ್ದ ಸುಳಿವನ್ನು ತಿಳಿದ ದುರ್ಯೋಧನನು ಅವರ ಇರುವಿಕೆಯನ್ನು ಕಂಡುಹಿಡಿಯಲು ನಿಶ್ಚೈಸಿ ವಿರಾಟನ ಗೋವುಗಳನ್ನು ಹಿಡಿಯಲು ಮನಸ್ಸು ಮಾಡಿದನು. ಸುಶರ್ಮನು ದಕ್ಷಿಣ ದಿಕ್ಕಿನಲ್ಲಿ ಗೋವುಗಳನ್ನು ಹಿಡಿದನು. ಕೌರವನು ಭೀಷ್ಮ ದ್ರೋಣರೊಡನೆ ಉತ್ತರ ದಿಕ್ಕಿನಲ್ಲಿ ಹಸುಗಳನ್ನು ಹಿಡಿದನು. ಅರ್ಜುನನು ವಿರಾಟನ ಮಗನಾದ ಉತ್ತರನನ್ನು ಸಾರಥಿಯನ್ನಾಗಿ ಮಾಡಿಕೊಂಡು ಕೌರವನನ್ನು ಸೋಲಿಸಿ ಹಸುಗಳನ್ನು ಹಿಂದಿರುಗಿಸಿದನು. ಪ್ರಾಣ ರಕ್ಷಣೆಗಾಗಿ ಕೌರವನು ಸೇನೆಯೊಡನೆ ಪಲಾಯನ ಮಾಡಿದನು.

೫

'ವನಜಮುಖಿಯನು ಬಯಸಿದಡೆ ಬಿ
ಲ್ಲಿನಲಿ ಬಡಿವಡೆದುದನು ಕೌರವ
ಜನಪ ಮಱೆದಿರಲಾಗದು'—೪-೮.

'ಒಂದು ದಿನ ಧರ್ಮರಾಜನಿಗೆ ದ್ವೈತವನದ ಮೃಗಗಳೆಲ್ಲವೂ ಬಂದು ತಮ್ಮನ್ನು ಕೊಲ್ಲಬೇಡವೆಂದು ಬೇಡಿಕೊಂಡಹಾಗೆ ಕನಸಾಯಿತಂತೆ. ಆದ್ದರಿಂದ ಪಾಂಡವರು ಅದನ್ನು ಬಿಟ್ಟು ಮತ್ತೆ ಕಾಮ್ಯಕವನಕ್ಕೇ ಹೋದರು. ಅಲ್ಲಿ ಅವರೆಲ್ಲರೂ ಬೇಟೆಗೆ ಹೋಗಿದ್ದಾಗ, ಸೌವೀರ ಸಿಂಧು ದೇಶಗಳ ರಾಜನಾದ ಜಯದ್ರಥನು ಆ ಮಾರ್ಗ ವಾಗಿ ಹೋಗುತ್ತ ಒಬ್ಬಳೇ ಇದ್ದ ದ್ರೌಪದಿಯನ್ನು ಕಂಡು ಮೋಹಿಸಿ ಬಲಾತ್ಕಾರ ವಾಗಿ ಅವಳನ್ನು ತನ್ನ ರಥದ ಮೇಲೆ ಕೂರಿಸಿಕೊಂಡು ಹೋದನು. ಅಷ್ಟರಲ್ಲಿಯೇ ಪಾಂಡವರು ಬಂದು ಅವನನ್ನು ಅಟ್ಟಿಸಿಕೊಂಡು ಹೋಗಲು, ಅವನು ದ್ರೌಪದಿ ಯನ್ನು ಬಿಟ್ಟುಹೋದನು. ಭೀಮಾರ್ಜುನರು ಬಿಡದೆ ಅವನನ್ನು ಹಿಡಿದು ಹಣ್ಣು ಗಾಯಿ ನೀರುಗಾಯಿಮಾಡಿ ಅವಮಾನಗೊಳಿಸಿ, ಹೋದ ಕಡೆಯಲ್ಲಿ ಅವನು ತಾನು ಪಾಂಡವರ ದಾಸನೆಂದು ಹೇಳಿಕೊಳ್ಳಬೇಕು ಎಂದು ಮಾತು ತೆಗೆದುಕೊಂಡು, ಬಿಟ್ಟರು. "ಅವನು ಎಷ್ಟಾದರೂ ನಮ್ಮವನು; ದುಶ್ಶಳೆಯ ಗಂಡ! ಅವನ ಜೀವ ತೆಗೆಯಬೇಡಿ!" ಎಂದು ಧರ್ಮರಾಯನು ಅಡ್ಡಿಬಂದದ್ದರಿಂದ ಅವನು ಜೀವ ಸಹಿತ ಉಳಿದುಕೊಂಡನು.'

—ವಚನಭಾರತ, ಅರಣ್ಯಪರ್ವ ೧೬೬.

೬

'ಕುಂಜರನ ಮೊಱಗೇಳಿ ಸಲಹಿದ ದೇವ'—೬-೩೪.

ಇಂದ್ರದ್ಯುಮ್ನನು ಪಾಂಡ್ಯದೇಶದ ಅರಸು. ವಿಷ್ಣುಭಕ್ತನಾದ ಈತನು ಒಮ್ಮೆ ದೇವತಾ ಪೂಜೆಯಲ್ಲಿ ಮಗ್ನನಾಗಿರಲು ಅರಮನೆಗೆ ಅಗಸ್ತ್ಯರು ಬಂದರೂ ಅವರನ್ನು ಗೌರವಿಸಲಿಲ್ಲ. ಆದ್ದರಿಂದ ಕೋಪಗೊಂಡ ಮುನಿಗಳು ಆನೆಯಾಗೆಂದು ಇವನಿಗೆ ಶಾಪ ಕೊಟ್ಟರು. ಆನೆಯ ಹುಟ್ಟನ್ನು ಪಡೆದ ದೊರೆ ಒಮ್ಮೆ ಕೊಳದಲ್ಲಿ ನೀರನ್ನು ಕುಡಿಯುತ್ತಿದ್ದಾಗ ಮೊಸಳೆಯೊಂದು ಆನೆಯ ಕಾಲನ್ನು ಹಿಡಿಯಿತು. ಆಗ ಪೂರ್ವಜನ್ಮ ಸಂಸ್ಕಾರದಿಂದ ವಿಷ್ಣುವನ್ನು ಇವನು ಮರೆಹೊಗಲಾಗಿ, ವಿಷ್ಣು ಪ್ರತ್ಯಕ್ಷನಾಗಿ ಮೊಸಳೆಯನ್ನು ಕೊಲ್ಲಲು ಇವನು ಶಾಪದಿಂದ ಬಿಡುಗಡೆ ಹೊಂದಿದನು.

೭

'ಅಂಜಿದಸುರನ ಕಾಯ್ದು ಬಂದನು'—೬-೩೪.

ಸನಕಾದಿಗಳ ಶಾಪದಿಂದ ವೈಕುಂಠದ ದ್ವಾರಪಾಲಕರಾದ ಜಯ ವಿಜಯರು ಹಿರಣ್ಯಾಕ್ಷ, ಹಿರಣ್ಯಕಶಿಪುಗಳೆಂಬ ರಾಕ್ಷಸರಾಗಿ ಹುಟ್ಟಿದರು. ಮಹಾವಿಷ್ಣು ವರಾಹ ರೂಪದಿಂದ ಹಿರಣ್ಯಾಕ್ಷನನ್ನು ಕೊಂದನು. ಹಿರಣ್ಯಕಶಿಪುವಿನ ಮಗ ಪ್ರಹ್ಲಾದ. ವಿಷ್ಣುಭಕ್ತನಾದ ಇವನನ್ನು ತಂದೆಯು ನಾನಾ ವಿಧವಾಗಿ ಹಿಂಸಿಸಲು, ಅವನನ್ನು ಕಾಪಾಡುವುದಕ್ಕಾಗಿ ಮಹಾವಿಷ್ಣು ನರಸಿಂಹನ ಅವತಾರಮಾಡಿ ಹಿರಣ್ಯಕಶಿಪುವನ್ನು ಕೊಂದನು.

೮

'ನಿನ್ನಯ ವರಜನನಿಗಾದಿಯಲಿ ಗಂಡನದಾರು ?'—೬-೪೬.

ಗಾಂಧಾರಿಗೆ ವೈಧವ್ಯಯೋಗವಿದೆಯೆಂದು ಜ್ಯೋತಿಷ್ಕರು ಹೇಳಿದ್ದರಂತೆ. ಅದಕ್ಕಾಗಿ ಮೊದಲು ಆಕೆಯನ್ನು ಒಂದು ಗಂಡಾಡಿಗೆ ಮದುವೆಮಾಡಿ ಆ ಬಳಿಕ ಅದನ್ನು ಕೊಂದು ಧೃತರಾಷ್ಟ್ರನಿಗೆ ಆಕೆಯನ್ನು ಲಗ್ನಮಾಡಿದರು. ಆದ್ದರಿಂದಲೇ 'ನೀನಲೆ ಅಜಪುತ್ರ ಕೇಳ್' ಎಂದು ವಿದುರನು ಕೌರವನಿಗೆ ಹೇಳಿದ್ದು. ಕುಮಾರವ್ಯಾಸನಿಗೆ ಈ ಕಥೆಯ ಆಕರ ಎಲ್ಲಿ ದೊರೆಯಿತೊ ಗೊತ್ತಿಲ್ಲ.

೯

'ವೈ

ದೇಹಿಯನು ಸೆಱಗೆಯ್ದ ಸ್ವಾಮಿ

ದ್ರೋಹಿ'—೭-೧೪.

'ರಾಮನು ಅಬಲೆಗೆ ಕುದಿದ ಬಲು ಸಂ

ಗ್ರಾಮ'—೫-೧೭.

ತಂದೆಯ ಮಾತನ್ನು ನೆರವೇರಿಸಲು ಶ್ರೀರಾಮನು ಸೀತಾಲಕ್ಷ್ಮಣರೊಡನೆ ದಂಡಕಾರಣ್ಯದಲ್ಲಿ ಪಂಚವಟಿಯೆಂಬ ಸ್ಥಳದಲ್ಲಿ ವಾಸಮಾಡುತ್ತಿದ್ದನು. ಖರದೂಷಣರ ವಧೆಯ ಸೇಡನ್ನು ತೀರಿಸಿಕೊಳ್ಳಲು ಬಂದ ಲಂಕೇಶ್ವರನಾದ ರಾವಣನು ಸೀತೆಯನ್ನು ನೋಡಿ ಮೋಹಗೊಂಡು ಆಕೆಯನ್ನು ಲಂಕೆಗೆ ಕದ್ದೊಯ್ದನು. ಶ್ರೀರಾಮನು ತನ್ನ ಪತ್ನಿಯಾದ ಸೀತೆಗಾಗಿ ಬಹುವಾಗಿ ಶೋಕಿಸಿ ಕೊನೆಗೆ ಕಪಿಗಳ ಸಹಾಯದಿಂದ ರಾವಣನನ್ನು ಕೊಂದು ಆಕೆಯ ಸೆರೆಯನ್ನು ಬಿಡಿಸಿ ಅವಳನ್ನು ಕೂಡಿದನು.

೧೦

'ವೀರ ಪಾರ್ಥಂಗಿರುಳು ಸೋತಂ ಗಾರವರ್ಮ'—೯-೧೩.

ದ್ರೌಪದಿಯ ಸ್ವಯಂವರಕ್ಕಾಗಿ ಪಾಂಡವರು ಏಕಚಕ್ರನಗರದಿಂದ ಪಾಂಚಾಲ ನಗರಿಗೆ ಹೋಗುತ್ತಿದ್ದಾಗ ದಾರಿಯಲ್ಲಿ ಕುಬೇರನ ಆಪ್ತಮಿತ್ರನಾದ ಅಂಗಾರವರ್ಮ (ಪರ್ಣ)ನು ತನ್ನ ಹೆಂಡತಿಯಾದ ಕುಂಭೀನಸಿಯೊಡನೆ ರಾತ್ರಿಯವೇಳೆ ಪರಿವಾರ ಸಮೇತನಾಗಿ ಕ್ರೀಡಿಸುತ್ತಿದ್ದನು. ಪಾಂಡವರನ್ನು ಇವನು ಅಡ್ಡಗಿಸಲು, ಅರ್ಜುನನು ಈ ಗಂಧರ್ವನನ್ನು ಸೋಲಿಸಿದನು. ಸೋತ ಅಂಗಾರವರ್ಮನು ಅರ್ಜುನನಿಗೆ ಶರಣಾಗತನಾಗಿ ಅವನಿಗೆ ಚೌಕ್ಷುಷೀವಿದ್ಯೆ(ಸಂಮೋಹನಾಸ್ತ್ರ)ಯನ್ನು ಉಪದೇಶಿಸಿ ಹೊರಟುಹೋದನು. ಪಾಂಡವರ ರಾಜಸೂಯಯಾಗ ಸಮಯದಲ್ಲಿ ಅರ್ಜುನನಿಗೆ ಅನೇಕ ದಿವ್ಯಾಶ್ವಗಳನ್ನು ಕೊಟ್ಟನು. ಆ ಗಂಧರ್ವನೇ ಈಗ ಪಾಂಡವರಿಗೆ ಸಹಾಯಕನಾಗಿ ಬಂದನು.

ಶಬ್ದಕೋಶ

[ಮೊದಲನೆಯ ಸಂಖ್ಯೆ ಸಂಧಿಯನ್ನೂ, ಎರಡನೆಯದು ಪದ್ಯವನ್ನೂ ಸೂಚಿಸುತ್ತದೆ. ಸಂ. ಎಂದರೆ ಸಂಸ್ಕೃತ, ಧಾ. ಎಂದರೆ ಧಾತು ಎಂದರ್ಥ.]

ಅ

ಅಕ್ಕಜ	೩	೪	ಆಶ್ಚರ್ಯ
ಅಕ್ಕರ	೫	೨೩	ಅಕ್ಷರ (ಸಂ)
ಅಗ್ಗ	೩	೨	ಅಗ್ರ (ಸಂ) ಶ್ರೇಷ್ಠ
ಅಗ್ಗಳ	೩	೭	ಶ್ರೇಷ್ಠ
ಅಗ್ಗಳಿಕೆ	೧	೪	ಅತಿಶಯ, ಹಿರಿಮೆ
ಅಗಡು	೫	೫	ತುಂಟು, ದಾಷ್ಟ್ಯ
ಅಗಧರ	೨	೧೪	ಬೆಟ್ಟವನ್ನು ಎತ್ತಿದವನು, ಕೃಷ್ಣ
ಅಘ	೬	೨೫	ಪಾಪ
ಅಚಲ	೬	೩೯	ಬೆಟ್ಟ
ಅಚ್ಚರಿ	೯	೨೯	ಆಶ್ಚರ್ಯ (ಸಂ)
ಅಟ್ಟು	೨	೫	ದೂತನನ್ನು ಕಳುಹು
ಅಡಕಿಲು	೬	೩	ಒಂದರಮೇಲೆ ಒಂದು ಪೇರಿಸಿದ್ದು
ಅಡಗು	೮	೧೮	ಮಾಂಸ
ಅಡಹಾಯ್	೨	೧೩	ಅಡ್ಡಹಾಯಿ
ಅಧ್ರುವ	೭	೧	ಸ್ಥಿರವಲ್ಲದ, ಅಶಾಶ್ವತ
ಅನಿಮಿಷ	೬	೩೨	ರೆಪ್ಪೆಹೊಡೆಯದವನು, ದೇವತೆ
ಅನಿಲಜ	೫	೧೪	ವಾಯುಪುತ್ರ, ಭೀಮ
ಅನುಪಮಿತ	೨	೩೧	ಹೋಲಿಕೆಯಿಲ್ಲದ, ಅತಿಶಯವಾದ
ಅನುವು	೨	೨೩	ನಿರ್ಧಾರ
ಅನ್ನೆಬರ	೨	೨೦	ಅಷ್ಟರವರೆಗೆ
ಅಪದೆಸೆ	೮	೧೨	ಕೀಳುಸ್ಥಿತಿ
ಅಪ್ರತಿಮ	೬	೮	ಹೋಲಿಕೆಯಿಲ್ಲದ
ಅಪರ + ಅಂಬುಧಿ	೮	೩೩	ಪಶ್ಚಿಮ ಸಮುದ್ರ
ಅಭಿಲಾಷೆ	೫	೧೭	ಆಶೆ
ಅಭ್ರ	೫	೩೦	ಮೇಘ
ಅಭ್ಯುದಯ	೫	೨೭	ಏಳಿಗೆ
ಅಮಾತ್ಯ	೭	೨	ಮಂತ್ರಿ

ಅಮಾನ್ಯ	೨	೧೦	ಮನ್ನಣೆಗೆ ಅನರ್ಹ
ಅಮ್ಮು	೨	೧೫	ಸಮರ್ಥನಾಗು
ಅರಲು	೭	೪೭	ಹೂವು
ಅರವಿಂದ	೮	೨	ಕಮಲ
ಅರಾತಿ	೨	೧	ಶತ್ರು
ಅರಿ	೨	೧೦	ಶತ್ರು
ಅರಿ (ಧಾ)	೮	೧೩	ಕತ್ತರಿಸು
ಅರಿದು	೫	೧೯	ಅಸಾಧ್ಯ
ಅರುಣಜಲ	೮	೧೮	ಕೆನ್ನೀರು, ರಕ್ತ
ಅರೆಯಱಿತ	೭	೧೩	ಅರ್ಧಜ್ಞಾನ
ಅಱಕೆ	೮	೧೦	ಬಾಯಾರಿಕೆ
ಅಱಿಕೆ	೬	೧೦	ತಿಳಿಯುವಿಕೆ
ಅಱಿತ	೫	೪	ಜ್ಞಾನ
ಅಱುಹು (ಪು)	೨	೧೧	ತಿಳಿಸು
ಅಲಗು	೩	೧೭	ಕತ್ತಿ
ಅವಗಡಿಸು	೩	೧೬	ಪ್ರತಿಭಟಿಸು
ಅವಧರಿಸು	೨	೨೨	ಕೇಳು
ಅವಧಾರು	೧	೨	ಗಮನಕೊಡು
ಅವನಿ	೭	೧	ಭೂಮಿ
ಅವಮತಿ	೭	೧೮	ಅಪಮಾನ, ಮೂರ್ಖತನ
ಅವಸರ	೮	೧೯	ಸಮಯ
ಅವಸಾನ	೪	೧೯	ಸಾವು
ಅಳಲು	೮	೨೬	ದುಃಖ
ಅಳವು	೧	೨	ಸಾಮರ್ಥ್ಯ
ಅಳವಡಿಸು	೩	೧೨	ಹೊಂದಿಸಿಕೊಳ್ಳು, ಸಿದ್ಧಪಡಿಸಿಕೊಳ್ಳು
ಅಳಿ	೫	೨	ನಾಶವಾಗು
ಅಳ್ಳಿಱಿ	೯	೧೯	ಭೇದಿಸು
ಅಳುಕು	೩	೧೨	ಕುಗ್ಗು
ಅಳುಪು	೧	೪	ನಾಶಮಾಡು, ಅಳಿಸು
ಅಂಕ	೪	೪	ತೊಡೆ
ಅಂಗಚಿತ್ತ	೩	೩	ಬಹುಮಾನ
ಅಂಗವಟ್ಟ	೭	೪೯	ರೂಪು
ಅಂಜುಳಿ	೮	೪	ಬೊಗಸೆ
ಅಂತಕ	೬	೫೧	ಯಮ

ಅಂತರ್ಭಾವ	೫	೩೨	ಮನಸ್ಸಿನಲ್ಲಿರುವ ಭಾವ
ಅಂಧನೃಪ	೭	೪೯	ಕುರುಡು ದೊರೆ, ಧೃತರಾಷ್ಟ್ರ
ಅಂಬಕ	೨	೧೫	ಕಣ್ಣು
ಅಸ್ಮದಾದ್ಯರು	೬	೩೮	ನಮ್ಮಂಥವರು
ಅಸುರ	೧	೧	ರಾಕ್ಷಸ
ಅಸಿಧಾರೆ	೩	೧೯	ಕತ್ತಿಯ ಮೊನೆ
ಅಹಿತ	೫	೧	ಶತ್ರು

ಆ

ಆಖ್ಯೆ	೫	೩೬	ಹೆಸರು
ಆಜ್ಯ	೮	೧೮	ತುಪ್ಪ
ಆಟೋಪ	೫	೬	ಸಂಭ್ರಮ
ಆತುಕೊಳ್	೫	೭	ಸ್ವೀಕರಿಸು
ಆತ್ಮಜ	೮	೨೮	ಮಗ
ಆನು	೪	೧೬	ಪ್ರತಿಭಟಿಸು, ಇದಿರಿಸು
ಆಪು	೨	೨೫	ಸಮರ್ಥನಾಗು
ಆಮ್ನಾಯ	೯	೧೯	ವೇದ
ಆಯತ	೪	೨	ವಿಸ್ತಾರ
ಆರಯ್	೬	೨	ವಿಚಾರ ಮಾಡು
ಆರೋಗಣೆ	೨	೭	ಊಟ
ಆಲಿ	೩	೧೭	ಕಣ್ಣುಗುಡ್ಡೆ
ಆವಳಿ	೬	೩೨	ಸಾಲು
ಆವಿರ್ಭವಿಸು	೫	೧೩	ಹುಟ್ಟು
ಆಸ್ಯ	೭	೪೫	ಮುಖ
ಆಸೆವಾಸಿ	೭	೫೮	ಇಷ್ಟ ?
ಆಹವ	೨	೫	ಯುದ್ಧ
ಆಹ್ವಯ	೯	೧೦	ಹೆಸರುಳ್ಳ
ಆಳ್	೩	೭	ಶೂರ
ಆಳಾಪ	೭	೫	ಹರಟೆ
ಆಳಿಕಾಱ	೬	೨೦	ಮೋಸಗಾರ

ಇ

ಇಕ್ಕಲಿಸು	೨	೪	ಎರಡು ಕಡೆಯಿಂದಲೂ ಸೇರು
ಇಕ್ಕೆಲ	೬	೨೭	ಎರಡು + ಕೆಲ (ಪಕ್ಕ)

ಇಟ್ಟಳಿಸು	೫	೩೦	ದಟ್ಟವಾಗಿ
ಇತ್ತಂಡ	೨	೨೨	ಎರಡು+ತಂಡ (ಪಕ್ಷ)
ಇಭಪುರಿ	೩	೩೯	ಹಸ್ತಿನಾಪುರ
ಇಱಿ	೨	೨೭	ತಿವಿ, ಕೊಲ್ಲು
ಇಂದುಮೌಳಿ	೪	೧೩	ಚಂದ್ರನನ್ನು ತಲೆಯಲ್ಲಿ ಧರಿಸಿದವನು ಈಶ್ವರ
ಇಂದ್ರನಂದನ	೨	೧೧	ಇಂದ್ರನ ಮಗ, ಅರ್ಜುನ

ಈ

ಈಕ್ಷಿಸು	೫	೨೯	ನೋಡು
ಈಡಾಡು	೬	೮	ಎರಚಾಡು
ಈರಡಿ	೭	೧೯	ಎರಡು+ಅಡಿ (ಪಾದ)

ಉ

ಉಗಿ	೩	೩೬	ಎಳೆ, ಹೊರತೆಗೆ
ಉಗು	೬	೫	ಹೊರಸೂಸು
ಉಗ್ಗಡಣೆ	೬	೩೨	ಘೋಷಣೆ
ಉಚ್ಚಳಿಸು	೭	೨೨	ಊರು (ಧಾ)
ಉಜ್ಜೀವಿಸು	೨	೧೩	ಉದ್ಧರಿಸು, ಜೀವ ಕೊಡು
ಉತ್ತರಾಯಿ	೩	೩೫	ಉತ್ತರ ಕೊಡುವವನು
ಉಬ್ಬಾಳುತನ	೭	೪೭	ಶಕ್ತಿ
ಉಬ್ಬೇಳು	೪	೩	ಉಬ್ಬಿ+ಏಳು
ಉಮ್ಮಳಿಸು	೩	೧	ಸಂಕಟಪಡು
ಉರಗ	೫	೧೮	ಹಾವು
ಉರವಣಿಸು	೨	೧೦	ಅತಿಶಯವಾಗಿ ಹೊರಹೊಮ್ಮು
ಉಱುವ	೨	೨೭	ಶ್ರೇಷ್ಠ
ಉಲುಹು	೧	೪	ಶಬ್ದ

ಊ

ಊರು	೫	೧೫	ತೊಡೆ

ಎ

ಎಕ್ಕಟಿ	೩	೩೦	ಏಕಾಂತ
ಎಡೆಗಿ (ಕಿ) ಡು	೨	೧೦	ಸ್ಥಾನಪಲ್ಲಟವಾಗು

ಎದೆಗಿ (ಕಿ) ಚ್ಚು	೫	೫	ಹೊಟ್ಟೆಯುರಿ
ಎರಲ್	೫	೨೯	ಎಲರ್, ಗಾಳಿ
ಎರವಿಗ	೭	೪೨	ಅನ್ಯ
ಎಱಕ	೨	೨೭	ಪ್ರೇಮ
ಎಱಗು	೨	೨	ಮೇಲೆ ಬೀಳು
ಎಱತೆ	೫	೨೫	ಬೇಡು
ಎಸೆ	೨	೧೪	ಶೋಭಿಸು
ಎಳಸು	೫	೧೪	ಬಯಸು

ಐ

ಐಡಿಸು	೯	೨	ತಿರಸ್ಕರಿಸು
ಐಳಿಲ	೫	೪	ತಿರಸ್ಕಾರ

ಒ

ಒಕ್ಕತನ	೨	೬	ಸಂಸಾರ
ಒಗು	೩		ಬೀಳು
ಒಟ್ಟಿಲು	೮	೧	ಸಮೂಹ
ಒಡ್ಡವ	೧		ಪದಗಳ ಜೋಡಣೆ
ಒಡ್ಡಯಿಸು	೮	೨	ಹೇಳು, ಒಡ್ಡು
ಒಯ್ಯನೆ	೨	೧೫	ದಾನವಾಗಿ
ಒಯ್ಯಾರ	೫	೧೩	ಠೀವಿ, ಗತ್ತು
ಒಱಲು	೪	೫	ಗು
ಒಱತೆ	೨	೩೦	ಇಡುವ ಚೀಲ
ಒಲವರ	೬	೧೦	ತಿ
ಒಳ್ಳೆ	೭	೪೩	ಹಾವು

ಓ

ಓರಣ	೯	೧೪	ಸ
ಓರೆಗೆಡು	೩	೨೨	ಪ ಸರಿ
ಓವರಿ	೫	೨	ಕೆ
ಓವು	೨	೪	ಪ್ರಿ
ಓಳಿ	೬	೨೯	ಸಾ

ಕ

ಕರ್ಕಶ	೫	೪	ಕಠಿಣ, ಕ್ರೂರ
ಕಟಕ	೨	೩೨	ಸೈನ್ಯ
ಕಟ್ವಾಳು	೪	೧೪	ಶೂರ (ಕಡಿದು + ಆಳು)
ಕಡುಗು	೭	೨೭	ಉತ್ಸಾಹಗೊಳ್ಳು
ಕಡುಹು	೪	೨	ಶಕ್ತಿ, ಗರ್ವ
ಕದಡು	೨	೧೮	ಕಲಕು, ಉದ್ರೇಕಗೊಳ್ಳು
ಕದನ	೨	೨೨	ಯುದ್ಧ
ಕದಂಬ	೯	೧೮	ಸಮೂಹ
ಕಪಾಲ	೮	೧೯	ತಲೆಬುರುಡೆ
ಕಬರಿ	೫	೩೪	ತುರುಬು
ಕಬ್ಬಕ್ಕಿ	೭	೨೬	ಕರಿಯಹಕ್ಕಿ
ಕಮಠ	೭	೪೭	ಆಮೆ
ಕಮಲಜ	೨	೨೦	ಬ್ರಹ್ಮ
ಕರಣ	೬	೪೫	ಇಂದ್ರಿಯ
ಕಲ್ಪ	೩	೩೬	ಪ್ರಳಯ
ಕಲಿತನ	೫	೧೪	ಪರಾಕ್ರಮ
ಕವಳ	೭	೨೭	ಊಟ
ಕವಿ	೨	೧೦	ಮೇಲೆ ಬೀಳು
ಕಳನು	೯	೨೫	ಯುದ್ಧಭೂಮಿ
ಕಳರವ	೫	೪೪	ಮನೋಹರವಾದ ಶಬ್ದ
ಕಾತರಿಸು	೩	೩೭	ಉತ್ಸುಕತೆಯಿಂದ ಕೂಡು
ಕಾಯಜ	೮	೩೧	ಮನ್ಮಥ
ಕಾರ್ಮುಗಿಲ್	೫	೪೫	ಮಳೆಮೋಡ
ಕಿಬ್ಬದಿ	೩	೩೬	ಕೆಳಹೊಟ್ಟೆ
ಕುಡಿತೆ	೬	೧೧	ಬೊಗಸೆ
ಕುಠಾರ	೩	೩೪	ಕೊಡಲಿ, ದುಷ್ಟ
ಕುಮತಿ	೬	೪೦	ಕೆಟ್ಟ ಬುದ್ಧಿಯವನು
ಕುಸುಮಮಾರ್ಗಣ	೫	೧೭	ಹೂ ಬಾಣವುಳ್ಳವನು, ಮನ್ಮಥ
ಕೃಚ್ಛ್ರ	೧	೬	ಒಂದು ವಿಧದ ತಪಸ್ಸು
ಕೃತಾಂತ	೫	೩೯	ಯಮ
ಕೂರಸಿ	೪	೯	ಹರಿತವಾದ ಕತ್ತಿ
ಕೂರುಮೆ	೬	೫೦	ಪ್ರೀತಿ
ಕೆರಳು	೬	೪೬	ಕೋಪಗೊಳ್ಳು
ಕೇಶಾಳಿ	೫	೧೨	ಕೂದಲ ಗುಂಪು

ಕೇಸರಿ	೬	೪೨	ಸಿಂಹ
ಕೇಳಿ	೨	೧೪	ವಿನೋದ

ಖ

ಖತಿ	೨	೨೦	ಕೋಪ
ಖರ	೬	೬	ಕ್ರೂರ
ಖುರಪುಟ	೬	೬	ಕುದುರೆಯ ಗೊರಸು
ಖುಲ್ಲ	೨	೨೧	ದುಷ್ಟ, ನೀಚ

ಗ

ಗತಲೋಚನ	೬	೪೭	ಕಣ್ಣಿಲ್ಲದವನು, ಧೃತರಾಷ್ಟ್ರ
ಗದ್ದುಗೆ	೬	೨೪	ಪೀಠ
ಗನ್ನ	೭	೫೨	ಮೋಸ
ಗರ	೪	೧೨	ಗ್ರಹ (ಸಂ)
ಗರುವ	೬	೭	ಶ್ರೇಷ್ಠ, ದೊಡ್ಡ
ಗವಿ	೫	೧೩	ಹೊದಿಕೆ, ದಟ್ಟವಾಗಿರುವಿಕೆ
ಗಳಹು	೪	೧೨	ಹರಟು
ಗಾಡಿಕೆ	೬	೮	ಅತಿಶಯ
ಗಾವಳಿ	೬	೮	ಅಬ್ಬರ
ಗ್ಲಾನಿ	೮	೧೨	ಚಿಂತೆ, ವ್ಯಥೆ, ಆಯಾಸ
ಗುಡಿ	೩	೧	ಬಾವುಟ
ಗೊಣಸು	೬	೪೧	ಕುಣಿಕೆ
ಗಂಗಾಜಾತ	೫	೪೧	ಗಂಗೆಯ ಮಗ, ಭೀಷ್ಮ

ಘ

ಘಟಿಸು	೫	೧	ಉಂಟುಮಾಡು

ಚ

ಚಡಾಳಿಸು	೫	೨೨	ಹೆಚ್ಚಾಗು
ಚತುರಾನನ	೬	೨೫	ಬ್ರಹ್ಮ
ಚಮೂಪ	೬	೩೭	ಸೇನಾಪತಿ
ಚರ	೫	೯	ಸೇವಕ
ಚರಣ	೨	೧೫	ಪಾದ

ಚರು	೮	೧೮	ಹೋಮಕ್ಕಾಗಿ ಮಾಡಿದ ಅನ್ನ
ಚಾಮಿಾಕರ	೬	೨೩	ಚಿನ್ನ
ಚಾರು	೧	೨	ಮನೋಹರ
ಚಾಳಿಸು	೬	೨೨	ಹೋಗು, ಕಳೆ
ಚೌಕಿಗೆ	೩	೮	ಮನೆಯ ಒಳಅಂಗಳ
ಚಂದ್ರೋದಯ	೫	೨೯	ಚಂದ್ರನಾಡಿ ಆಡುವುದು
ಚಂಪೆಯ	೯	೨೭	?

ಜ

ಜಕ್ಕವಕ್ಕಿ	೫	೪೪	ಚಕ್ರವಾಕ ಪಕ್ಷಿ
ಜಗುಳ್	೨	೨೧	ಜಾರು
ಜಾಡ್ಯ	೩	೩೫	ರೋಗ
ಜಾಲ	೨	೧೨	ಸಮೂಹ
ಜಾಳಿಗೆ	೩	೧೭	ಸಮೂಹ
ಜಿನುಗು	೨	೧೩	ಗೊಣಗು
ಜೋಡೆ	೬	೨೧	ಹಾದರಗಿತ್ತಿ
ಜೌವನ	೩	೩೩	ಯೌವನ (ಸಂ)
ಜ್ಯೋತಿಷ್ಟೋಮ	೧	೬	ಒಂದು ಯಾಗ
ಜ್ವಾಲೆ	೩	೨೨	ಉರಿ
ಜಂಗಮ	೧	೨	ಚಲಿಸುವ

ಠ

ಠಾವು	೨	೧೩	ಸ್ಥಳ
ಠೀವಿ	೬	೪೫	ಗತ್ತು, ಬಿಂಕ

ಡ

ಡಿಂಬ	೪	೧೮	ದೇಹ

ತ

ತಣಿವು	೬	೯	ತೃಪ್ತಿ
ತರಳೆ	೫	೩೩	ಹೆಂಗಸು
ತಳಕಿಳಿ	೭	೨೦	ಪಾತಾಳಕ್ಕೆ ಇಳಿ
ತಳಿಗೆ	೯	೨೦	ತಟ್ಟೆ
ತಾಣ	೨	೧೩	ಸ್ಥಾನ (ಸಂ)

ತಾರಾಪರಿವೃತ	೬	೩೭	ನಕ್ಷತ್ರಗಳಿಂದ ಸುತ್ತುವರಿದ
ತಾಳಿಗೆ	೨	೨	ಅಂಗುಳು
ತಿದಿ	೩	೩೬	ಚರ್ಮ
ತಿರ	೭	೨೫	ಸ್ಥಿರ (ಸಂ)
ತೆಕ್ಕೆ	೩	೪	ಸಮೂಹ
ತೆಱಪು (ಪು)	೧	೩	ಅವಕಾಶ
ತೇಕು	೪	೧೨	ತೇಲಾಡು
ತೊಡರು	೬	೨೬	ಬಿರುದಿನ ಆಭರಣ
ತೊತ್ತು	೬	೪೫	ಸೇವಕ
ತೋರಹತ್ತ (ಸ್ತ)	೯	೧೪	ದೊಡ್ಡ ಕೈ
ತಿಂಥಿಣಿ	೧	೩	ಸಮೂಹ

ಥ

ಥಟ್ಟು	೨	೧೩	ಸಮೂಹ

ದ

ದಡ್ಡಿ	೫	೧೩	ತೆರೆ, ಪರದೆ
ದಧಿ	೫	೨೯	ಮೊಸರು
ದನುಜರಿಪು	೨	೨೯	ರಾಕ್ಷಸರ ಶತ್ರು, ಕೃಷ್ಣ
ದಶನ	೬	೫೧	ಹಲ್ಲು
ದಳ	೩	೪	ಸೈನ್ಯ
ದಾಡೆ	೯	೧೪	ದಂಷ್ಟ್ರಾ (ಸಂ), ಹಲ್ಲು
ದಾವ	೬	೩೫	ಕಾಡುಗಿಚ್ಚು
ದಾತಾರ	೧	೧	ದಾನಿ
ದಾನವಧ್ವಂಸಿ	೫	೬	ರಾಕ್ಷಸರನ್ನು ನಾಶಮಾಡಿದವನು, ಕೃಷ್ಣ
ದ್ವಿಜ	೧	೫	ಬ್ರಾಹ್ಮಣ
ದಿವಾಕರ	೮	೪	ಸೂರ್ಯ
ದಿಶಾಪಟ	೫	೩೦	ಶತ್ರುನಾಶಕ
ದುರ್ಗ	೭	೨	ಕೋಟೆ
ದುಗುಡ	೫	೫	ದುಃಖ
ದುಮ್ಮಾನಿಸು	೯	೨	ದುಗುಡಗೊಳ್ಳು
ದೂಱು	೯	೧೧	ಕರೆ
ದೂರ್ವ	೫	೨೯	ಗರಿಕೆ
ದೂಸಱು	೯	೬	ಕಾರಣ

ದೃಗುಜಲ	೮	೧೦	ಕಣ್ಣೀರು
ದೆಖ್ಖಾಳ	೯	೧೫	ಅತಿಶಯ
ದೇಸಿಗ	೪	೬	ಭಿಕಾರಿ
ದಂಡಿಗೆ	೫	೧೩	ಪಲ್ಲಕ್ಕಿ
ದಿಂಡುದಱಿ	೪	೧೪	ತುಂಡುತುಂಡು ಮಾಡು

ಧ

ಧನಂಜಯ	೨	೨೯	ಅರ್ಜುನ
ಧರಣೀಪಾಲ	೨	೯	ಭೂಮಿಗೆ ಒಡೆಯ, ದೊರೆ
ಧರಿತ್ರೀ	೨	೧	ಭೂಮಿ
ಧಾರ್ತರಾಷ್ಟ್ರ	೫	೧೨	೧ ಹಂಸ, ೨ ಧೃತರಾಷ್ಟ್ರನ ಮಕ್ಕಳು

ನ

ನಖ	೬	೩೭	ಉಗುರು
ನರ್ತಿಸು	೨	೧೨	ಕುಣಿ
ನಭ	೩	೧೭	ಆಕಾಶ
ನಯನವಾರಿ	೬	೧೮	ಕಣ್ಣೀರು
ನಲವು	೨	೮	ಪ್ರೇಮ
ನವೆ	೭	೨೧	ಸಣ್ಣನಾಗು
ನಸು	೫	೧೧	ಸ್ವಲ್ಪ
ನಳಿನನಾಭ	೩	೨೩	ಕೃಷ್ಣ
ನಳಿನವದನೆ	೫	೨೯	ಕಮಲಮುಖಿ
ನಾಭಿ	೭	೪೫	ಹೊಕ್ಕಳು
ನಿಕರ	೧	೧	ಸಮೂಹ
ನಿಕಾಯ	೬	೩೯	ಗುಂಪು
ನಿಖಿಳ	೨	೩	ಎಲ್ಲ
ನಿಗಮ	೬	೧೦	ವೇದ
ನಿರ್ಜರ	೪	೧೫	ದೇವತೆ
ನಿಯತ	೩	೬	ನಿಶ್ಚಯ
ನಿಯಾಮಿಸು	೬	೧೬	ಅಪ್ಪಣೆಮಾಡು
ನಿರ್ವೃತ	೩	೨೭	ಕುಶಲ
ನಿಸ್ಸಾಳ	೯	೧೨	ಭೇರಿ
ನಿಸ್ಸೀಮ	೯	೫	ಎಲ್ಲೆ ಇಲ್ಲದ, ಹೆಚ್ಚಾದ

ನಿಳಯ	೬	೩೦	ಮನೆ
ನೆಗಹು (ಪು)	೩	೪	ಎತ್ತು
ನೆಗಳು	೭	೧೩	ಮಾಡು
ನೆರವು	೨	೧೦	ಸಹಾಯ
ನೆರವಿ	೭	೪೨	ಗುಂಪು
ನೆರಹು	೬	೧೭	ಒಟ್ಟುಗೂಡಿಸು
ನೆಱವಣಿಗೆ	೯	೮	ಪೂರ್ಣತೆ
ನೆಲೆ	೨	೫	ಮನೋಭಿಪ್ರಾಯ
ನೇಣು	೭	೩೩	ಹಗ್ಗ
ನೇಮ	೩	೩೬	ಅಪ್ಪಣೆ
ನೇಹ	೬	೧೬	ಸ್ನೇಹ (ಸಂ)
ನೊರಜು	೭	೪೩	ಒಂದು ತೆರನಾದ ಕ್ರಿಮಿ
ನೊಸಲು	೬	೪೦	ಹಣೆ
ನೋನ್ (ಧಾ)	೫	೧೮	ವ್ರತಮಾಡು
ನಂಜು	೬	೩೪	ವಿಷ, ಹಾವು

ಪ

ಪಟ್ಟವಸ್ತ್ರ	೯	೨೭	ರೇಷ್ಮೆ ಬಟ್ಟೆ
ಪಡಿ	೪	೧೫	ಪ್ರತಿ (ಸಂ)
	೭	೨೯	ಆಹಾರ
ಪಡಿಗ	೬	೩	ಪೀಕದಾನಿ
ಪಡಿಹಾಱಿಕೆ	೨	೩೪	ಬಾಗಿಲ ಕಾಯುವಿಕೆ
ಪತಾಕೆ	೫	೪೧	ಬಾವುಟ
ಪತಿಕರಿಸು	೯	೫	ಸಹಾಯಮಾಡು, ಅನುಗ್ರಹಿಸು
ಪಥ	೭	೨೦	ದಾರಿ
ಪನ್ನಗ	೩	೩೯	ಹಾವು
ಪಯೋಬಿಂದು	೬	೧೦	ಹಾಲಿನ ಹನಿ
ಪರಿಣತ	೧	೫	ವಿದ್ವಾಂಸ
ಪರುಠವ	೩	೮	ವಿಸ್ತಾರ
ಪಲಾಯನ	೪	೮	ಓಟ
ಪವಡಿಸು	೬	೩೪	ಮಲಗು
ಪವನಜ	೫	೧೨	ಭೀಮ
ಪವಮಾನ	೭	೨೯	ವಾಯು
ಪಸರಿಸು	೬	೧೨	ಪ್ರಸರಿಸು (ಸಂ)

ಪ್ರತಿಪನ್ನತೆ	೩	೨೯	ಜಾಣ್ಮೆ
ಪ್ರಭೆ	೬	೨೨	ಕಾಂತಿ
ಪ್ರಮತಿ	೫	೧೮	ಗೊತ್ತಾದ ತಿಳಿವು
ಪಾತಕ	೩	೪೧	ಪಾಪ
ಪಾರ್ಥಿವ	೨	೨೨	ಕ್ಷತ್ರಿಯ
ಪಾಲ್ಗ(ಕ)ಡಲ್	೬	೧೦	ಹಾಲಿನ ಸಮುದ್ರ
ಪಾವಕ	೩	೨೩	ಅಗ್ನಿ
ಪಾವುಡ	೫	೨೬	ಪ್ರಾಭೃತ (ಸಂ), ಬಟ್ಟೆ
ಪುರಾಕೃತ	೭	೫	ಹಿಂದೆ ಮಾಡಿದ
ಪುರುಷಾರ್ಥ	೬	೧	ಧರ್ಮ, ಅರ್ಥ, ಕಾಮ, ಮೋಕ್ಷ
ಪುಳಕ	೬	೭	ರೋಮಾಂಚ
ಪೃಥ್ವೀಪಾಲ	೬	೨೩	ದೊರೆ
ಪೊಡವಿ	೩	೪೭	ಭೂಮಿ
ಪೌರಂದರ	೩	೨೩	ಇಂದ್ರ
ಪಂಥ	೫	೧೮	ಹಟ
ಪಂಕಜಮುಖಿ	೩	೨೮	ಕಮಲಮುಖಿ

ಫ

ಫಣಿಕೇತನ	೭	೨೫	ಸರ್ಪವೇ ಬಾವುಟವಾಗುಳ್ಳವನು, ದುರ್ಯೋಧನ
ಫಣಿರಾಯ	೧	೧	ಸರ್ಪಗಳ ದೊರೆ, ಆದಿಶೇಷ

ಬ

ಬಗೆದ (ತ) ಣಿ	೩	೧೧	ಮನಸ್ಸು ತೃಪ್ತಿಗೊಳ್ಳು
ಬಣಗು	೧	೩	ಸಾಮಾನ್ಯ, ಅಪ್ರಯೋಜಕ
ಬಱಿದು	೨	೩೦	ವ್ಯರ್ಥವಾಗಿ
ಬಲವಂದು	೫	೨೯	ಪ್ರದಕ್ಷಿಣೆಮಾಡು,ಬಲವರ್(ಧಾ)
ಬಲ್ಲಾಳದಡ್ಡಿ	೯	೨೭	?
ಬಲುಹು	೪	೨೪	ಸಾಮರ್ಥ್ಯ
ಬವರ	೪	೫	ಯುದ್ಧ
ಬಳಾಹಕ	೫	೧೩	ಮೇಘ
ಬಾಣಸ	೩	೧೮	ಅಡಿಗೆ
ಬಾಹಿರ	೩	೪೮	ಹೊರಗಾದವನು
ಬಿಜಯಂಗೆಯ್	೩	೧೨	ದಯಮಾಡಿಸು

ಬಿದಿರು	೭	೪೭	ಬಿರುಕುಬಿಡು
ಬಿನ್ನಪ	೧	೨	ವಿಜ್ಞಾಪನಾ (ಸಂ)
ಬೀಯ	೩	೨೦	ಆಹಾರ
ಬಿಸಜಬಂಧು	೮	೨೯	ಕಮಲದ ನಂಟ, ಸೂರ್ಯ
ಬಿಸಜಲೋಚನ	೬	೪೩	ಕಮಲದಂತೆ ಕಣ್ಣುಳ್ಳವ ಕೃಷ್ಣ
ಬಿಸುಸುಯಿಲು	೫	೨೨	ನಿಟ್ಟುಸಿರು
ಬೆಟ್ಟಿತು	೪	೬	ಕಠಿಣವಾಗು
ಬೇಹು	೨	೧೧	ಗೂಢಚಾರತನ
ಬೊಪ್ಪ	೩	೩೬	ತಂದೆ
ಬೋವತನ	೨	೩೪	ಸಾರಥಿತನ
ಬೋಳೆಯರ್	೭	೨೩	ದೇವತೆಗಳು
ಬಂಧುರ	೬	೨೬	ಮನೋಹರವಾದ

ಭ

ಭಟ	೬	೨೨	ಸೇವಕ
ಭರಣ	೨	೪	ಪೋಷಣೆ
ಭವ	೬	೩೩	ಜನ್ಮ, ಹುಟ್ಟು
ಭವನ	೬	೪	ಮನೆ
ಭ್ರಾಂತಿಯೋಗ	೨	೧೪	?
ಭಾಸು	೮	೩	ಸೂರ್ಯ
ಭಾಳ	೫	೨೩	ಹಣೆ
ಭೀಮ	೫	೧೭	೧) ಕುಂತಿಯಮಗ ೨) ಭಯಂಕರ, ೩) ಈಶ್ವರ
ಭುವನ	೮	೧೫	ಲೋಕ
ಭ್ರೂ	೫	೧೨	ಹುಬ್ಬು
ಭೂತಳ	೭	೮	ಭೂಮಿ
ಭೂರಿ	೨	೧೯	ಅತಿಶಯ
ಭೃತ್ಯ	೨	೩೩	ಸೇವಕ
ಭೇದಿಸು	೨	೧೧	ಗುಟ್ಟನ್ನು ತಿಳಿ
ಭಂಡಾರಿಸು	೨	೨೮	ಬೆಂಡಾಗಿ ಹೋಗು

ಮ

ಮಕುಟ	೩	೨೨	ಕಿರೀಟ
ಮಖಸಮುದ್ಭವೆ	೩	೨೮	ಯಜ್ಞದಲ್ಲಿ ಹುಟ್ಟಿದವಳು, ದ್ರೌಪದಿ

ಮಗುಳಿಚು	೩	೧೩	ಹಿಂದಿರುಗಿಸು
ಮಣಿಹಾಱ	೯	೧೧	ಅರಮನೆಯ ಮುಖ್ಯಾಧಿಕಾರಿ
ಮತ	೨	೨೪	ಅಭಿಪ್ರಾಯ
ಮರ್ತ್ಯ	೩	೫	ಮನುಷ್ಯ
ಮತ್ಸರ	೮	೨೨	ಹೊಟ್ಟೆಯುರಿ, ದ್ವೇಷ
ಮಥನ	೧	೧	ಕಡೆಯುವಿಕೆ, ನಾಶ
ಮನಕತ	೭	೨೩	ದುಃಖ
ಮನ್ನೆಯ	೩	೨೪	ಮಾನ್ಯ (ಸಂ)
ಮನುಜೀವಾಹಿ	೭	೬	ನನ್ನ ಪ್ರಾಣಗಳಲ್ಲವೆ ?
ಮಸಗು	೬	೯	ಕೋಪಗೊಳ್ಳು
ಮಸುಳ್	೫	೧೧	ಮಂಕಾಗು
ಮರೀಚಿ	೬	೬	ಕಾಂತಿ
ಮಹೀಶ	೬	೧೬	ದೊರೆ
ಮಹೀಮಾತಿರೇಕ	೬	೭	ಅತಿಶಯವಾದ ಮಹಿಮೆಯುಳ್ಳವನು
ಮುಕುಳ	೨	೧೫	ಮೊಗ್ಗು, ಮುಚ್ಚಿದ
ಮುಕ್ಕಳಿಸು	೬	೩೬	ನಾಶಮಾಡು
ಮುದ	೨	೧೧	ಸಂತೋಷ
ಮುರಿ	೭	೪೪	ತಿರುಗು
ಮುಱು	೩	೧೫	ನಾಶಮಾಡು
ಮೂಡಣಾದ್ರಿ	೬	೨೨	ಪೂರ್ವದಿಕ್ಕಿನ ಬೆಟ್ಟ
ಮೂರ್ಧಾಭಿಷೇಕ	೯	೨೦	ತಲೆಯಮೇಲೆ ನೀರೆರೆಯುವುದು
ಮೇದಿನಿ	೧	೬	ಭೂಮಿ
ಮೇಳ	೨	೧೭	ಜೋಡಣೆ, ಹೊಂದಿಕೆ
ಮೈಗೊಡು	೩	೧	ವಶನಾಗು
ಮೈಯಿಕ್ಕು	೩	೨೪	ನಮಸ್ಕರಿಸು
ಮೊದಲ್	೮	೨	ಮೂಲ
ಮೊಳಗು	೫	೧೨	ಗುಡುಗು
ಮೋಹರ	೨	೧೦	ಸೈನ್ಯ
ಮಂಡಲ	೩	೨೩	ರಾಷ್ಟ್ರ
ಮಂಡಳಿಕ	೩	೨೪	ಸಾಮಂತರಾಜ
ಮಂಡವಿಗೆ	೩	೮	ಮಂಟಪ
ಮಂಡಿಸು	೨	೧೫	ಕುಳಿತುಕೊ
ಮಂದಮತಿ	೨	೩೦	ಮೂರ್ಖ
ಮಂದಿರ	೫	೪೧	ಮನೆ

ಮುಂಬಟ್ಟೆ	೫	೩೬	ಮುಂದಿನ ದಾರಿ

ಯ

ಯಮಜ	೭	೧೧	ಧರ್ಮರಾಜ
ಯಾತನೆ	೩	೩೭	ತೊಂದರೆ, ಕಷ್ಟ
ಯುಗಳ	೨	೧೪	ಜೊತೆ

ರ

ರತುನ	೬	೪	ರತ್ನ (ಸಂ)
ರಮಣ	೨	೧	ಗಂಡ
ರಾಜೀವನಾಭ	೫	೧೦	ಕೃಷ್ಣ
ರಾಜೀವಪೀಠ	೧	೧	ಬ್ರಹ್ಮ
ರಾಜೀವಲೋಚನ	೫	೯	ಕೃಷ್ಣ
ರಾಜೀವಸಖ	೮	೧೯	ಸೂರ್ಯ
ರಾಯಸ	೯	೧೩	ಅಧಿಕಾರಿಯ ಓಲೆ
ರೀತಿ	೧	೪	ಕಾವ್ಯಮಾರ್ಗ, ಶೈಲಿ
ರೂಢಿ	೬	೨೧	ಲೋಕ
ರುಧಿರ	೪	೧೧	ರಕ್ತ
ರೇಣು	೬	೬	ಧೂಳ ಕಣ
ರೋಷಚ್ಯುತ	೫	೧೬	ಕೋಪವಿಲ್ಲದ
ರೌರವ	೫	೧೬	ನರಕ, ಹೇಯ

ಲ

ಲತಾಂಗಿ	೨	೧	ಹೆಂಗಸು
ಲಲನೆ	೫	೬	ಹೆಂಗಸು
ಲಲಾಮ	೭	೧೫	ಶ್ರೇಷ್ಠ
ಲಾಘವ	೨	೮	ಅಗೌರವ
ಲಿಪಿಕಾರ	೧	೨	ಬರೆಹಗಾರ
ಲೆಕ್ಕಿಸು	೧	೩	ಲಕ್ಷಿಸು (ಸಂ) ಗಣನೆಗೆ ತರು
ಲೋಗ	೩	೧೨	ಲೋಕ (ಸಂ) ಅನ್ಯ, ಬೇರೆಯವ
ಲೋಚನ	೨	೧೪	ಕಣ್ಣು
ಲೋಭ	೭	೧೫	ಆಸೆ
ಲೋಲುಪತೆ	೬	೧೨	ಅತ್ಯಾಸೆ

ವ

ವಜ್ರಹತಿ	೭	೩೭	ವಜ್ರಾಯುಧದ ಹೊಡೆತ
ವನನಿಧಿ	೭	೨೩	ಸಮುದ್ರ, [ವನ-ನೀರು]
ವನಿತೆ	೧	೧	ಹೆಂಗಸು
ವಲ್ಲಭ	೬	೯	ಗಂಡ
ವಸತಿ	೬	೯	ಮನೆ
ವಸುಮತಿ	೬	೯	ಭೂಮಿ
ವಹಿಲ	೨	೯	ಬೇಗ
ವ್ಯತಿಕರ	೫	೧೬	ಪರಸ್ಪರ ವಿರೋಧ
ವ್ಯಪಗತಾರಿ	೯	೧೭	ಹಗೆಯಿಲ್ಲದವನು
ವಾನಪ್ರಸ್ಥ	೩	೩೨	ಕಾಡಿನಲ್ಲಿ ವಾಸಮಾಡುವಿಕೆ (ಮೂರನೆಯ ಆಶ್ರಮ)
ವಾಮಕರ	೫	೨೩	ಎಡಗೈ
ವಾರಣ	೩	೧೩	ಆನೆ
ವಾರಿ	೩	೩೪	ನೀರು
ವಾರಿಧಿ	೬	೩೬	ಸಮುದ್ರ
ವಾರಿಜೋದರ	೬	೩೬	ಕೃಷ್ಣ
ವಿಕಳ	೨	೧೫	ವಕ್ರ
ವಿಗಡ	೬	೪೯	ದೊಡ್ಡ, ಮಹತ್ತುಳ್ಳ
ವಿಗ್ರಹ	೫	೨೬	ಯುದ್ಧ
ವಿಡಾಯಿ	೬	೨೯	ಠೀವಿ
ವಿತತ	೫	೪೨	ಹೆಚ್ಚಾದ
ವಿನೂತನ	೧	೧	ಹೊಸದಾದ
ವಿಪಿನ	೫	೩೪	ಕಾಡು
ವಿಬುಧ	೯	೨೧	ವಿದ್ವಾಂಸ
ವಿಭವ	೭	೩	ವೈಭವ
ವಿರಹಿ	೧	೫	ಅಗಲಿದವರು
ವಿರಂಚನ	೩	೨೧	ಬ್ರಹ್ಮ
ವಿಲಗ	೨	೩	ಹೊಂದಿಕೆಯಿಲ್ಲದ
ವಿಸಟಂಬರಿ	೩	೪	ಸ್ವೇಚ್ಛೆಯಾಗಿ ಹರಿದಾಡು
ವೃಕೋದರ	೯	೧೩	ಭೀಮ
ವೆಗ್ಗಳಿಸು	೩	೨೨	ಅತಿಶಯವಾಗು
ವೈತಾಳಿಕ	೯	೨೧	ಹೊಗಳುಭಟ್ಟ
ವೈರೋಚನಿ	೨	೩೪	ಬಲಿ
ವೈಹಾಳಿ	೯	೧೨	ಕುದುರೆ ಸವಾರಿ

ವಂಕ	೩	೨೧	ಪಕ್ಕ
ವೃಂದ	೨	೮	ಸಮೂಹ

ಶ

ಶರ	೪	೨೦	ಬಾಣ
ಶರಧಿ	೬	೧೧	ಸಮುದ್ರ
ಶ್ರವಣ	೧	೧	ಕಿವಿ, ಕೇಳುವಿಕೆ
ಶಶಿ	೫	೧೪	ಚಂದ್ರ
ಶಿಥಿಲ	೩	೩	ಸಡಿಲ
ಶಿಷ್ಟ	೨	೫	ಸಜ್ಜನ
ಶೀತಲ	೫	೬	ತಂಪಾದ
ಶ್ರುತಿ	೨	೧೩	ವೇದ
ಶೌರಿ	೬	೨	ಕೃಷ್ಣ

ಷ

ಷಡುರಸ	೬	೪೪	ಆರು ರಸಗಳು (ಉಪ್ಪು, ಹುಳಿ ಕಾರ, ಕಹಿ, ಸಿಹಿ, ಒಗರು)

ಸ

ಸಖ	೨	೧೮	ಸ್ನೇಹಿತ
ಸಖ್ಯ	೭	೬	ಸ್ನೇಹ
ಸಪ್ತಾಂಗ	೭	೨	ರಾಜ್ಯದ ಏಳು ಅಂಗಗಳು
ಸಮಯ	೩	೫	ಅವಕಾಶ
ಸಮರ	೪	೧೭	ಯುದ್ಧ
ಸಮೀರ	೫	೧೪	ವಾಯು
ಸವೆ	೬	೪	ಸಿದ್ಧಪಡಿಸು
ಸ್ಥಾವರ	೫	೩೨	ಸ್ಥಿರವಾದ, ಚಲಿಸದ
ಸಿತ	೫	೩೦	ಬಿಳಿಯ
ಸುಧಾ	೧	೧	ಅಮೃತ
ಸೀಮೆ	೨	೧೫	ಪ್ರದೇಶ
ಸುಮ್ಮಾನ	೫	೧೧	ಸಂತೋಷ
ಸುರ	೪	೧೭	ದೇವತೆ
ಸುರಚಾಪ	೫	೧೨	ಕಾಮನಬಿಲ್ಲು
ಸುರತರು	೮	೨೫	ಕಲ್ಪವೃಕ್ಷ

ಸುರಗಿ	೨		ಕತ್ತಿ
ಸುಷುಪ್ತಿ	೨	೧೪	ಗಾಢನಿದ್ದೆ
ಸೂನು	೨	೧೬	ಮಗ
ಸೂರಿಯ	೮	೯	ಸೂರ್ಯ
ಸೂಳವಿಸು	೯	೧೨	ದೊಡ್ಡದಾಗಿ ಸೇರು
ಸೆಜ್ಜೆ	೨	೭	ಶಯ್ಯಾ (ಸಂ) ಹಾಸಿಗೆ
ಸೆಣಸು	೬	೪	ಸ್ಪರ್ಧೆ
ಸೆರೆ	೮	೧೦	ಕುತ್ತಿಗೆಯ ಮೇಲಿನ ನರ
ಸೈವೆಱಗಾಗು	೯	೨೯	ಆಶ್ಚರ್ಯಪಡು
ಸೋದಿಸು	೨	೭	ಶೋಧಿಸು
ಸೋಮ	೯	೨೪	ಚಂದ್ರ
ಸಂಗರ	೪	೧೭	ಯುದ್ಧ
ಸಂಗ್ರಾಮ	೫	೨	ಯುದ್ಧ
ಸಂಘಾತ	೫	೩೨	ಸಮೂಹ
ಸಂತತಿ	೪	೧೭	ವಂಶ
ಸಂತರಿಸು	೨	೨೫	ಕಾಪಾಡು
ಸಂತಸ	೨	೨೦	ಸಂತೋಷ (ಸಂ)
ಸಂತೈಸು	೩	೩೭	ಸಮಾಧಾನಪಡಿಸು
ಸಂದಣಿ	೫	೪೬	ಸಮೂಹ
ಸಂದೋಹ	೬	೩೭	ಸಮೂಹ
ಸಂಪ್ರತಿ	೬	೩೧	ಸಂಧಿ
ಸಿಂಧ	೯	೨೩	ಬಾವುಟ
ಸಿಂಧು	೨	೧	ಸಮುದ್ರ

ಹ

ಹಕ್ಕೆ	೭	೨೩	ಹಾಸಿಗೆ
ಹಚ್ಚಡಿಸು	೬	೩	ಹಾಸು
ಹದನು	೨	೧೧	ಸ್ಥಿತಿ, ರೀತಿ
ಹದುಳ	೨	೬	ಕ್ಷೇಮ
ಹಮ್ಮು	೭	೧೨	ಗರ್ವ
ಹಯ	೩	೮	ಕುದುರೆ
ಹರಣ	೨	೪	ಪ್ರಾಣ (ಸಂ)
ಹರಿ	೬	೩೦	೧ ಕೃಷ್ಣ ೨ ಕುದುರೆ
ಹರಿಬ	೫	೧೮	ಕರ್ತವ್ಯ
ಹರಿಣೀಜಾಲ	೨	೧೨	ಜಿಂಕೆಗಳ ಗುಂಪು

ಹಲಧರ	೭	೪೯	ನೇಗಿಲನ್ನು ಆಯುಧವಾಗಿ ಉಳ್ಳವನು, ಬಲರಾಮ
ಹವಣು	೬	೧೯	ಪ್ರಮಾಣ
ಹಸರಿಸು	೩	೩೫	ಪ್ರಸರಿಸು, ಹರಡು
ಹಸಾದ	೮	೮	ಪ್ರಸಾದ (ಸಂ) ಏನಪ್ಪಣೆ
ಹಳವಿಗೆ	೬	೨೯	ಬಾವುಟ
ಹಳಿವು	೫	೩	ನಿಂದೆ
ಹಳುವ	೩	೩೫	ಕಾಡು
ಹಾರು	೩	೯	ನಿರೀಕ್ಷಿಸು
ಹಿಮಾಂಶು	೬	೧೫	ಚಂದ್ರ
ಹಿಸುಣು	೨	೫೧	ಚಾಡಿ
ಹುರುಳು	೪	೨೧	ಶಕ್ತಿ
ಹೂಳು	೫	೩೮	ಮುಚ್ಚು
ಹೆಗ್ಗಾಳೆ	೯	೨೦	ದೊಡ್ಡ ಕಹಳೆ
ಹೇಮ	೫	೪೫	ಬಂಗಾರ
ಹೇರಾಳ	೩	೧೭	ಅತಿಶಯ
ಹೊಗರು	೩	೧೩	ಕಾಂತಿ
ಹೊದಱು	೩	೪೪	ಪೊದೆ
ಹೊನ್ನು	೩	೩೯	ಚಿನ್ನ
ಹೊರೆ	೩	೧೩	ಸಮೀಪ
ಹೊಱವಳಯ	೫	೪೪	ವರಪ್ರದೇಶ
ಹೊಲಬು	೬	೧೨	ದಾರಿ
ಹೊಲ್ಲೆಹ	೩	೩೭	ಕೆಟ್ಟ
ಹೊಳಲು	೫	೨೯	ಪಟ್ಟಣ
ಹೊಳ್ಳು	೪	೧೬	ಪೊಳ್ಳು
ಹಂಗ	೨	೧೨	ಒಂದು ಪಕ್ಷಿ, ಇದು ಬಲಕ್ಕೆ ಬಂದರೆ ಶಕುನವಂತೆ
ಹಂಗು	೨	೩೨	ದಾಕ್ಷಿಣ್ಯ

ಕನ್ನಡ ಐಚ್ಛಿಕ ವಿದ್ಯಾರ್ಥಿಗಳಿಗೆ ಉಪಯುಕ್ತ ಗ್ರಂಥಗಳು

ಕನ್ನಡ ಸಾಹಿತ್ಯ ಚರಿತ್ರೆ : ಒಂದು ಸಮೀಕ್ಷೆ	ತ. ಸು. ಶಾಮರಾಯ	೪-
ಅಜಿತ ಪುರಾಣ ಸಂಗ್ರಹ	ತ. ಸು. ಶಾಮರಾಯ, ನಂಜೇಗೌಡ	೩-
ವಿಮರ್ಶೆಯ ಪೂರ್ವ ಪಶ್ಚಿಮ	ಜಿ. ಎಸ್. ಶಿವರುದ್ರಪ್ಪ	೩-
ಸೌಂದರ್ಯ ಸಮೀಕ್ಷೆ	ಜಿ. ಎಸ್. ಶಿವರುದ್ರಪ್ಪ	೨೦-
ಬಸವರಾಜದೇವರರಗಳೆ	ಟಿ. ಎಸ್. ವೆಂಕಣ್ಣಯ್ಯ	೩-
ಮಹಾಕಾವ್ಯ ಲಕ್ಷಣ	ಟಿ. ವಿ. ವೆಂಕಟಾಚಲಶಾಸ್ತ್ರೀ	೩-
ಇಲಿಯಡ್	ಎಲ್. ಎಸ್. ಶೇಷಗಿರಿರಾಯ	೪-
ಚಿತ್ರಾಂಗದಾ ಸಮೀಕ್ಷೆ	ಎಂ. ಸಿ. ವಸಂತಕುಮಾರ್	೪-
ಸಾಹಿತ್ಯ ಮತ್ತು ಮನೋವಿಜ್ಞಾನ	ಸಿ. ಪಿ. ಕೆ.	೪
ಉದ್ಯೋಗಪರ್ವ ಸಂಗ್ರಹ	ತ. ಸು. ಶಾಮರಾಯ	೨-
ಸಭಾಪರ್ವ ಸಂಗ್ರಹ	ತ. ಸು. ಶಾಮರಾಯ	೪-
ಕಾವ್ಯವಿಚಾರಸಾರ	ಸಿ. ಪಿ. ಕೆ.	೪

ಜನಪದ ಸಾಹಿತ್ಯ

ಜಾನಪದ ಸ್ವರೂಪ	ಹಾ. ಮಾ. ನಾಯಕ	೩-
ಜಾನಪದ ಪ್ರತಿಭೆ	ಸಿ. ಪಿ. ಕೆ.	೩-
ಕರ್ಣಾಟಕ ಜಾನಪದ ಕಥೆಗಳು	ರಾ. ಗೌ.	೧೦-
ಬೆಟ್ಟದ ಚಾಮುಂಡಿ	ರಾಜಶೇಖರ	೪-

ತ. ವೆಂ. ಸ್ಮಾರಕ ಗ್ರಂಥಮಾಲೆ, ಕೃಷ್ಣಮೂರ್ತಿಪುರಂ,
ಮೈಸೂರು-೪